ಕರ್ನಾಟಕ ಸರ್ಕಾರ

ಕೊಡಗು ಜಿಲ್ಲಾ ಪಂಚಾಯತ್, ಮಡಿಕೇರಿ

ವಾರ್ಷಿಕ ಆಡಳಿತ ವರದಿ 2019-20

ಓಂಕಾರೇಶ್ವರ ದೇವಾಲಯ



ಇರ್ಪು ಫಾಲ್ಸ್



ಹಾರಂಗಿ ಜಲಾಶಯ

ಕಾವೇರಿ ನಿಸರ್ಗದಾಮ


ಕೊಡಗು ಜಿಲ್ಲೆ
ಹಾಸನ ಜಿಲ್ಲೆ
ದಕ್ಷಿಣ ಕನ್ನಡ ಜಿಲ್ಲೆ
ಕಾಸರಗೋಡು ಜಿಲ್ಲೆ
ಕಣ್ಣೂರು ಜಿಲ್ಲೆ
ವಯನಾಡ್ ಜಿಲ್ಲೆ
ಮೈಸೂರು ಜಿಲ್ಲೆ
ಸೋಮವಾರಪೇಟೆ
ಮಡಿಕೇರಿ
ವಿರಾಜಪೇಟೆ
ವಿಷಯ ಸೂಚಿ
ಜಿಲ್ಲಾ ಗಡಿ
ನದಿ
ಜಲಾಶಯ
ಜಿಲ್ಲಾ ಮುಖ್ಯ ರಸ್ತೆ
ಮಡಿಕೇರಿ
ಸೋಮವಾರಪೇಟೆ
ವಿರಾಜಪೇಟೆ
KSCST
ತಯಾರಿಸಿದವರು:
ಜಿಲ್ಲಾ ಎನ್.ಆರ್.ಡಿ.ಎಂ.ಎಸ್ ಕೇಂದ್ರ
ಕೊಡಗು ಜಿಲ್ಲಾ ಪಂಚಾಯತ್
ಮಡಿಕೇರಿ
0 5 10 20
ಕಿಲೋಮೀಟರ್
75°26'40"E
75°36'45"E
75°46'50"E
75°56'55"E
76°7'0"E
12°51'0"N
12°40'55"N
12°30'50"N
12°20'45"N
12°10'40"N
12°0'35"N
11°50'30"N

ಕೊಡಗು ಜಿಲ್ಲಾ ಪಂಚಾಯತ್

ಮುನ್ನುಡಿ

ಕೊಡಗು ಜಿಲ್ಲಾ ಪಂಚಾಯತ್ ವತಿಯಿಂದ ಇದುವರೆಗೆ ನಿರಂತರವಾಗಿ ಪ್ರತಿ ವರ್ಷ ಆಡಳಿತ ವರದಿಗಳನ್ನು ಹೊರತರಲಾಗಿದೆ. ಹಾಗೆಯೇ ಪ್ರಸ್ತುತ 2019–20ನೇ ಸಾಲಿನ ವಾರ್ಷಿಕ ಆಡಳಿತ ವರದಿಯನ್ನು ಹೊರತರುತ್ತಿರುವುದು ಹರ್ಷವೆನಿಸುತ್ತದೆ.

2019–20ನೇ ಸಾಲಿನಲ್ಲಿ ಕೊಡಗು ಜಿಲ್ಲಾ ಪಂಚಾಯತಿ ವತಿಯಿಂದ ರಾಜ್ಯ ಮತ್ತು ಕೇಂದ್ರ ವಲಯದ ಅನುದಾನವನ್ನು ವಿನಿಯೋಗಿಸಿ ಅನುಷ್ಠಾನಗೊಳಿಸಲಾದ ಅಭಿವೃದ್ಧಿ ಕಾರ್ಯಕ್ರಮಗಳ ಆರ್ಥಿಕ ಮತ್ತು ಭೌತಿಕ ಗುರಿ, ಸಾಧನೆ ಹಾಗೂ ಇಲಾಖಾವಾರು ಕಾರ್ಯಕ್ರಮಗಳ ವಿವರಗಳನ್ನೊಳಗೊಂಡಂತೆ ಈ ಹೊತ್ತಿಗೆಯನ್ನು ಹೊರ ತರಲಾಗಿದೆ. ಪ್ರಕಟಣೆಯನ್ನು ಹೊರ ತರುವಲ್ಲಿ ಸೂಕ್ತ ಸಲಹೆ ಮಾರ್ಗದರ್ಶನ ಹಾಗೂ ಸಹಕಾರ ನೀಡಿದ ಎಲ್ಲಾ ಚುನಾಯಿತ ಪ್ರತಿನಿಧಿಗಳಿಗೆ ಅಭಿನಂದನೆ ಸಲ್ಲಿಸುತ್ತಾ, ಸಕಾಲದಲ್ಲಿ ತಮ್ಮ ಇಲಾಖೆಗಳ ಮಾಹಿತಿ ನೀಡಿದ ಜಿಲ್ಲೆಯ ಅನುಷ್ಠಾನ ಅಧಿಕಾರಿಗಳು ಹಾಗೂ ಈ ಹೊತ್ತಿಗೆಯನ್ನು ಹೊರತಲು ಶ್ರಮಿಸಿದ ಮುಖ್ಯ ಯೋಜನಾಧಿಕಾರಿಗಳು, ಸಹಾಯಕ ಸಾಂಖ್ಯಿಕ ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರ ಕಾರ್ಯ ಶ್ಲಾಘನೀಯ.

ಈ ಹೊತ್ತಿಗೆಯ ಪ್ರಯೋಜನ ಎಲ್ಲರಿಗೂ ಲಭಿಸಲಿ ಎಂದು ಆಶಿಸುತ್ತಾ,

ವಂದನೆಗಳೊಂದಿಗೆ,

ಶ್ರೀಮತಿ ಕೆ. ಲಕ್ಷ್ಮೀಪ್ರಿಯಾ ಭಾ.ಆ.ಸೇ
ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ
ಕೊಡಗು ಜಿಲ್ಲಾ ಪಂಚಾಯತ್
ಮಡಿಕೇರಿ

ಶ್ರೀಮತಿ ಲೋಕೇಶ್ವರಿ ಗೋಪಾಲ್
ಉಪಾಧ್ಯಕ್ಷರು
ಕೊಡಗು ಜಿಲ್ಲಾ ಪಂಚಾಯತ್

ಶ್ರೀ ಬಿ.ಎ. ಹರೀಶ್
ಅಧ್ಯಕ್ಷರು
ಕೊಡಗು ಜಿಲ್ಲಾ ಪಂಚಾಯತ್

ಕೊಡಗು ಜಿಲ್ಲಾ ಪಂಚಾಯತ್ ಸ್ಥಾಯಿ ಸಮಿತಿ ಅಧ್ಯಕ್ಷರು ಹಾಗೂ ಸದಸ್ಯರು

KODAGU ZILLA PANCHAYATH STANDING COMMITTEE PRESIDENT & MEMBERS

ಶ್ರೀ ಎನ್.ಟಿ. ಕಿರಣ್ ಕಾರ್ಯಪ್ಪ
Sri N.T. Kiran Karyappa
ಅಧ್ಯಕ್ಷರು
ಶಿಕ್ಷಣ ಮತ್ತು ಆರೋಗ್ಯ ಸಮಿತಿ

ಶ್ರೀ ಸಿ.ಕೆ. ಬೋಪಣ್ಣ
Sri C.K. Bopanna
ಅಧ್ಯಕ್ಷರು
ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ

ಶ್ರೀಮತಿ ಸರೋಜಮ್ಮ
Smt. Sarojamma
ಅಧ್ಯಕ್ಷರು
ಕೃಷಿ ಮತ್ತು ಕೈಗಾರಿಕಾ ಸ್ಥಾಯಿ ಸಮಿತಿ

ಕೊಡಗು ಜಿಲ್ಲಾ ಪಂಚಾಯತ್ ಸದಸ್ಯರು

KODAGU DISTRICT ZILLA PANCHAYATH MEMBERS

ಶ್ರೀ ಮೂಕೊಂಡ ಪಿ. ಸುಬ್ರಮಣಿ
Sri Mukonda P. Subramani

ಶ್ರೀ ಎಂ.ಕೆ. ವಿಜು ಸುಬ್ರಮಣಿ
Sri M.K. Viju Subramani

ಶ್ರೀ ಹೆಚ್.ಆರ್ ಶ್ರೀನಿವಾಸ್
Sri H.R. Srinivas

ಶ್ರೀಮತಿ ಅಪ್ಪಂಡೇರಂಡ ಭವ್ಯ
Smt. Appanderanda Bhavya

ಶ್ರೀ ಅಚ್ಚಪಂಡ ಎಂ. ಮಹೇಶ್ ಗಣಪತಿ
Sri Achapanda M. Mahesh Ganapathi

ಶ್ರೀಮತಿ ಕೆ. ಸರಿತಾ ಪೂಣಚ್ಚ
Smt. K. Saritha Poonacha

ಕೊಡಗು ಜಿಲ್ಲಾ ಪಂಚಾಯತ್ ಸದಸ್ಯರು

KODAGU DISTRICT ZILLA PANCHAYATH MEMBERS

ಶ್ರೀಮತಿ ಪಿ.ಆರ್. ಪಂಕಜ
Smt. P.R. Pankaja

ಶ್ರೀ ಬಾನಂಡ ಎನ್ ಪ್ರತ್ಯು
Sri Bananda N. Prathyu

ಶ್ರೀಮತಿ ಶ್ರೀಜ ಸಾಜಿ
Smt. Shreeja Shaji

ಶ್ರೀ ಎಂ.ಬಿ. ಮಾದಪ್ಪ
Sri M.B. Madappa

ಶ್ರೀಮತಿ ಲೀಲಾವತಿ
Smt. Leelavathy

ಶ್ರೀಮತಿ ಯಲದಾಳು ಡಿ. ಪದ್ಮಾವತಿ
Smt.Yaladlu D. Padmavathy

ಶ್ರೀಮತಿ ಬಿ. ಕಲಾವತಿ ಪೂವಪ್ಪ
Smt. B. Kalavathi

ಶ್ರೀ ಪಿ. ಮುರಳಿ ಕರುಂಬಮ್ಮಯ್ಯ
Sri P. Murali Karumbamaiah

ಶ್ರೀ ಕೆ.ಕೆ. ಕುಮಾರ
Sri K.K. Kumara

ಕೊಡಗು ಜಿಲ್ಲಾ ಪಂಚಾಯತ್ ಸದಸ್ಯರು

KODAGU DISTRICT ZILLA PANCHAYATH MEMBERS

ಶ್ರೀಮತಿ ಹೆಚ್. ಕವಿತಾ ಪ್ರಭಾಕರ್
Smt. H. Kavitha Prabhakar

ಶ್ರೀ ಸಿ.ಪಿ. ಪುಟ್ಟರಾಜು
Sri C.P. Puttaraju

ಶ್ರೀಮತಿ ಪೂರ್ಣಿಮಾ ಗೋಪಾಲ್
Smt. Poornima Gopal

ಶ್ರೀಮತಿ ಕೆ.ಆರ್. ಮಂಜುಳಾ
Smt. K.R. Manjula

ಶ್ರೀ ಲತೀಫ್
Sri Latheef

ಶ್ರೀಮತಿ ಎಂ.ಬಿ. ಸುನೀತ
Smt. M.B. Suneetha

ಶ್ರೀಮತಿ ಕುಮುದ ಧರ್ಮಪ್ಪ
Smt. Kumuda Dharmappa

ಶ್ರೀಮತಿ ಕೆ.ಪಿ. ಚಂದ್ರಕಲಾ
Smt. K.P. Chandrakala

ಶ್ರೀ ಬಿ.ಜೆ. ದೀಪಕ್
Sri B.J. Deepak

ಪರಿವಿಡಿ

1.	ಕೊಡಗು ಜಿಲ್ಲಾ ಪಂಚಾಯತ್ ಜಿಲ್ಲೆಯ ಕಿರು ಪರಿಚಯ	8
2.	2019–20ನೇ ಸಾಲಿನ ಕೊಡಗು ಜಿಲ್ಲೆಯ ಸಾಮಾನ್ಯ ಅಂಕಿ ಅಂಶಗಳು	9–11
3.	ಕೊಡಗು ಜಿಲ್ಲಾ ಪಂಚಾಯತ್ ಚುನಾಯಿತ ಸದಸ್ಯರ ವಿವರ	12
4.	2019–20 ರಿಂದ ಕೊಡಗು ಜಿಲ್ಲಾ ಪಂಚಾಯತ್ ವಿವಿಧ ಸ್ಥಾಯಿ ಸಮಿತಿಗಳ ಅಧ್ಯಕ್ಷರು ಹಾಗೂ ಸದಸ್ಯರುಗಳ ವಿವರ	13
5.	2019–20ನೇ ಸಾಲಿನ ಕೊಡಗು ಜಿಲ್ಲಾ ಪಂಚಾಯತ್ ನಡೆಸಿದ ಸಾಮಾನ್ಯ/ ವಿಶೇಷ / ಸ್ಥಾಯಿ ಸಮಿತಿ ಸಭೆಗಳ ವಿವರ	14
6.	ಅನುಬಂಧ–1 2019–20ನೇ ಸಾಲಿನ ಕೊಡಗು ಜಿಲ್ಲಾ ಪಂಚಾಯತ್‌ನ ಸಾಮಾನ್ಯ ಮಾಹಿತಿ	15–18
7.	ಕೊಡಗು ಜಿಲ್ಲೆ ಪಂಚಾಯತ್‌ಗೆ ಮಂಜೂರಾದ, ಭರ್ತಿಯಾದ ಮತ್ತು ಖಾಲಿ ಇರುವ ಹುದ್ದೆಗಳ ವಿವರ	19
8.	2019–20ನೇ ಸಾಲಿನ ಕಾರ್ಯನಿರ್ವಹಿಸಿದ ಕೊಡಗು ಜಿಲ್ಲಾ ಪಂಚಾಯಿತಿ ವ್ಯಾಪ್ತಿಯ ಅನುಷ್ಠಾನಾಧಿಕಾರಿಗಳ ಹೆಸರು ಮತ್ತು ಪದನಾಮ	20
9.	ಮಾರ್ಚ್ 2020 ಅಂತ್ಯಕ್ಕೆ ಡಿ.ಎಸ್.ಎಸ್. ಆನ್‌ಲೈನ್ ಎಂ.ಪಿಕ್ ವರದಿ	21
10.	ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ	22
11.	ಎನ್.ಆರ್.ಎಲ್.ಎಂ./ಸಂಜೀವಿನಿ ಯೋಜನೆ	23
12.	ಸ್ವಚ್ಛ ಭಾರತ ಮಿಷನ್	23
13.	ಸಾರ್ವಜನಿಕ ಶಿಕ್ಷಣ ಇಲಾಖೆ	24–25
14.	ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ	26–29
15.	ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ	30–32
16.	ಜಿಲ್ಲಾ ಆಯುಷ್ ಇಲಾಖೆ, ಕೊಡಗು ಜಿಲ್ಲೆ, ಮಡಿಕೇರಿ	33
17.	ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ	34–35
18.	ಸಮಾಜ ಕಲ್ಯಾಣ ಇಲಾಖೆ	36–37
19.	ಪರಿಶಿಷ್ಠ ವರ್ಗಗಳ ಕಲ್ಯಾಣಾ ಇಲಾಖೆ	38–39
20.	ಹಿಂದುಳಿದ ವರ್ಗಗಳ ಕಲ್ಯಾಣಾ ಇಲಾಖೆ	40–42
21.	ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ	43
22.	ಕೈಗಾರಿಕಾ ಇಲಾಖೆ	44–45
23.	ಪಶುಪಾಲನಾ ಇಲಾಖೆ	46–54
24.	ಮೀನುಗಾರಿಕೆ ಇಲಾಖೆ	55–56
25.	ರೇಷ್ಮೆ ಇಲಾಖೆ	57–59
26.	ಸಾಮಾಜಿಕ ಅರಣ್ಯ ವಿಭಾಗ	60–62
27.	ಕೃಷಿ ಇಲಾಖೆ	63–65
28.	ತೋಟಗಾರಿಕೆ ಇಲಾಖೆ	66–70
29.	ಪಂಚಾಯತ್‌ರಾಜ್ ಇಂಜಿನಿಯರಿಂಗ್ ವಿಭಾಗ	71
30.	ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ	72
31.	ಕೈಮಗ್ಗ ಮತ್ತು ಜವಳಿ ಇಲಾಖೆ	73
32.	ಗಣಿ ಮತ್ತು ಭೂ ವಿಜ್ಞಾನ ಇಲಾಖೆ	74
33.	ಸಹಕಾರ ಇಲಾಖೆ	80–84
34.	ಕನ್ನಡ ಮತ್ತು ಸಂಸ್ಕೃತಿ ಇಲಾಖೆ	85–86
35.	ಸೋಮವಾರಪೇಟೆ ತಾಲ್ಲೂಕು ಅಂಕಿ ಅಂಶಗಳ ಸಾಮಾನ್ಯ ವಿವರ	87–98
36.	2019–20 ನೇ ಸಾಲಿನ ಮಡಿಕೇರಿ ತಾಲ್ಲೂಕಿನ ಅಂಕಿಅಂಶಗಳ ಸಾಮಾನ್ಯ ವಿವರ	99–110
37.	ವಿರಾಜಪೇಟೆ ತಾಲ್ಲೂಕು ಪಂಚಾಯಿತಿ ಸಾಮಾನ್ಯ ಮಾಹಿತಿ 2019–20	115–116
38.	ನಮೂನೆ –14 ಜಿಲ್ಲಾ ಪಂಚಾಯಿತಿ 2019–20ನೇ ವರ್ಷದ ವಾರ್ಷಿಕ ಮತ್ತು ವೆಚ್ಚದ ವಿವರ	117–119
39.	ಅನುಬಂಧ– 10 ಜಿಲ್ಲಾ ಪಂಚಾಯತ್ ಕಛೇರಿಗಳಲ್ಲಿ ಸಾರ್ವಜನಿಕರು ಕುಂದುಕೊರತೆ ಅರ್ಜಿಗಳ ವಿಲೇವಾರಿ ಪ್ರಗತಿಯ ತಃಖ್ತೆ ಸಂಚಿತ ವರದಿ 2019–20	120
40.	ನಮೂನೆ–11 ಮೊಕದ್ದಮೆಗಳು (ಸಿ.ಸಿ.ಎ ಪ್ರಕರಣಗಳು) (ದಿನಾಂಕ 01–04–2019 ರಿಂದ 31–03–2020 ರ ವರೆಗೆ)	121
41.	ಇಂಗ್ಲೀಷ್ ಭಾಷೆಯಲ್ಲಿ 2019–20 ವಾರ್ಷಿಕ ವರದಿ	123–216

ಕೊಡಗು ಜಿಲ್ಲಾ ಪಂಚಾಯತ್

ಜಿಲ್ಲೆಯ ಕಿರು ಪರಿಚಯ

ಕರ್ನಾಟಕ ರಾಜ್ಯದಲ್ಲಿ ಕೊಡಗು ಜಿಲ್ಲೆ ಚಿಕ್ಕ ಜಿಲ್ಲೆಯಾಗಿದ್ದು, ಇದರ ವಿಸ್ತೀರ್ಣ 4102 ಚ. ಕಿ. ಮೀ. ಆಗಿರುತ್ತದೆ. ಈ ಜಿಲ್ಲೆಯು ರಾಜ್ಯದ ಪಶ್ಚಿಮ ಘಟ್ಟಗಳ ಸಾಲಿನಲ್ಲಿರುವುದರಿಂದ ಮುಂಗಾರು ಕಾಲದಲ್ಲಿ ಹೆಚ್ಚು ಮಳೆ ಬೀಳುವುದರಿಂದ ಇಲ್ಲಿನ ಸಸ್ಯವರ್ಗವು ವರ್ಷದ ಎಲ್ಲಾ ಋತುಗಳಲ್ಲಿಯೂ ಹಚ್ಚ ಹಸಿರಿನಿಂದ ಕೂಡಿರುತ್ತದೆ. ಜಿಲ್ಲೆಯ ವಾರ್ಷಿಕ ವಾಡಿಕೆ ಮಳೆ 2749.00 ಮೀ.ಮೀ. ಆಗಿದ್ದು, ಉಷ್ಣಾಂಶ 10 ರಿಂದ 30 ಡಿಗ್ರಿ ಸೆಂಟಿಗ್ರೇಡ್‌ವರೆಗೆ ಇರುತ್ತದೆ. ಇಲ್ಲಿನ ಹೆಚ್ಚು ಭೂ ಭಾಗವು ಬೆಟ್ಟ–ಗುಡ್ಡಗಳಿಂದ ಹಾಗೂ ದಟ್ಟವಾದ ಕಾಡುಗಳಿಂದ ಕೂಡಿರುವುದರಿಂದ ಇಲ್ಲಿನ ಪೂರ್ವಿಕರು ಈ ಜಿಲ್ಲೆಯನ್ನು 'ಕೊಡಿ ಮಲೆನಾಡು' ಎಂದು ಕರೆಯುತ್ತಿದ್ದರು. ಈ ಜಿಲ್ಲೆಯನ್ನು ಕ್ರಿ.ಶ. 2 ರಿಂದ 19ನೇ ಶತಮಾನದವರೆಗೆ ಅನೇಕ ರಾಜರು ಆಳಿದ್ದು, ಇವರಲ್ಲಿ ಹಾಲೇರಿ ವಂಶದ ರಾಜರು ಪ್ರಮುಖರು. ಇವರು ಈ ಜಿಲ್ಲೆಯನ್ನು ಒಂದು ಪ್ರಾಂತ್ಯವನ್ನಾಗಿ ಮಾಡಿಕೊಂಡಿದ್ದರು. ಇವರ ಪ್ರಾಬಲ್ಯ ಕಡಿಮೆಯಾದಂತೆ ಬ್ರಿಟಿಷರು ಈ ಜಿಲ್ಲೆಗೆ ಬಂದು ತಮ್ಮ ಆಡಳಿತವನ್ನು ಸ್ಥಾಪಿಸಿದರು. 1947ರಲ್ಲಿ ನಮ್ಮ ದೇಶಕ್ಕೆ ದೊರೆತ ಸ್ವಾತಂತ್ರ್ಯದ ಫಲವಾಗಿ ಈ ಜಿಲ್ಲೆಯ 'ಸಿ' ರಾಜ್ಯವಾಗಿ ಪರಿಗಣಿಸಲ್ಪಟ್ಟಿತು. ನಂತರ 1956ರಲ್ಲಿ ಮೈಸೂರು ರಾಜ್ಯದೊಂದಿಗೆ ವಿಲೀನವಾಯಿತು. ಬ್ರಿಟಿಷರ ಆಡಳಿತ ಕಾಲದಲ್ಲಿ 'ಕೂರ್ಗ್' ಎಂದು ಕರೆಯಲ್ಪಡುತ್ತಿದ್ದ ಈ ಜಿಲ್ಲೆಯನ್ನು 1977ರಲ್ಲಿ ಕೊಡಗು ಎಂದು ಪುನರ್ ನಾಮಕರಣ ಮಾಡಲಾಯಿತು.

ಈ ಜಿಲ್ಲೆಯು ಕರ್ನಾಟಕ ರಾಜ್ಯದ ನೈರುತ್ಯ ಭಾಗದಲ್ಲಿದ್ದು, 11^0 56' ಮತ್ತು 12^0 50' ಉತ್ತರ ಅಕ್ಷಾಂಶ ಹಾಗೂ 75^0 22' ಮತ್ತು 76^0 11' ಪೂರ್ವ ರೇಖಾಂಶದೊಳಗಿದೆ. ಉತ್ತರದಿಂದ ದಕ್ಷಿಣಕ್ಕೆ 96 ಕಿ.ಮೀ. ಮತ್ತು ಪೂರ್ವದಿಂದ ಪಶ್ಚಿಮಕ್ಕೆ 64 ಕಿ.ಮೀ. ವಿಸ್ತಾರದಲ್ಲಿ ಹರಡಿದ್ದು, ಜಿಲ್ಲೆಯ ಉತ್ತರಕ್ಕೆ ಹಾಸನ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳು, ಪೂರ್ವಕ್ಕೆ ಮೈಸೂರು ಜಿಲ್ಲೆ, ಪಶ್ಚಿಮ ಹಾಗೂ ದಕ್ಷಿಣಕ್ಕೆ ಕೇರಳ ರಾಜ್ಯವು ಇದೆ. ಜಿಲ್ಲೆಯು ಸಮುದ್ರ ಮಟ್ಟದಿಂದ 4,000 ಅಡಿಗಳಷ್ಟು ಎತ್ತರದಲ್ಲಿದ್ದು, ತಡಿಯಂಡಮೋಳ್, ಬ್ರಹ್ಮಗಿರಿ, ಪುಷ್ಪಗಿರಿ ಹಾಗೂ ಮಾಲಂಬಿ ಬೆಟ್ಟ ಎಂಬ ಪ್ರಮುಖ ಶಿಖರಗಳನ್ನೊಳಗೊಂಡಿದ್ದು, ಭೌಗೋಳಿಕ ಪರಿಸರದಿಂದ ಸಂಪದ್ಭರಿತವಾಗಿದೆ ಹಾಗೂ ವನ್ಯ ಜೀವಿಗಳ ಆಶ್ರಯ ತಾಣವಾಗಿದೆ. ಕೊಡಗು ಒಂದು ಕರ್ನಾಟಕದ ತೋಟಗಾರಿಕೆ ಜಿಲ್ಲೆ. ಜಿಲ್ಲೆಯ ಕೇಂದ್ರ ಸ್ಥಾನವಾದ ಮಡಿಕೇರಿ ಪಟ್ಟಣವು ಎತ್ತರ ಪ್ರದೇಶದಲ್ಲಿದ್ದು, ಇದನ್ನು ಜಿಲ್ಲೆಯ ಪೀಠಭೂಮಿ ಎಂದು ಕರೆಯಲಾಗಿದೆ.

ಜಿಲ್ಲೆಯ ಒಟ್ಟು ಜನಸಂಖ್ಯೆ 2011ರ ಜನಗಣತಿಯಂತೆ 5,54,519 ಆಗಿದ್ದು, ಪ್ರತಿ ಚ.ಕಿ.ಮೀ.ಗೆ ಜನಸಾಂದ್ರತೆ 135 ಆಗಿರುತ್ತದೆ. ಜಿಲ್ಲೆಯು ಒಟ್ಟು 291 ಜನವಸತಿ ಗ್ರಾಮಗಳು ಹಾಗೂ 5 ಜನವಸತಿ ಇಲ್ಲದ ಗ್ರಾಮಗಳನ್ನೊಳಗೊಂಡಿದೆ. ಜಿಲ್ಲೆಯಲ್ಲಿ ಮೂರು ತಾಲ್ಲೂಕುಗಳಿದ್ದು, 16 ಹೋಬಳಿಗಳು ಹಾಗೂ 104 ಗ್ರಾಮ ಪಂಚಾಯಿತಿಗಳನ್ನು ಒಳಗೊಂಡಿರುತ್ತದೆ.

2019–2020ನೇ ಸಾಲಿನ ಕೊಡಗು ಜಿಲ್ಲೆಯ ಸಾಮಾನ್ಯ ಅಂಕಿ ಅಂಶಗಳು

ಕ್ರ.ಸಂ.	ವಿವರಗಳು		
1.	ಭೌಗೋಳಿಕ ವಿಸ್ತೀರ್ಣ (ಚ.ಕಿ.ಮೀ)		4102
2.	ಒಟ್ಟು ಜನಸಂಖ್ಯೆ		ಒಟ್ಟು – 554519
			ಗಂ 274608
			ಹೆಂ 279911
3.	ಗ್ರಾಮೀಣ ಜನಸಂಖ್ಯೆ		ಒಟ್ಟು 473531
			ಗಂ 234161
			ಹೆಂ 239370
4	ಪರಿಶಿಷ್ಟ ಜಾತಿ ಜನಸಂಖ್ಯೆ		73584
5.	ಪರಿಶಿಷ್ಟ ಪಂಗಡದ ಜನಸಂಖ್ಯೆ		58054
6.	ತಾಲ್ಲೂಕುಗಳು		3
7.	ಹೋಬಳಿಗಳು		16
8.	ಗ್ರಾಮ ಪಂಚಾಯಿತಿಗಳು		104
9.	ಜನವಸತಿ ಗ್ರಾಮಗಳು		291
10.	ದಾಖಲೆ ಗ್ರಾಮಗಳು		296
11.	ಜನಸಾಂದ್ರತೆ (ಪ್ರ ಚ.ಕಿ.ಮೀ)		135
12.	ದಶಕದ ಜನಸಂಖ್ಯೆ ಬೆಳವಣಿಗೆ ಪ್ರಮಾಣ		1.09
13.	ಲಿಂಗ ಪ್ರಮಾಣ		1019
14.	ಸಾಕ್ಷರತೆ ಪ್ರಮಾಣ		
	ಗಂಡಸರು		ಶೇ. 87.19
	ಹೆಂಗಸರು		ಶೇ. 78.14
	ಸರಾಸರಿ		ಶೇ. 82.61
15.	ವಾಡಿಕೆ ಮಳೆ (ಮಿ. ಮೀ)		2689
16.	ವಾಸ್ತವಿಕ ಸರಾಸರಿ ಮಳೆ (2017) ಮಿ.ಮೀ.		1900
17.	ಅರಣ್ಯ ಪ್ರದೇಶ (ಹೆಕ್ಟೇರ್)	–	134597
18.	ಬಿತ್ತನೆ ಪ್ರದೇಶ (ನಿವ್ವಳ) (ಹೆಕ್ಟೇರ್)	–	254993
19.	ಭತ್ತ (ಹೆಕ್ಟೇರ್)	–	17630

20.	ರಾಗಿ (ಹೆಕ್ಟೇರ್)	–	62
21.	ಮುಸುಕಿನ ಜೋಳ (ಹೆಕ್ಟೇರ್)	–	2428
22.	ದ್ವಿದಳ ಧಾನ್ಯಗಳು (ಹೆಕ್ಟೇರ್)	–	15
23.	ಒಟ್ಟು ತರಕಾರಿಗಳು (ಹೆಕ್ಟೇರ್)	–	397
24.	ಹಸಿಮೆಣಸಿನಕಾಯಿ (ಹೆಕ್ಟೇರ್)	–	9
25.	ಕರಿಮೆಣಸು (ಹೆಕ್ಟೇರ್)	–	65605
26.	ಶುಂಠಿ (ಹೆಕ್ಟೇರ್)	–	140
27.	ಬಾಳೆ (ಹೆಕ್ಟೇರ್)	–	830
28.	ನಿಂಬೆ (ಹೆಕ್ಟೇರ್)	–	43
29.	ತೆಂಗು (ಹೆಕ್ಟೇರ್)	–	1081
30.	ಕಿತ್ತಳೆ (ಹೆಕ್ಟೇರ್)	–	1027
31.	ಅಡಿಕೆ (ಹೆಕ್ಟೇರ್)	–	7714
32.	ಗೇರು (ಹೆಕ್ಟೇರ್)	–	305
34.	ಕಾಫಿ (ಹೆಕ್ಟೇರ್)	–	153024
35.	ಏಲಕ್ಕಿ (ಹೆಕ್ಟೇರ್)	–	618
36.	ರಬ್ಬರ್ (ಹೆಕ್ಟೇರ್)	–	1578
37.	ತಂಬಾಕ್ (ಹೆಕ್ಟೇರ್)	–	9
38.	ಎಣ್ಣೆತಾಳೆ (ಹೆಕ್ಟೇರ್)	–	72
39.	ಅಂತೋರಿಯಂ (ಹೆಕ್ಟೇರ್)	–	4
40.	ನೀರಾವರಿ ಬೆಳೆಗಳ ಒಟ್ಟು ವಿಸ್ತೀರ್ಣ (ಹೆಕ್ಟೇರ್)	–	1376

ಗ್ರಾಮ ಮತ್ತು ಗ್ರಾಮ ಪಂಚಾಯಿತಿಗಳ ವಿವರ

ಕ್ರ.ಸಂ.	ತಾಲ್ಲೂಕಿನ ಹೆಸರು	ಗ್ರಾಮ ಪಂಚಾಯಿತಿಗಳ ಸಂಖ್ಯೆ	ಗ್ರಾಮಗಳು 2011ರ ಜನಗಣತಿ ಪ್ರಕಾರ	
			ಜನವಸತಿ ಇರುವ	ಜನವಸತಿ ಇಲ್ಲದ
1.	ಮಡಿಕೇರಿ	26	67	0
2.	ಸೋಮವಾರಪೇಟೆ	40	130	5
3.	ವೀರಾಜಪೇಟೆ	38	94	0
	ಒಟ್ಟು	104	291	5

ವಿಸ್ತೀರ್ಣ ಮತ್ತು ಜನಸಂಖ್ಯೆ – 2011ರ ಜನಗಣತಿ ಪ್ರಕಾರ

ಕ್ರ.ಸಂ.	ತಾಲ್ಲೂಕು ಹೆಸರು	ವಿಸ್ತೀರ್ಣ	ಒಟ್ಟು	ಪರಿಶಿಷ್ಟ ಜಾತಿ	ಪರಿಶಿಷ್ಟ ಪಂಗಡ
1.	ಮಡಿಕೇರಿ	1492	146583	16302	8024
2.	ಸೋಮವಾರಪೇಟೆ	990	206505	34527	10537
3.	ವೀರಾಜಪೇಟೆ	1620	201431	22755	39493
	ಒಟ್ಟು	4102	554519	73584	58054

ಕೊಡಗು ಜಿಲ್ಲಾ ಪಂಚಾಯತ್ ಚುನಾಯಿತ ಸದಸ್ಯರ ವಿವರ

1.	ಶ್ರೀ ಬಿ.ಎ. ಹರೀಶ್.	ಅಧ್ಯಕ್ಷರು	ಕೊಡಗು ಜಿಲ್ಲಾ ಪಂಚಾಯತ್
2.	ಶ್ರೀಮತಿ ಲೋಕೇಶ್ವರಿ ಗೋಪಾಲ್,	ಉಪಾಧ್ಯಕ್ಷರು	,,
3.	ಶ್ರೀ ಎನ್.ಟಿ. ಕಿರಣ್ ಕಾರ್ಯಪ್ಪ., ಅಧ್ಯಕ್ಷರು, ಶಿಕ್ಷಣ ಮತ್ತು ಆರೋಗ್ಯ ಸ್ಥಾಯಿ ಸಮಿತಿ	ಅಧ್ಯಕ್ಷರು	,,
4.	ಶ್ರೀ ಬೋಪಣ್ಣ ಸಿ.ಕೆ., ಅಧ್ಯಕ್ಷರು, ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ	,,	,,
5.	ಶ್ರೀಮತಿ ಸರೋಜಮ್ಮ, ಅಧ್ಯಕ್ಷರು, ಕೃಷಿ ಮತ್ತು ಕೈಗಾರಿಕೆ ಸ್ಥಾಯಿ ಸಮಿತಿ	,,	,,
6.	ಶ್ರೀ ಮೂಕೊಂಡ ಪಿ. ಸುಬ್ರಮಣಿ	ಸದಸ್ಯರು	,,
7.	ಶ್ರೀ ಎಂ.ಕೆ. ವಿಜು ಸುಬ್ರಮಣಿ	,,	,,
8.	ಶ್ರೀ ಹೆಚ್.ಆರ್. ಶ್ರೀನಿವಾಸ್	,,	,,
9.	ಶ್ರೀಮತಿ ಅಪ್ಪಂಡೇರಂಡ ಭವ್ಯ	,,	,,
10.	ಶ್ರೀ ಅಚ್ಚಪಂಡ ಎಂ. ಮಹೇಶ್ ಗಣಪತಿ	,,	,,
11.	ಶ್ರೀಮತಿ ಕೆ. ಸರಿತಾ ಪೂಣಚ್ಚ	,,	,,
12.	ಶ್ರೀಮತಿ ಪಿ.ಆರ್. ಪಂಕಜ	,,	,,
13.	ಶ್ರೀ ಬಾನಂಡ ಎನ್. ಪ್ರತ್ಯು	,,	,,
14.	ಶ್ರೀಮತಿ ಶ್ರೀಜಸಾಜಿ	,,	,,
15.	ಶ್ರೀ ಎಂ.ಬಿ. ಮಾದಪ್ಪ	,,	,,
16.	ಶ್ರೀಮತಿ ಲೀಲಾವತಿ	,,	,,
17.	ಶ್ರೀಮತಿ ಯಾಲದಾಳು ಡಿ. ಪದ್ಮಾವತಿ	,,	,,
18.	ಶ್ರೀಮತಿ ಬಿ. ಕಲಾವತಿ ಪೂವಪ್ಪ	,,	,,
19.	ಶ್ರೀ ಪಿ. ಮುರುಳಿ ಕರುಂಬಮ್ಮಯ್ಯ	,,	,,
20.	ಶ್ರೀ ಕೆ.ಕೆ.ಕುಮಾರ	,,	,,
21.	ಶ್ರಿಮತಿ ಹೆಚ್. ಕವಿತ ಪ್ರಭಾಕರ್	,,	,,
22.	ಶ್ರೀ ಸಿ.ಪಿ.ಪುಟ್ಟರಾಜು	,,	,,
23.	ಶ್ರೀಮತಿ ಪೂರ್ಣಿಮ ಗೋಪಾಲ್	,,	,,
24.	ಶ್ರೀಮತಿ ಕೆ.ಆರ್.ಮಂಜುಳಾ	,,	,,
25.	ಶ್ರೀ ಲತೀಫ್	,,	,,
26.	ಶ್ರೀಮತಿ ಎಂ.ಬಿ.ಸುನಿತಾ	,,	,,
27.	ಶ್ರೀಮತಿ ಕೆ.ಪಿ.ಚಂದ್ರಕಲಾ	,,	,,
28.	ಶ್ರೀಮತಿ ಕುಮುದಾ ಧರ್ಮಪ್ಪ	,,	,,
29.	ಶ್ರೀ ಬಿ.ಜೆ. ದೀಪಕ್	,,	,,

2019–20ನೇ ಸಾಲಿನ ಕೊಡಗು ಜಿಲ್ಲಾ ಪಂಚಾಯತ್
ವಿವಿಧ ಸ್ಥಾಯಿ ಸಮಿತಿಗಳ ಅಧ್ಯಕ್ಷರು ಹಾಗೂ ಸದಸ್ಯರುಗಳ ವಿವರ

ಹಣಕಾಸು ಲೆಕ್ಕಪರಿಶೋದನಾ ಮತ್ತು ಯೋಜನಾ ಸ್ಥಾಯಿ ಸಮಿತಿ

ಶ್ರೀ ಬಿ.ಎ.ಹರೀಶ್,
ಅಧ್ಯಕ್ಷರು.

ಸದಸ್ಯರು

ಶ್ರೀ ಕೆ.ಕೆ.ಕುಮಾರ,
ಶ್ರೀಮತಿ ಹೆಚ್. ಕವಿತ ಪ್ರಭಾಕರ್,
ಶ್ರೀ ಬಿ.ಜೆ. ದೀಪಕ್,
ಶ್ರೀಮತಿ ಅಪ್ಪೇಂಡೇರಂಡ ಭವ್ಯ,
ಶ್ರೀಮತಿ ಪಿ.ಆರ್. ಪಂಕಜ
ಶ್ರೀ ಎಂ.ಬಿ. ಮಾದಪ್ಪ

ಶಿಕ್ಷಣ ಮತ್ತು ಆರೋಗ್ಯ ಸ್ಥಾಯಿ ಸಮಿತಿ

ಶ್ರೀ ಎನ್.ಟಿ. ಕಿರಣ್ ಕಾರ್ಯಪ್ಪ,
ಅಧ್ಯಕ್ಷರು

ಸದಸ್ಯರು

ಶ್ರೀ ಮೂಕೊಂಡ ಪಿ. ಸುಬ್ರಮಣಿ
ಶ್ರೀ ಪಿ. ಮುರುಳಿ ಕರುಂಬಮ್ಮಯ್ಯ
ಶ್ರೀಮತಿ ಪೂರ್ಣಿಮಾ ಗೋಪಾಲ್
ಶ್ರೀಮತಿ ಕೆ.ಆರ್. ಮಂಜುಳ
ಶ್ರೀಮತಿ ಲೀಲಾವತಿ.
ಶ್ರೀಮತಿ ಕೆ. ಸರಿತಾ ಪೂಣಚ್ಚ

ಸಾಮಾನ್ಯ ಸ್ಥಾಯಿ ಸಮಿತಿ

ಶ್ರೀಮತಿ ಲೋಕೇಶ್ವರಿ ಗೋಪಾಲ್
ಅಧ್ಯಕ್ಷರು

ಸದಸ್ಯರು

ಶ್ರೀ ಹೆಚ್.ಆರ್. ಶ್ರೀನಿವಾಸ್
ಶ್ರೀ ಅಚ್ಚಪಂಡ ಮಹೇಶ್ ಗಣಪತಿ
ಶ್ರೀಮತಿ ಯಾಲದಾಳು ಡಿ. ಪದ್ಮಾವತಿ
ಶ್ರೀಮತಿ ಎಂ.ಬಿ. ಸುನಿತಾ
ಶ್ರೀ ಬಾನಂಡ ಎನ್. ಪ್ರತ್ಯು
ಶ್ರೀ ಪುಟ್ಟರಾಜು ಸಿ.ಪಿ.

ಕೃಷಿ ಮತ್ತು ಕೈಗಾರಿಕಾ ಸ್ಥಾಯಿ ಸಮಿತಿ

ಶ್ರೀಮತಿ ಸರೋಜಮ್ಮ,
ಅಧ್ಯಕ್ಷರು,

ಸದಸ್ಯರು

ಶ್ರೀ ಅಚ್ಚಪಂಡ ಎಂ. ಮಹೇಶ್ ಗಣಪತಿ
ಶ್ರೀ ದೀಪಕ್ ಬಿ.ಜೆ.
ಶ್ರೀಮತಿ ಪೂರ್ಣಿಮಾ ಗೋಪಾಲ್
ಶ್ರೀಮತಿ ಬಿ. ಕಲಾವತಿ ಪೂವಪ್ಪ
ಶ್ರೀಮತಿ ಕೆ.ಪಿ. ಚಂದ್ರಕಲಾ.
ಶ್ರೀ ಲತೀಫ್

ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ

ಶ್ರೀ ಬೋಪಣ್ಣ ಸಿ.ಕೆ.
ಅಧ್ಯಕ್ಷರು.

ಸದಸ್ಯರು

ಶ್ರೀ ಎಂ.ಕೆ. ವಿಜು ಸುಬ್ರಮಣಿ
ಶ್ರೀಮತಿ ಹೆಚ್. ಕವಿತ ಪ್ರಭಾಕರ್
ಶ್ರೀಮತಿ ಕೆ.ಆರ್. ಮಂಜುಳ
ಶ್ರೀ ಕೆ.ಕೆ. ಕುಮಾರ
ಶ್ರೀಮತಿ ಶ್ರೀಜಸಾಜಿ
ಶ್ರೀಮತಿ ಕುಮುದಾ ಧರ್ಮಪ್ಪ

2019–20ನೇ ಸಾಲಿನ ಕೊಡಗು ಜಿಲ್ಲಾ ಪಂಚಾಯತ್ ನಡೆಸಿದ ಸಾಮಾನ್ಯ/ವಿಶೇಷ/ಸ್ಥಾಯಿ ಸಮಿತಿ ಸಭೆಗಳ ವಿವರ

ದಿನಾಂಕ 01–04–2019ರಿಂದ 31.03.2020ರವರೆಗೆ

ಕ್ರ. ಸಂ.	ಜಿಲ್ಲಾ ಪಂಚಾಯತ್ ಹೆಸರು ಕೊಡಗು ಜಿಲ್ಲಾ ಪಂಚಾಯತ್, ಮಡಿಕೇರಿ	ಜಿಲ್ಲಾ ಪಂಚಾಯತ್ ನಡೆಸಿದ ಸಾಮಾನ್ಯ/ ವಿಶೇಷ/ ಸ್ಥಾಯಿ ಸಭೆಗಳ ದಿನಾಂಕ	ಸಭೆಗಳ ಸಂಖ್ಯೆ
1.	ವಿಶೇಷ ಸಾಮಾನ್ಯ ಸಭೆ	07.06.2020	
	ಸಾಮಾನ್ಯ ಸಭೆ	24.07.2019	
	ಸಾಮಾನ್ಯ ಸಭೆ	07.11.2019	
	ಸಾಮಾನ್ಯ ಸಭೆ	19.02.2020	
	ವಿಶೇಷ ಸಾಮಾನ್ಯ ಸಭೆ	17.03.2020	5
2.	ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ ಸಭೆ	24.06.2019	
		06.09.2019	
		10.01.2020	3
3.	ಕೃಷಿ ಮತ್ತು ಕೈಗಾರಿಕಾ ಸ್ಥಾಯಿ ಸಮಿತಿ ಸಭೆ	25.06.2019	
		18.09.2019	
		16.01.2020	3
4.	ಶಿಕ್ಷಣ ಮತ್ತು ಆರೋಗ್ಯ ಸ್ಥಾಯಿ ಸಮಿತಿ	17.06.2019	
		13.09.2019	
		09.01.2020	3
5.	ಸಾಮಾನ್ಯ ಸ್ಥಾಯಿ ಸಮಿತಿ	27.06.2019	
		30.01.2020	
		19.09.2020	3
6	ಹಣಕಾಸು, ಲೆಕ್ಕ ಪರಿಶೋಧನೆ ಮತ್ತು	03.07.2019	
	ಯೋಜನಾ ಸ್ಥಾಯಿ ಸಮಿತಿ	26.09.2019	
		05.02.2020	3

ಅನುಬಂಧ–1

2019–2020ನೇ ಸಾಲಿನ ಕೊಡಗು ಜಿಲ್ಲಾ ಪಂಚಾಯತ್‌ನ ಸಾಮಾನ್ಯ ಮಾಹಿತಿ

1.	**ಜಿಲ್ಲಾ ಪಂಚಾಯತ್ ವ್ಯಾಪ್ತಿ (ಪ್ರಕರಣ 158)**	: ಕೊಡಗು ಜಿಲ್ಲಾ ಪಂಚಾಯತ್ ಕ್ಷೇತ್ರ ಕೊಡಗು ಜಿಲ್ಲಾ
1)	ಪ್ರದೇಶ (ಚ.ಕಿ.ಮೀ.)	(4102 ಚ.ಕಿ.ಮೀ.) ಸರಹದ್ದನ್ನು ಹಾಗೂ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿ ಹೊರತು ಉಳಿದ ಗ್ರಾಮಾಂತರ ಪ್ರದೇಶ ಒಳಪಟ್ಟಿರುತ್ತದೆ.
2)	ಜನಸಂಖ್ಯೆ	: 2011 ಜನಗಣತಿ ಪ್ರಕಾರ ಕೊಡಗು ಜಿಲ್ಲಾ ಪಂಚಾಯತ್ ಕಾರ್ಯ ವ್ಯಾಪ್ತಿಗೆ ಬರುವ ಗ್ರಾಮಾಂತರ ಪ್ರಮೇಶಗಳ ಒಟ್ಟು ಜನಸಂಖ್ಯೆ 4,73,531
3)	ಒಟ್ಟು ಸ್ಥಾನಗಳ ಸಂಖ್ಯೆ (ಪ್ರಕರಣ 159)	: 37
ಅ)	ಚುನಾಯಿತ ಸದಸ್ಯರ ಸಂಖ್ಯೆ	: 29
ಆ)	ಲೋಕಸಭಾ ಸದಸ್ಯರ ಸಂಖ್ಯೆ	: 1
ಇ)	ವಿಧಾನಸಭಾ ಸದಸ್ಯರ ಸಂಖ್ಯೆ	: 2
ಈ)	ವಿಧಾನ ಪರಿಷತ್ ಸದಸ್ಯರ ಸಂಖ್ಯೆ	: 2
ಉ)	ತಾಲ್ಲೂಕು ಪಂಚಾಯತ್ ಅಧ್ಯಕ್ಷರ ಸಂಖ್ಯೆ	: 3
ಊ)	ಸದಸ್ಯರ ಪ್ರಯಾಣ ಭತ್ಯ ದಿನಭತ್ಯೆ ಹಾಗೂ ಸಭಾ ಭತ್ಯೆಗಳು	: ನಿಯಮಾನುಸಾರ ನೀಡಲಾಗಿದೆ
2.	**ಪ್ರಕರಣ 177,178 ಮತ್ತು 186 ರನ್ವಯ ಮಾಹಿತಿ :**	
1)	ಅಧ್ಯಕ್ಷರು ಹೆಸರು	: ಶ್ರೀ ಬಿ.ಎ. ಹರೀಶ್
2)	ಉಪಾಧ್ಯಕ್ಷರ ಹೆಸರು	: ಶ್ರೀಮತಿ ಲೋಕೇಶ್ವರಿ ಗೋಪಾಲ್
3)	ಪಾವತಿ ಮಾಡಿದ ವೇತನ ಮತ್ತು ಭತ್ಯೆಗಳು	
	ಅಧ್ಯಕ್ಷರು	: ರೂ. 11,69,994/–
	ಉಪಾಧ್ಯಕ್ಷರು	: ರೂ. 3,18,747/–
		(2019–20ನೇ ಸಾಲಿನ ಬಾಕಿ ವೇತನ ಹಾಗೂ ಭತ್ಯೆ)
	ಉಪಾಧ್ಯಕ್ಷರಿಗೆ ನಿಯೋಜಿಸಲಾದ ಯಾವುದೇ ಕರ್ತವ್ಯ	: ಕರ್ನಾಟಕ ಪಂಚಾಯತ್ ಅಧಿನಿಯಮ 1993 ಪ್ರಕಾರ ಕಾರ್ಯನಿರ್ವಹಿಸಿದ್ದಾರೆ.
6)	ಅ. ಮುಖ್ಯ ಕಾರ್ಯನಿರ್ವಹಣಾಧಿಕಾರಿ	: ಶ್ರೀಮತಿ ಕೆ. ಲಕ್ಷ್ಮೀಪ್ರಿಯ ಭಾ.ಆ.ಸೇ.
	ಆ. ಉಪ ಕಾರ್ಯದರ್ಶಿ	: ಶ್ರೀ ಗುಡೂರು ಭೀಮಸೇನ

ಇ. ಮುಖ್ಯ ಯೋಜನಾಧಿಕಾರಿ : ಶ್ರೀಮತಿ ಸಂಧ್ಯಾ ಕೆ.ಎಸ್.
20–06–2018 ರಿಂದ 25–04–2019ರವರೆಗೆ

ಶ್ರೀ ಲೋಕೇಶ್ ಎನ್ (ಪ್ರಭಾರ)
26–04–2019 ರಿಂದ 14–06–2019ರವರೆಗೆ

ಶ್ರೀ ಶ್ರೀಕಂಠ ಮೂರ್ತಿ
15–06–2019 ರಿಂದ

ಈ. ಮುಖ್ಯ ಲೆಕ್ಕಾಧಿಕಾರಿ : ಶ್ರೀಮತಿ ಸಂಧ್ಯಾ ಕೆ.ಎಸ್.
05–07–2018 ರಿಂದ 21–04–2019

ಶ್ರೀ ಹೆಚ್.ಈ.ನಂದ (ಹೆಚ್ಚುವರಿ ಪ್ರಭಾರ)
22–04–2019 ರಿಂದ 10–10–2019 ರವರೆಗೆ

ಶ್ರೀ ಶ್ರೀಧರ್‌ಮೂರ್ತಿ (ಪ್ರಭಾರ)
11–10–2019 ರಿಂದ 17–03–2020 ರವರೆಗೆ

ಶ್ರೀಮತಿ ಬಿ.ಬಿ.ಪುಷ್ಪಾವತಿ
18–03–2020 ರಿಂದ

ಉ. ಯೋಜನಾ ನಿರ್ದೇಶಕರು : ಶ್ರೀ ಗುಡೂರು ಭೀಮಸೇನ
25–10–2018 ರಿಂದ 11–07–2019 ರವರೆಗೆ
ಶ್ರೀ ಶ್ರೀಕಂಠಮೂರ್ತಿ 12–07–2019 ರಿಂದ

ಊ. ಯೋಜನಾ ಅಂದಾಜು ಮತ್ತು ಮೌಲ್ಯಮಾಪನಾಧಿಕಾರಿಗಳು : ಶ್ರೀ ಲೋಕೇಶ್ ಎನ್.
01–04–2019 ರಿಂದ 14–06–2020 ರವರೆಗೆ

ಶ್ರೀ ಅಪ್ಪಣ್ಣ ಕೆ.ಸಿ. (ಪ್ರಭಾರ)
01–07–2019 ರಿಂದ 31–07–2019

ಶ್ರೀ ಜಯಣ್ಣ (ಪ್ರಭಾರ)
01–08–2019 ರಿಂದ 22–08–2019

ಶ್ರೀ ಜೀವನ್‌ಕುಮಾರ್ ಟಿ.ಎನ್. (ಪ್ರಭಾರ)
23–08–2019 ರಿಂದ

3. ಚುನಾವಣೆಗಳು (ಪ್ರಕರಣ 160)

1. ಸಾಮಾನ್ಯ ಚುನಾವಣೆ ದಿನಾಂಕ : ಇರುವುದಿಲ್ಲ
2. ಉಪಚುನಾವಣೆಗಳೇನಾದರೂ ಆಗಿದ್ದಲ್ಲಿ ದಿನಾಂಕ ಕಾರಣ ಮತ್ತು ಫಲಿತಾಂಶಗಳು : ಇಲ್ಲ
3. ಜಿಲ್ಲಾ ಪಂಚಾಯಿತಿಯ ಅವಧಿ ವಿಸ್ತರಣೆಗೊಂಡಿದಲ್ಲಿ: ಇರುವುದಿಲ್ಲ
4. ಚುನಾವಣಾ ವೆಚ್ಚ : ಇಲ್ಲ
5. ಚುನಾವಣಾ ವ್ಯಾಜ್ಯಗಳು ಇದ್ದಲ್ಲಿ : ಇಲ್ಲ

4. ಜಿಲ್ಲಾ ಪಂಚಾಯಿತಿ ಸಭೆಗಳು ಮತ್ತು ಹಾಜರಾತಿ (ಪ್ರಕರಣ 180)

ಅ. ಸಾಮಾನ್ಯ ಸಭೆಗಳ ಸಂಖ್ಯೆ : 3

ಆ. ವಿಶೇಷ ಸಭೆಗಳ ಸಂಖ್ಯೆ : 2

ಇ. ಮುಂದೂಡಲಾದ ಸಭೆಗಳ ಸಂಖ್ಯೆ : ಇಲ್ಲ

ಈ. ಸಭೆಗಳನ್ನು ನಿಯಮಿತವಾಗಿ ನಡೆಸುವುದು : ನಿಯಮದಂತೆ ಸಭೆಗಳನ್ನು ಕರೆಯಲಾಗಿದೆ.

ಉ. ಸಭೆಗಳಲ್ಲಿ ಸದಸ್ಯರ ಹಾಜರಾತಿ : ಕೋರಂನಂತೆ ಸಭೆ ನಡೆಸಲಾಗಿದೆ.

ಊ. ಕೋರಂ ಇಲ್ಲದೆ ಮುಂದೂಡಲಾದ ಸಭೆಗಳು : ಇಲ್ಲ

ಋ. ಕಾರ್ಯನಿರ್ವಹಣೆ ನಿಯಮಗಳು : ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993ರ ಪ್ರಕಾರ

ಎ. ನಿರ್ಣಯಗಳ ಸಂಖ್ಯೆ : ಕಾರ್ಯ ಸೂಚಿಯಂತೆ

1. ಮಂಡಿಸಿದ್ದು : ಕಾರ್ಯ ಸೂಚಿಯಂತೆ

2. ಅಂಗೀಕರಿಸಿದ್ದು : ಕಾರ್ಯ ಸೂಚಿಯ ಎಲ್ಲಾ ವಿಷಯಗಳು

3. ಚರ್ಚಿಸಿದ್ದು : ಕಾರ್ಯ ಸೂಚಿಯ ಎಲ್ಲಾ ವಿಷಯಗಳು

4. ಹಿಂಪಡೆದಿದ್ದು : ಇಲ್ಲ

5. ಸ್ಥಾಯಿ ಸಮಿತಿಗಳು ಮತ್ತು ಇತರ ಸಮಿತಿಗಳು (ಪ್ರಕರಣ 187 ಮತ್ತು 188)

1. ಸ್ಥಾಯಿ ಸಮಿತಿಗಳು ಮತ್ತು ಇತರ ಸಮಿತಿಗಳು ಸಂಖ್ಯೆ: 5

2. ಸಮಿತಿಯ ಚುನಾವಣೆಯ ದಿನಾಂಕ : ದಿನಾಂಕ : 28–06–2018ರ ವಿಶೇಷ ಸಾಮಾನ್ಯ ಸಭೆ ತೀರ್ಮಾನದಂತೆ

3. ಸ್ಥಾಯಿ ಸಮಿತಿಗಳ ಸದಸ್ಯರು ಸಂಖ್ಯೆ : ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993ರ ಪ್ರಕರಣ 186ರಲ್ಲಿ ನಿಗದಿಗೊಳಿಸಿದಂತೆ (ಎಲ್ಲಾ 5 ಸ್ಥಾಯಿ ಸಮಿತಿಗಳಲ್ಲಿ ಅಧ್ಯಕ್ಷರು ಮತ್ತು 6 ಜನ ಸದಸ್ಯರಿರುತ್ತಾರೆ.)

4. ಇತರೆ ಸಮಿತಿಗಳಿದ್ದಲ್ಲಿ ಅವುಗಳು ನಿರ್ವಹಿಸಿದಕಾರ್ಯಗಳು : ಇಲ್ಲ

6. ಪ್ರಕರಣದನ್ವಯ ಆಡಳಿತ

ಅ. ಜಿಲ್ಲಾ ಪಂಚಾಯತ್‌ಗೆ ಸಿಬ್ಬಂದಿ ಒಟ್ಟಾರೆ ಮಂಜೂರಾದ ಹುದ್ದೆಗಳು ಸಂಖ್ಯೆ: 91

1. ಖಾಲಿ ಇರುವ ಹುದ್ದೆಗಳು ಹಾಗೂ ಭರ್ತಿ ಮಾಡದಿರುವುದಕ್ಕೆ ಕಾರಣಗಳು : 71 ಖಾಲಿ 20 ಭರ್ತಿ

2. ಜಿಲ್ಲಾ ಪಂಚಾಯ್ತಿ ವಾಸ್ತವಿಕ ವೆಚ್ಚ : 99940.81 ಲಕ್ಷಗಳು

3. ಆಧಿಕಾರಿ ಹಾಗೂ ಸಿಬ್ಬಂದಿಗಳ ತರಬೇತಿ : 04

4. ಸಿಬ್ಬಂದಿಯೇತರ ತರಬೇತಿ ನಿಯೋಜಿಸಿಲಾಗಿದೆ : ಇಲ್ಲ

5. ನಡೆಸಲಾದ ಸಮ್ಮೇಳನ ಮತ್ತು ನೀಡಲಾದ ಕೊಡಗೆ : ರೂ. 10,000 (1)

6. ದಂಡನೆಗಳು : 0

7. ಅಧಿಕಾರಿ ಮತ್ತು ನೌಕರರ ಮನವಿ : ಇಲ್ಲ

7. ತಾಲ್ಲೂಕು ಪಂಚಾಯತಿಗಳಿಗೆ ಸಂಬಂಧಿಸಿದಂತೆ ವಸ್ತು ಪದರ್ಶನ ಕಾರ್ಯಗಾರ ಮತ್ತು ಸಮ್ಮೇಳನಗಳಿಗೆ ಕೊಡುಗೆ

1. ಅಖಿಲಭಾರತ ಮಟ್ಟದ ಸಂಘ ಸಂಸ್ಥೆಗಳು

2. ರಾಜ್ಯ ಮಟ್ಟದ ಸಂಘ ಸಂಸ್ಥೆಗಳು

3. ಅಂತರರಾಜ್ಯ ಮಟ್ಟದ ಸಂಘ ಸಂಸ್ಥೆಗಳು : ಇಲ್ಲ

4. ಅರ್ಥಿಕ ಸಂಘ ಸಂಸ್ಥೆಗಳು : ಇಲ್ಲ

5. ಇತರ ಸಂಘ ಸಂಸ್ಥೆಗಳು : ಇಲ್ಲ

8.	**1. ಪರಿಶಿಷ್ಠ ಜಾತಿ ಪರಿಶಿಷ್ಟ ಪಂಗಡ ಮತ್ತು**	
	ಹಿಂದುಳಿದ ವರ್ಗಗಳ ಕಲ್ಯಾಣಕ್ಕೆ ನಿಗದಿಪಡಿಸಿದ ಒಟ್ಟು ಅನುದಾನ	: ರೂ. 3,428.61 ಲಕ್ಷಗಳು
2.	ವೆಚ್ಚ ಮಾಡಲಾದ ಮೊತ್ತ	: ರೂ. 3,121.35 ಲಕ್ಷಗಳು
9.	ಜಿಲ್ಲಾ ಪಂಚಾಯತಿಯಿಂದ ತೆಗೆಯಲಾದ ಸಾಲ	: ಇಲ್ಲ
10.	ಋಣ ಪರಿಹಾರ ನಿಧಿ(ಸಿಂಕಿಂಗ್‌ಫಂಡ್) ರೂಪಿಸಿರುವುದು	: ಇಲ್ಲ
11.	ಆಯವ್ಯಯದ ವ್ಯಾಪ್ತಿಯಲ್ಲಿ ಸೇರದೆ ಇರುವ ವಿಷಯಗಳಲ್ಲಿ ಮಾಡಿದ ಖರ್ಚು ಮತ್ತು ಕಾರಾಣಗಳು	: ಇಲ್ಲ
12.	**ಆಯವ್ಯಯವನ್ನು ಸಕಾಲದಲ್ಲಿ ಮಂಡಿಸಲಾಗಿದೆಯೇ?**	**: ಹೌದು**
1.	ಜಿಲ್ಲಾ ಪಂಚಾಯತಿಗೆ ಆಯವ್ಯಯವನ್ನು ಮಂಡಿಸಿದ ದಿನಾಂಕ	: 07–11–2019
2.	ಸರಕಾರಕ್ಕೆ ಸಲ್ಲಿಸಿದ ದಿನಾಂಕ (ಕರಡು)	: 26–11–2019
3.	ಒಟ್ಟು ಮೊತ್ತ	: 39,415.87 ಲಕ್ಷಗಳು
14.	**ವಸೂಲು ಮಾಡಲಾಗದ ವಜಾ ಮಾಡಲಾಗಿರುವ ಮೊತ್ತ**	
1.	ಜಿಲ್ಲಾ ಪಂಚಾಯತಿ ವತಿಯಿಂದ	: ಇಲ್ಲ
2.	ಸರ್ಕಾರದ ಪೂವಾನುಮತಿಯೊಂದಿಗೆ	: ಇಲ್ಲ
15.		
1.	ಲೆಕ್ಕ ತಪಾಸಣೆಯ ದಿನಾಂಕ	: ಇನ್ನು ಆಗಬೇಕಿದೆ
2.	ಲೆಕ್ಕ ಪರಿಶೋಧಕರು ಅನುಮತಿ ನೀಡಿದ ಅಂಶಗಳು ಮತ್ತು ಅದರ ಮೇಲೆ ಜಿಲ್ಲಾ ಪಂಚಾಯ್ತಿಯ ಆದೇಶ	: ಇಲ್ಲ
16.	ಲೆಕ್ಕ ಪರಿಶೋಧಕರು ಅನುಮತಿ ವಸೂಲಾದ ಮೊತ್ತದ ಒಟ್ಟು ವಿವರಗಳು ಮತ್ತು ಸದರಿ ಮೊತ್ತದ ಮೇಲೆ ವಸೂಲಾದ ಬಡ್ಡಿ	: ಇಲ್ಲ
17.	ಪ್ರಕರಣದಂತೆ ತಾಲ್ಲೂಕು ಪಂಚಾಯತಿಗಳಿಗೆ ಸಂಬಂಧಿಸಿದಂತೆ ಜಿಲ್ಲಾ ಒಂಚಾಯಿತಿಯು ಕೋರಿ ಪಡೆದಿರುವ ಮಾಹಿತಿ	: ಇಲ್ಲ
18.	ಪ್ರಕರಣ 237ರ ಪ್ರಕಾರ ಜಿಲ್ಲಾ ಪಂಚಾಯತ್‌ಯಿಂದ ಗ್ರಾಮ ಪಂಚಾಯತ್ ಆದೇಶಗಳನ್ನು ಅಮಾನುತುಗೊಳಿಸಿರುವ ಪ್ರಕರಣ ಸಂಖ್ಯೆ	: ಇರುವುದಿಲ್ಲ.
19.	ಪ್ರಕರಣ 268 ರಡಿಯಲ್ಲಿ ಜಿಲ್ಲಾ ಪಂಚಾಯಿತಿಯು ರದ್ದು ಮಾಡಿರುವ ತಾಲ್ಲೂಕು ಪಂಚಾಯಿತಿ ನಿರ್ಣಯಗಳ ಸಂಖ್ಯೆ	: ಇಲ್ಲ
20.	ತಾಲ್ಲೂಕು ಪಂಚಾಯಿತಿ ಆದೇಶಗಳ ವಿರುದ್ಧ ಜಿಲ್ಲಾ ಪಂಚಾಯಿತಿಗೆ ಸಲ್ಲಿಸಲಾದ ಮೇಲ್ಮನವಿಗಳ ಸಂಖ್ಯೆ ಮತ್ತು ಅವುಗಳ ಮೇಲಿನ ತೀರ್ಮಾನ	: ಇಲ್ಲ
21.	ಯಾವುದೇ ಸಮಿತಿಯ ತೀರ್ಮಾನಗಳನ್ನು ಜಿಲ್ಲಾ ಪಂಚಾಯಿತಿಯ ಪರಿಷ್ಕರಣೆ ಮಾಡಿರುವುದರ ಸಂಖ್ಯೆ	: ಇಲ್ಲ
22.	ಯಾವುದೇ ಸಮಿತಿ ತೀರ್ಮಾನಗಳನ್ನು ಜಿಲ್ಲ ಪಂಚಾಯಿತಿಯು ಮಾರ್ಪಡಿಸಿರುವುದರ ಸಂಖ್ಯೆ	: ಇರುವುದಿಲ್ಲ
23.	ಯಾವುದೇ ಸಮಿತಿ ತೀರ್ಮಾನಗಳನ್ನು ಜಿಲ್ಲಾ ಪಂಚಾಯಿತಿಯು ಮಾರ್ಪಡಿಸಿರುವುದರ ಸಂಖ್ಯೆ	: ಇರುವುದಿಲ್ಲ
24	ಸರ್ಕಾರದ ಪೂರ್ವನುಮೋದನೆಯೊಂದಿಗೆ ಹೊರಡಿಸಿರುವ ನಿಯಮಗಳ ಸಂಖ್ಯೆ	: ಇರುವುದಿಲ್ಲ
25.	ತಾಲ್ಲೂಕು ಪಂಚಾಯತಿಗಳು ವಿನಿಮಯಗಳನ್ನು ರಚಿಸಲು ಜಿಲ್ಲಾ ಪಂಚಾಯತಿಯು ಪೂವಾನುಮೋದನೆ ನೀಡಿರುವುದರ ಸಂಖ್ಯೆ	: ಇರುವುದಿಲ್ಲ
26	ಜಿಲ್ಲಾ ಪಂಚಾಯಿತಿಗೆ ಒಟ್ಟಾರೆ ಶುಲ್ಕ ಪಾವತಿಯಾಗಿರುವುದು ಮತ್ತು ಪ್ರಕರಣ 287 ಮತ್ತು 228ರನ್ವಯ ವಸೂಲಾಗಿರುವ ಬಾಡಿಗೆ ಮತ್ತು ಶುಲ್ಕ	: ಇರುವುದಿಲ್ಲ
27.	ಪ್ರಕರಣ 293 ರಡಿಯಲ್ಲಿ ವೆಚ್ಚಗಳಿಗೆ ಸಂಬಂದಿಸಿದಂತೆ ವಸೂಲು ಮಾಡಲಾದ ಮೊತ್ತ	: ಇಲ್ಲ

ಕೊಡಗು ಜಿಲ್ಲಾ ಪಂಚಾಯತ್‌ಗೆ ಮಂಜೂರಾದ, ಭರ್ತಿಯಾದ ಮತ್ತು ಖಾಲಿ ಇರುವ ಹುದ್ದೆಗಳ ವಿವರ

ಕ್ರ.ಸಂ	ಹುದ್ದೆಯ ಪದನಾಮ	ಮಂಜೂರಾದ ಹುದ್ದೆಗಳ ಸಂಖ್ಯೆ	ಭರ್ತಿಯಾಗಿರುವ ಹುದ್ದೆಗಳ ಸಂಖ್ಯೆ	ಖಾಲಿ ಇರುವ ಹುದ್ದೆಗಳ ಸಂಖ್ಯೆ
1	2	3	4	5
1	ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ	1	1	0
2	ಉಪಕಾರ್ಯದರ್ಶಿ	1	1	0
3	ಮುಖ್ಯ ಯೋಜನಾಧಿಕಾರಿ	1	0	1
4	ಮುಖ್ಯ ಲೆಕ್ಕಾಧಿಕಾರಿಗಳು	1	1	0
5	ಯೋಜನಾ ನಿರ್ದೇಶಕರು	1	1	0
6	ಯೋಜನಾ ಅಂದಾಜು ಮತ್ತು ಮೌಲ್ಯ ಮಾಪನಾಧಿಕಾರಿ	1	0	1
7	ಸಹಾಯಕ ಕಾರ್ಯದರ್ಶಿ	2	0	2
8	ಲೆಕ್ಕಾಧಿಕಾರಿ	2	0	2
9	ಸಹಾಯಕ ಯೋಜನಾಧಿಕಾರಿ	1	1	0
10	ಸಹಾಯಕ ಯೋಜನಾಧಿಕಾರಿ	1	0	1
11	ಯೋಜನಾ ಅಭಿಯಂತರರು	1	0	1
12	ಯೋಜನಾ ಸಹಾಯಕರು(ಸಾಂಖ್ಯಿಕ)	2	1	1
13	ಅಧೀಕ್ಷಕರು	3	1	2
14	ಲೆಕ್ಕಾಧೀಕ್ಷಕರು	4	2	2
15	ಶೀಘ್ರಲಿಪಿಗಾರರು	8	1	7
16	ಪ್ರಥಮ ದರ್ಜೆ ಸಹಾಯಕರು	7	3	4
17	ಪ್ರಥಮ ದರ್ಜೆ ಲೆಕ್ಕ ಸಹಾಯಕರು	9	2	7
18	ದ್ವಿತೀಯ ದರ್ಜೆ ಸಹಾಯಕರು	9	2	7
19	ದ್ವಿತೀಯ ದರ್ಜೆ ಲೆಕ್ಕ ಸಹಾಯಕರು	4	0	4
20	ಬೆರಳಚ್ಚುಗಾರರು	7	0	7
21	ವಾಹನ ಚಾಲಕರು	5	0	5
22	ರೆಕಾರ್ಡ್ ಕೀಪರ್	1	0	1
23	'ಡಿ' ದರ್ಜೆ ನೌಕರರು	18	3	15
24	ಬೈಂಡರ್	1	0	1
	ಒಟ್ಟು	91	20	71

2019-20 ನೇ ಸಾಲಿನಲ್ಲಿ ಕಾರ್ಯನಿರ್ವಹಿಸಿದ ಕೊಡಗು ಜಿಲ್ಲಾ ಪಂಚಾಯತ್ ವ್ಯಾಪ್ತಿಯ ಅನುಷ್ಠಾನಾಧಿಕಾರಿಗಳ ಹೆಸರು ಮತ್ತು ಪದನಾಮ

೧. ಉಪನಿರ್ದೇಶರು, ಸಾರ್ವಜನಿಕ ಶಿಕ್ಷಣ ಇಲಾಖೆ	: ಶ್ರೀ ಪಿ.ಎಸ್. ಮಚ್ಚಾಡೋ
೨. ಯುವಜನ ಸೇವೆ ಮತ್ತು ಕ್ರೀಡಾ ಇಲಾಖೆ	: ಶ್ರೀಮತಿ ಕೆ.ಆರ್. ಜಯಲಕ್ಷ್ಮಿಬಾಯಿ
೩. ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ	: ಡಾ.ಕೆ. ಮೋಹನ್
೪. ಜಿಲ್ಲಾ ಅಧಿಕಾರಿ, ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ	: ಶ್ರೀ ಆರ್. ಅವಿನ್
೫. ಉಪನಿರ್ದೇಶಕರು , ಸಮಾಜ ಕಲ್ಯಾಣ ಇಲಾಖೆ	: ಶ್ರೀಮತಿ ಭಾರತಿ ಸಿ.ಆರ್.
೬. ಉಪನಿರ್ದೇಶಕರು, ಮಹಿಳೆ ಮತ್ತು ಮಕ್ಕಳ ಕಲ್ಯಾಣ ಇಲಾಖೆ	: ಶ್ರೀಮತಿ ಟಿ.ಎಸ್. ಅರುಂಧತಿ
೭. ಯೋಜನಾ ಸಮನ್ವಯಾಧಿಕಾರಿ, ಸಮಗ್ರ ಗಿರಿಜನ ಅಭಿವೃದ್ಧಿ ಯೋಜನೆ	: ಶ್ರೀ ಶಿವಕುಮಾರ್. ಸಿ.
೮. ಉಪನಿರ್ದೇಶಕರು, ತೋಟಗಾರಿಕೆ ಇಲಾಖೆ	: ಶ್ರೀ ಕೆ.ಎಸ್. ಚಂದ್ರಶೇಖರ್
೯. ಉಪನಿರ್ದೇಶಕರು, ಪಶುಪಾಲನಾ ಇಲಾಖೆ	: ಡಾ॥ ಎ.ಬಿ. ತಮ್ಮಯ್ಯ(ಪ್ರಭಾರ)
೧೦. ಜಂಟಿ ನಿರ್ದೇಶಕರು, ಕೃಷಿ ಇಲಾಖೆ	: ಶ್ರೀ ಕೆ.ರಾಜು (ಪ್ರಭಾರ)
೧೧. ಸಹಾಯಕ ನಿರ್ದೇಶಕರು, ಮೀನುಗಾರಿಕೆ ಇಲಾಖೆ(ಶ್ರೇಣಿ-೧)	: ಶ್ರೀಮತಿ ಕೆ.ಟಿ. ದರ್ಶನ್
೧೨. ಉಪಅರಣ್ಯ ಸಂರಕ್ಷಣಾಧಿಕಾರಿ, ಸಾಮಾಜಿಕ ಅರಣ್ಯ ಇಲಾಖೆ	: ಶ್ರೀ ಗೋವರ್ಧನ್ ಸಿಂಗ್ ಎಂ.ಜಿ.
೧೩. ಉಪನಿಬಂಧಕರು, ಸಹಕಾರ ಇಲಾಖೆ	: ಶ್ರೀ ಡಿ. ಬಾಸ್ಕರ್ ಆಚಾರ್
೧೪. ಕಾರ್ಯಪಾಲಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಮಡಿಕೇರಿ.	: ಶ್ರೀ ಎಸ್.ಹೆಚ್. ಪ್ರಭು
೧೫. ಸಹಾಯಕ ನಿರ್ದೇಶಕರು, ರೇಷ್ಮೆ ಇಲಾಖೆ	: ಶ್ರೀ ಮಹಾದೇವಯ್ಯ ಎನ್. (ಪ್ರಭಾರ)
೧೬. ಉಪನಿರ್ದೇಶಕರು, ಖಾಗ್ರಾ	: ಶ್ರೀ ಸಿ.ಎನ್. ರಘು
೧೭. ಹಿರಿಯ ಭೂ ವಿಜ್ಞಾನಿ ಗಣಿ ಮತ್ತು ಭೂವಿಜ್ಞಾನ ಇಲಾಖೆ	: ಶ್ರೀಮತಿ ರೇಷ್ಮ ಬಿ.
೧೮. ಜಿಲ್ಲಾ ವಯಸ್ಕರ ಶಿಕ್ಷಣಾಧಿಕಾರಿ	: ಶ್ರೀ ಹೆಚ್.ಕೆ. ಪಾಂಡು
೧೯. ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ	: ಶ್ರೀ ರೇವಣ್ಣವರ್ ಎಂ.ಎಸ್ .
೨೦. ಜಿಲ್ಲಾ ಆಯುಷ್ ಅಧಿಕಾರಿ, ಆಯುಷ್ ಇಲಾಖೆ	: ಡಾ॥ ರಾಮಚಂದ್ರ ಬಿ.ಹೆಚ್ .
೨೧. ಶಿಕ್ಷಣಾಧಿಕಾರಿ, ಅಕ್ಷರ ದಾಸೋಹ	: ಶ್ರೀ ಹೆಚ್.ಕೆ. ಪಾಂಡು
೨೨. ಸಹಾಯಕ ನಿರ್ದೇಶಕರು, ಕೈಮಗ್ಗ ಮತ್ತು ಜವಳಿ	: ಶ್ರೀ ಗುರುಸ್ವಾಮಿ

ಮಾರ್ಚ್ 2020ರ ಡಿ.ಎಸ್.ಎಸ್. ಆನ್‌ಲೈನ್ ಎಂಪಿಕ್ ವರದಿ

ರೂ.ಲಕ್ಷಗಳಲ್ಲಿ

ಇಲಾಖೆ	ವಾರ್ಷಿಕ ಅನುದಾನ	ಆರಂಭಿಕ ಶಿಲ್ಕು	ಪೂರಕ ಹಂಚಿಕೆ	ವಾರ್ಷಿಕ ಗುರಿ	ಗುರಿ	ಬಿಡುಗಡೆ ಅನುದಾನ	ಮಾರ್ಚ್ 2019 ರವರೆಗಿನ ಗುರಿ	ಸಾಧನೆ	(ಸಾಧನೆ/ ಗುರಿ)%	(ಸಾಧನೆ/ ಬಿಡುಗಡೆ ಅನುದಾನ) %	(ಸಾಧನೆ/ ವಾರ್ಷಿಕ ಗುರಿ)%
ಕೃಷಿ ಇಲಾಖೆ	336.55	0	105.95	442.50	336.55	408.41	336.55	365.71	108.69	89.54	82.65
ಪಶುಪಾಲನಾ ಇಲಾಖೆ	895.41	0	0.00	895.41	850.41	895.35	850.41	805.18	94.68	89.93	89.92
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ	1349.58	0	0.00	1349.58	1349.58	1365.07	1343.83	1238.02	92.13	90.69	91.73
ಸಹಕಾರ ಇಲಾಖೆ	12.75	0	0.00	12.75	12.75	12.71	12.75	12.71	99.69	100.00	99.69
ಕೃಷಿ ಮಾರುಕಟ್ಟೆ	20.00	0	0	20.00	20.00	19.98	20.00	19.97	99.85	99.95	99.85
ಸಾರ್ವಜನಿಕ ಶಿಕ್ಷಣ ಇಲಾಖೆ	15908.72	0	-48.10	15860.62	15560.54	15882.92	15560.54	15241.38	97.95	95.96	96.10
ಯುವಜನ ಸೇವೆ ಮತ್ತು ಕ್ರೀಡಾ ಇಲಾಖೆ	226.01	0	0	226.01	226.01	225.89	226.01	150.87	66.75	66.79	66.75
ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ	3713.43	0	-156.80	3556.63	3700.73	3114.80	3700.73	2729.09	73.74	87.62	76.73
ಜಿಲ್ಲಾ ಯೋಜನಾ ಘಟಕ	43.80	0	0.00	43.80	43.80	43.74	43.80	36.60	83.56	83.68	83.57
ಮೀನುಗಾರಿಕೆ ಇಲಾಖೆ	127.67	0	0.00	127.67	127.67	127.67	127.67	107.50	84.20	84.20	84.20
ಸಾಮಾಜಿಕ ಅರಣ್ಯ ಇಲಾಖೆ	189.57	0	0.00	189.57	189.57	226.11	189.57	188.73	99.56	83.47	99.56
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ	3492.92	0	10.04	3502.96	3487.89	3365.86	3487.89	3226.27	92.50	95.85	92.10
ತೋಟಗಾರಿಕೆ ಇಲಾಖೆ	378.55	0	0.00	378.55	378.55	377.54	378.55	322.53	85.20	85.43	85.20
ಕನ್ನಡ ಮತ್ತು ಸಂಸ್ಕೃತಿ ಇಲಾಖೆ	33.00	0	0.00	33.00	33.00	32.99	33.00	32.05	87.88	87.91	87.88
ಸಣ್ಣ ನೀರಾವರಿ ಇಲಾಖೆ	115.15	0	0.00	115.15	94.33	94.32	94.33	84.60	89.69	89.70	73.47
ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ	73.37	0	0.00	73.37	73.37	73.30	73.37	66.20	90.23	90.32	90.23
ಲೋಕೋಪಯೋಗಿ ಕಾಮಗಾರಿಗಳು	271.68	0	0.00	271.68	271.68	271.64	271.68	240.52	88.53	88.54	88.53
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ	2208.04	0	19.58	2227.62	2214.35	2154.06	2214.35	1869.59	84.43	86.79	83.93
ವಿಜ್ಞಾನ ಮತ್ತು ತಂತ್ರಜ್ಞಾನ	6.00	0	0.00	6.00	6.00	5.99	6.00	5.36	89.33	89.45	89.30
ಪರಿಶಿಷ್ಟಜಾತಿ ಕಲ್ಯಾಣ ಇಲಾಖೆ	994.90	0	0.00	994.90	994.90	933.70	994.90	854.81	85.92	91.55	85.92
ರೇಷ್ಮೆ ಇಲಾಖೆ	31.90	0	3.50	35.40	35.40	35.36	35.40	22.07	62.35	62.42	62.35
ಕಾರ್ಮಿಕ ಮತ್ತು ಉದ್ಯೋಗ	57.80	0	0.00	57.80	57.80	57.78	57.80	48.51	83.93	83.95	83.92
ಗ್ರಾಮೋದ್ಯೋಗ ಮತ್ತು ಸಣ್ಣ ಉದ್ಯಮ	55.35	0	0.00	55.35	28.45	55.29	28.45	55.12	193.74	99.68	99.58
ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆ	1010.76	0	0.00	1010.76	1010.76	1005.07	1010.76	966.35	95.61	96.15	95.61
ಒಟ್ಟು	**31552.91**	**0**	**-65.83**	**31487.08**	**31104.09**	**30785.55**	**31098.34**	**28689.74**	**92.25**	**93.19**	**91.12**

ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ

ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯನ್ನು ಜಿಲ್ಲೆಯಲ್ಲಿ ದಿನಾಂಕ: 01.04.2007ರಿಂದ ಜಾರಿಗೊಳಿಸಿದ್ದು, ಈ ಯೋಜನೆಯು ಕೇಂದ್ರ ಸರ್ಕಾರದ ಯೋಜನೆಯಾಗಿರುತ್ತದೆ. ಅಕುಶಲ ದೈಹಿಕ ಕೆಲಸ ಮಾಡಲು ಇಚ್ಛಿಸುವ ಗ್ರಾಮೀಣ ಪ್ರದೇಶಗಳಲ್ಲಿನ ವಯಸ್ಕರಿಗೆ ಪ್ರತಿ ಕುಟುಂಬಕ್ಕೆ ಒಂದು ಆರ್ಥಿಕ ವರ್ಷದಲ್ಲಿ ಕನಿಷ್ಠ ನೂರು ದಿನಗಳ ಉದ್ಯೋಗ ಒದಗಿಸಿ ಗ್ರಾಮೀಣ ಜನರ ಜೀವನಕ್ಕೆ ಭದ್ರತೆ ಒದಗಿಸುವುದು ಈ ಯೋಜನೆಯ ಉದ್ದೇಶವಾಗಿರುತ್ತದೆ.

2019–20ನೇ ಸಾಲಿನಲ್ಲಿ ಜಿಲ್ಲೆಗೆ ಕೇಂದ್ರ ಸರ್ಕಾರದ ಅನುದಾನದಿಂದ ರೂ. 2,026.18 ಲಕ್ಷಗಳು ಹಾಗೂ ರಾಜ್ಯ ಸರ್ಕಾರದ ಅನುದಾನದಿಂದ ರೂ. 225.13 ಲಕ್ಷಗಳು ಹೀಗೆ ಒಟ್ಟು ರೂ. 2251.31 ಲಕ್ಷ ಬಿಡುಗಡೆಯಾಗಿದ್ದು, ರೂ.2,244.75 ಲಕ್ಷಗಳನ್ನು ವಿನಿಯೋಗಿಸಲಾಗಿದೆ. ಒಟ್ಟು 1,553 ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿರುತ್ತದೆ.

ಈ ಯೋಜನೆಯಡಿ ಮಡಿಕೇರಿ ತಾಲ್ಲೂಕಿನಲ್ಲಿ 26 ಗ್ರಾಮ ಪಂಚಾಯಿತಿಗಳಲ್ಲಿ 18,770 ಕುಟುಂಬಗಳು ನೋಂದಣಿಯಾಗಿದ್ದು, 18,734 ಉದ್ಯೋಗ ಚೀಟಿ ವಿತರಿಸಲಾಗಿದೆ. ಹಾಗೂ ಒಟ್ಟು 20,584 ಉಳಿತಾಯ ಖಾತೆ ತೆರೆದಿರುತ್ತಾರೆ.

ಸೋಮವಾರಪೇಟೆ ತಾಲ್ಲೂಕಿನಲ್ಲಿ 40 ಗ್ರಾಮ ಪಂಚಾಯಿತಿಗಳಲ್ಲಿ 25,922 ಕುಟುಂಬಗಳು ನೋಂದಣಿಯಾಗಿದ್ದು, 25,836 ಉದ್ಯೋಗ ಚೀಟಿ ವಿತರಿಸಲಾಗಿದೆ. ಹಾಗೂ ಒಟ್ಟು 34,700 ಉಳಿತಾಯ ಖಾತೆ ತೆರೆದಿರುತ್ತಾರೆ.

ವಿರಾಜಪೇಟೆ ತಾಲ್ಲೂಕಿನಲ್ಲಿ 38 ಗ್ರಾಮ ಪಂಚಾಯಿತಿಗಳ 22,008 ಕುಟುಂಬಗಳು ನೋಂದಣಿಯಾಗಿದ್ದು, 22,008 ಉದ್ಯೋಗ ಚೀಟಿ ವಿತರಿಸಲಾಗಿದೆ. ಹಾಗೂ ಒಟ್ಟು 23,019 ಉಳಿತಾಯ ಖಾತೆ ತೆರೆದಿರುತ್ತಾರೆ.

2019–20ನೇ ಸಾಲಿನಲ್ಲಿ 3 ತಾಲ್ಲೂಕುಗಳ ಒಟ್ಟು 104 ಗ್ರಾಮ ಪಂಚಾಯಿತಿಗಳ ಕಾಮಗಾರಿ ಗುಚ್ಛ (Shelf of project) ಒಟ್ಟು ಕಾಮಗಾರಿಗಳ ಸಂಖ್ಯೆ 14,028 ಆಗಿದ್ದು, ರೂ. 28,979.78 ಲಕ್ಷಗಳಿಗೆ ಅನುಮೋದನೆ ನೀಡಲಾಗಿದೆ. ಸದರಿ ಯೋಜನೆಯಡಿ 3 ತಾಲ್ಲೂಕುಗಳಿಗೆ ಅನುದಾನ ಬಿಡುಗಡೆ ಹಾಗೂ ಕೈಗೆತ್ತಿಕೊಳ್ಳಲಾದ ಕಾಮಗಾರಿಗಳ ಸಂಖ್ಯೆ ಈ ಕೆಳಕಂಡಂತಿದೆ.

ಕ್ರ. ಸಂ.	ತಾಲ್ಲೂಕು	ಕೇಂದ್ರ ಸರ್ಕಾರದ ಅನುದಾನ (ರೂ. ಲಕ್ಷಗಳಲ್ಲಿ)	ರಾಜ್ಯ ಸರ್ಕಾರದ ಅನುದಾನ (ರೂ. ಲಕ್ಷಗಳಲ್ಲಿ)	ಒಟ್ಟು ಕೈಗೊಂಡ ಕಾಮಗಾರಿಗಳ ಸಂಖ್ಯೆ	ಒಟ್ಟು ವೆಚ್ಚ (ರೂ. ಲಕ್ಷಗಳಲ್ಲಿ)
1.	ಮಡಿಕೇರಿ	299.54	33.28	526	356.41
2.	ಸೋಮವಾರಪೇಟೆ	902.39	100.27	1,069	1,144.49
3.	ವಿರಾಜಪೇಟೆ	589.68	65.52	451	663.85
4	ಅನುಷ್ಠಾನ ಇಲಾಖೆಗಳು	162.58	18.06	-	-
5	ಆಡಳಿತಾತ್ಮಕ ವೆಚ್ಚ	72.00	8.00	-	80.00
ಒಟ್ಟು		**2,026.18**	**225.13**	**2,046**	**2,244.75**

ಎನ್.ಆರ್.ಎಲ್.ಎಂ/ಸಂಜೀವಿನಿ ಯೋಜನೆ

2019–20ನೇ ಸಾಲಿನಲ್ಲಿ ಎನ್.ಆರ್.ಎಲ್.ಎಂ/ ಸಂಜೀವಿನಿ ಯೋಜನೆಯಡಿ ಜಿಲ್ಲೆಯಲ್ಲಿ ಒಟ್ಟು 21 ಗ್ರಾಮ ಪಂಚಾಯಿತಿ ಮಟ್ಟದ ಒಕ್ಕೂಟಗಳನ್ನು ರಚಿಸಲಾಗಿದ್ದು, ಈ ಹಿಂದಿನ ಸಾಲಿನಲ್ಲಿ ರಚನೆಯಾಗಿ ಕಾರ್ಯನಿರ್ವಹಿಸುತ್ತಿರುವ 32 ಒಕ್ಕೂಟಗಳಿಗೆ ಸರ್ಕಾರದಿಂದ ಸಮುದಾಯ ಬಂಡವಾಳ ನಿಧಿ (ಸಿ.ಐ.ಎಫ್)ಯಾಗಿ ರೂ.4,11,00,000/– (ರೂಪಾಯಿ ನಾಲ್ಕು ಕೋಟಿ ಹನ್ನೊಂದು ಲಕ್ಷ ಮಾತ್ರ)ಗಳ ಅನುದಾನವನ್ನು ಬಿಡುಗಡೆ ಮಾಡಲಾಗಿರುತ್ತದೆ. ಈ ಅನುದಾನವನ್ನು ಸಂಜೀವಿನಿ ಗ್ರಾಮ ಪಂಚಾಯಿತಿ ಮಟ್ಟದ ಒಕ್ಕೂಟಗಳಿಂದ ಮಹಿಳಾ ಗುಂಪುಗಳಿಗೆ ವಾರ್ಷಿಕ ಶೇ.12 ರ ಬಡ್ಡಿಯ ದರದಲ್ಲಿ ಸಾಲವನ್ನು ನೀಡಲಾಗಿರುತ್ತದೆ.

ಸ್ವಚ್ಛ ಭಾರತ ಮಿಷನ್

ವೈಯಕ್ತಿಕ ಶುಚಿತ್ವ ಮತ್ತು ನಮ್ಮ ಪರಿಸರದ ಶುಚಿತ್ವ ಕಾಪಾಡುವುದು ಅತೀ ಮುಖ್ಯ, ಅನೈರ್ಮಲ್ಯ ಪರಿಸರದಿಂದ ಅನೇಕ ರೋಗ ರುಜಿನಗಳು ಹುಟ್ಟಿಕೊಳ್ಳುತ್ತವೆ. ಶೇ. 70 ರಷ್ಟು ಕಾಯಿಲೆಗಳು ಕಲುಷಿತ ನೀರು ಹಾಗೂ ಅಸ್ವಚ್ಛತೆಯಿಂದ ಉಂಟಾಗುತ್ತದೆ. ಈ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರವು "ಸ್ವಚ್ಛ ಭಾರತ ಮಿಷನ್" ಎಂಬ ಕಾರ್ಯಕ್ರಮ ಅಕ್ಟೋಬರ್ 2, 2014ರ ಗಾಂಧಿ ಜಯಂತಿಯ ದಿನದಂದು ಜಾರಿಗೆ ಬಂದಿರುತ್ತದೆ.

ಕೊಡಗು ಜಿಲ್ಲೆಯನ್ನು "ಬಯಲು ಬಹಿರ್ದೆಸೆ ಮುಕ್ತ" ಜಿಲ್ಲೆಯನ್ನಾಗಿ ಸರ್ಕಾರ ಅಕ್ಟೋಬರ್ 2, 2016ರಂದು ಘೋಷಣೆ ಮಾಡಲಾಗಿದ್ದು, ODF ಸುಸ್ಥಿರತೆ ಕಾಪಾಡಲು ಕೌಟಂಬಿಕ, ಸಾರ್ವಜನಿಕ, ಸಾಂಸ್ಥಿಕ ಶೌಚಾಲಯ ಬಳಕೆ ಹಾಗೂ ನಿರ್ವಹಣೆ ಬಗ್ಗೆ ವಿವಿಧ ಮಾಧ್ಯಮಗಳ ಮುಖಾಂತರ ಜನ ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿರುತ್ತದೆ.

2020–21ನೇ ಸಾಲಿನಲ್ಲಿ LOB ಹಾಗೂ NOLBಯಲ್ಲಿ ಒಟ್ಟು 1222 ವೈಯಕ್ತಿಕ ಶೌಚಾಲಯಗಳ ಪೈಕಿ 1117 ವೈಯಕ್ತಿಕ ಶೌಚಾಲಯಗಳು ಪೂರ್ಣಗೊಂಡಿದೆ ಹಾಗೂ ಘನ ಮತ್ತು ದ್ರವ ತ್ಯಾಜ್ಯ ವಿಲೇವಾರಿ ಘಟಕ ನಿರ್ಮಾಣ ಮಾಡಲು 94 ಗ್ರಾಮ ಪಂಚಾಯತ್‌ಗಳಿಗೆ ಸರ್ಕಾರದಿಂದ ಮಂಜೂರಾತಿ ದೊರೆತಿದ್ದು, ವೈಜ್ಞಾನಿಕ ರೀತಿಯಲ್ಲಿ ಕಸ ವಿಲೇವಾರಿ ಮಾಡಲು ವಿವಿಧ ಹಂತದಲ್ಲಿ ತರಬೇತಿ ಹಾಗೂ ಜನ ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ. ಘನ ದ್ರವ ತ್ಯಾಜ್ಯ ನಿರ್ವಹಣೆಯಲ್ಲಿ ಸುಸ್ಥಿರತೆ ಕಾಪಾಡುವಲ್ಲಿ ನಿರಂತರ ಜಾಗೃತಿ ಅವಶ್ಯಕತೆ ಇದ್ದು ಕಾರ್ಯಕ್ರಮವನ್ನು ರೂಪಿಸಲಾಗಿದೆ.

ಸಾರ್ವಜನಿಕ ಶಿಕ್ಷಣ ಇಲಾಖೆ

ಅಕ್ಷರದಾಸೋಹಕಾರ್ಯಕ್ರಮ :

ಪ್ರಾಥಮಿಕ ಶಿಕ್ಷಣ ಉತ್ತೇಜನಕ್ಕಾಗಿ 2019–20ನೇ ಸಾಲಿನ ಅಕ್ಷರದಾಸೋಹ ಕಾರ್ಯಕ್ರಮಕ್ಕೆ ರೂ.1404.31ಲಕ್ಷ ಅನುದಾನ ಬಿಡುಗಡೆಯಾಗಿದ್ದು, ಈ ಅನುದಾನದಲ್ಲಿ ಮಾರ್ಚ್ 2020ರ ಅಂತ್ಯಕ್ಕೆ ರೂ.1159.34 ಲಕ್ಷ ಅನುದಾನವನ್ನು ಖರ್ಚು ಮಾಡಿದ್ದು 39165 ವಿದ್ಯಾರ್ಥಿಗಳಿಗೆ ಮಧ್ಯಾಹ್ನ ಬಿಸಿಯೂಟ ಹಾಗೂ ಕೆನೆಭರಿತ ಹಾಲನ್ನು ನೀಡಲಾಗಿರುತ್ತದೆ.

ಶಾಲಾ ಮಾತೆಯರು /ಆಯಾಗಳ ನೇಮಕಾತಿ

2019–20 ನೇ ಸಾಲಿನಲ್ಲಿ ರೂ. 90.00 ಲಕ್ಷ ಅನುದಾನ ಬಿಡುಗಡೆ ಮಾಡಿದ್ದು, ಅನುದಾನದಲ್ಲಿ ರೂ 76.20 ಲಕ್ಷಗಳ ಅನುದಾನವನ್ನು ಶಾಲಾ ಮಾತೆಯರು /ಆಯಾಗಳ ವೇತನಕ್ಕೆ ಖರ್ಚು ಭರಿಸಲಾಗಿದೆ.

ಪರಿವೀಕ್ಷಣೆ (ಉಪನಿರ್ದೇಶಕರ ಕಚೇರಿ ವೇತನ)

2019–20 ನೇ ಸಾಲಿನಲ್ಲಿ ರೂ.108.04 ಲಕ್ಷ ಅನುದಾನ ಬಿಡುಗಡೆ ಮಾಡಿದ್ದು, ಅನುದಾನದಲ್ಲಿ ರೂ 104.20 ಲಕ್ಷಗಳ ಅನುದಾನವನ್ನು ಅಧಿಕಾರಿಗಳ/ಸಿಬ್ಬಂದಿ ವೇತನಕ್ಕೆ ಖರ್ಚು ಭರಿಸಲಾಗಿದೆ.

ನಿರ್ವಹಣೆ ಮತ್ತು ಸಹಾಯಾನುದಾನ

2019–20 ನೇ ಸಾಲಿನಲ್ಲಿ ರೂ. 2455.00 ಲಕ್ಷ ಅನುದಾನ ಬಿಡುಗಡೆ ಮಾಡಿದ್ದು, ಅನುದಾನದಲ್ಲಿ ರೂ 2430.30 ಲಕ್ಷಗಳ ಅನುದಾನವನ್ನು ಶಿಕ್ಷಕರ ವೇತನಕ್ಕೆ ಖರ್ಚು ಭರಿಸಲಾಗಿದೆ.

ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ:

2019–20 ನೇ ಸಾಲಿನಲ್ಲಿ ರೂ10.00 ಲಕ್ಷ ಅನುದಾನ ಬಿಡುಗಡೆ ಮಾಡಿದ್ದು, ಖಾಲಿ ಹುದ್ದೆಯಾದ ಕಾರಣ ಖರ್ಚು ಭರಿಸಿರುವುದಿಲ್ಲ

ಸರ್ಕಾರಿ ಸೆಕೆಂಡರಿ ಶಾಲೆಗಳ ಸೇರ್ಪಡೆ ಮತ್ತು ಮಾರ್ಪಾಡು.

ಸರ್ಕಾರಿ ಪ್ರೌಢಶಾಲೆಗಳ ದುರಸ್ತಿ ಮಾಡಲು 2019–20 ನೇ ಸಾಲಿಗೆ ರೂ .125.00ಲಕ್ಷ ಅನುದಾನವನ್ನು ಬಿಡುಗಡೆ ಮಾಡಿದ್ದು ರೂ 125.00ಲಕ್ಷ ಖರ್ಚು ಭರಿಸಿ, ಈ ಕೆಳಕಾಣಿಸಿದ ಶಾಲೆಗಳ ದುರಸ್ಥಿ ಕಾರ್ಯ ಕೈಗೊಳ್ಳಲಾಗಿದೆ.

ಮಡಿಕೇರಿ ತಾಲ್ಲೂಕು

ಸರ್ಕಾರಿ ಪದವಿ ಪೂರ್ವ ಕಾಲೇಜು ಪ್ರೌಢಶಾಲಾ ವಿಭಾಗ ಮಡಿಕೇರಿ, 2.00 ಸರ್ಕಾರಿ ಪದವಿ ಪೂರ್ವ ಕಾಲೇಜು ಪ್ರೌಢಶಾಲಾ ನಾಪೋಕ್ಲು, 2.00 ಸರ್ಕಾರಿ ಪ್ರೌಢಶಾಲೆ ಹೊದವಾಡ, 2.00 ಸರ್ಕಾರಿ ಪ್ರೌಢಶಾಲೆ ಮೂರ್ನಾಡು, 7.00 ಸರ್ಕಾರಿ ಪ್ರೌಢಶಾಲೆ ಕಡಗದಾಳು, 3.50 ಸರ್ಕಾರಿ ಪ್ರೌಢಶಾಲೆ ಹಾಕತ್ತೂರು, 6.00 ಸರ್ಕಾರಿ ಪ್ರೌಢಶಾಲೆ ಚೆಂಬು, 2.50 ಸರ್ಕಾರಿ ಪ್ರೌಢಶಾಲೆ ಕರಿಕೆ, 3.00ಸರ್ಕಾರಿ ಪ್ರೌಢಶಾಲೆ ಗಾಳಿಬೀಡು, 2.00 ಸರ್ಕಾರಿ ಪ್ರೌಢಶಾಲೆ ಮಕ್ಕಂದೂರು, 5.00

ಸೋಮವಾರಪೇಟೆ ತಾಲ್ಲೂಕು

ಸ.ಪ.ಪೂ ಕಾಲೇಜು ಆಲೂರು ಸಿದ್ದಾಪುರ(ಪ್ರೌ.ಶಾಲಾ ವಿಭಾಗ), 1.50 ಸ.ಪ್ರೌ.ಶಾಲೆ ಬೆಸೂರು, 2.00 ಸ.ಪ್ರೌ.ಶಾಲೆ ಕಾನ್‌ಬೈಲ್, 2.00 ಸ.ಪ್ರೌ.ಶಾಲೆ ಕೂಡುಮಂಗಳೂರು(ಪ್ರೌ.ಶಾ.ವಿ), 2.00 ಸ.ಪ್ರೌ.ಶಾಲೆ,ನಿಡ್ತ, 1.00

ಸ.ಪ್ರೌ.ಶಾಲೆ, ಹಂಡ್ಲಿ, 3.00 ಸ.ಪ್ರೌ.ಶಾಲೆ, ತೊರೆನೂರು, 2.00 ಸ.ಪ್ರೌ.ಶಾಲೆ ಮಾದಾಪುರ, 2.00 ಸ.ಪ.ಪೂ. ಕಾಲೇಜು (ಪ್ರೌಢಶಾಲಾ ವಿಭಾಗ) ಕುಶಾಲನಗರ, 4.00 ಸ.ಪ.ಪೂ. ಕಾಲೇಜು ಐಗೂರು(ಪ್ರೌ.ಶಾ.ವಿ), 3.00 ಸ.ಪ್ರೌ. ಶಾಲೆ ಕೊಡ್ಲಿಪೇಟೆ, 3.00 ಸ.ಪ್ರೌಶಾಲೆ ಕುಶಾಲನಗರ (ಬಾಲಿಕಾ) , 4.50 ಸ.ಪ.ಪೂ ಕಾಲೇಜು ಸುಂಟಿಕೊಪ್ಪ (ಪ್ರೌಢ ಶಾಲಾ ವಿಭಾಗ), 3.00 ಸ.ಪ್ರೌ. ಶಾಲೆ ಸೂರ್ಲಬ್ಬಿ, 3.00 ಸ.ಪ.ಪೂ ಕಾಲೇಜು ಸೋಮವಾರಪೇಟೆ. (ಪ್ರೌಢ ಶಾಲಾ ವಿಭಾಗ), 2.00 ಸ.ಪ್ರೌ. ಶಾಲೆ ಕಿರಗಂದೂರು, 4.00 ಸ.ಪ್ರೌ. ಶಾಲೆ ನೆಲ್ಯಹುದಿಕೇರಿ, 2.00 ಸ.ಪ್ರೌ. ಶಾಲೆ ಬಸವನಹಳ್ಳಿ, 3.00 ಸ.ಪ್ರೌ. ಶಾಲೆ ಶಿರಂಗಾಲ, 2.00 ಸ.ಪ್ರೌ. ಶಾಲೆ ಗೋಣಿಮರೂರು, 1.00

ವಿರಾಜಪೇಟೆ ತಾಲ್ಲೂಕು

ಸ.ಪ್ರೌಢ ಶಾಲೆ ಹೆಗ್ಗಳ, 2.00 ಸ.ಪ್ರೌಢ ಶಾಲೆ ತಿತಿಮತಿ, 4.00 ಸ.ಪ್ರೌಢ ಶಾಲೆ ಗೋಣಿಕೊಪ್ಪ, 3.00 ಸ.ಪ್ರೌಢ.ಶಾಲೆ ಮಾಲ್ದಾರೆ, 3.00 ಸ.ಪ್ರೌಢ.ಶಾಲೆ ಚನ್ನನಕೋಟೆ, 3.00 ಸ.ಪ್ರೌಢ.ಶಾಲೆ ಬಿಳಗುಂದ, 2.00ಸ.ಪ.ಪೂರ್ವ ಕಾಲೇಜು ಪೊನ್ನಂಪೇಟೆ, 4.00 ಸ.ಪ್ರೌಢ ಶಾಲೆ ಕುಟ್ಟ, 3.00 ಸ.ಪ್ರೌಢ ಶಾಲೆ ಪಾಲಿಬೆಟ್ಟ, 3.00 ಸ.ಪ್ರೌಢ ಶಾಲೆ ಮಾಯಮುಡಿ, 3.00 ಸ.ಪ.ಪೂರ್ವ ಕಾಲೇಜು ವಿರಾಜಪೇಟೆ, 4.00 ಸ.ಪ್ರೌಢ ಶಾಲೆ ಟಿ.ಶೇಟಿಗೇರಿ, 3.00 ಸ.ಪ್ರೌಢ ಶಾಲೆ ಕೊಂಡಂಗೇರಿ, 3.00

ಏಳು ವರ್ಷಗಳಿಂದ ಅಸ್ತಿತ್ವದಲ್ಲಿರುವ ಖಾಸಗಿ ಪ್ರೌಢಶಾಲೆಗಳ ಶಿಕ್ಷಕರುಗಳಿಗೆ ವೇತನ ಪಾವತಿ:

ಸೋಮವಾರಪೇಟೆ ತಾಲ್ಲೂಕಿನ 1. ಮೂಕಾಂಬಿಕ ಪ್ರೌಢಶಾಲೆ, ಕುಶಾಲನಗರ, 2. ಶ್ರೀ.ವಿಘ್ನೇಶ್ವರ ಬಾಲಿಕಾ ಪ್ರೌಢಶಾಲೆ, ಶನಿವಾರಸಂತೆ 3 ಶ್ರೀ ರಾಜರಾಜೇಶ್ವರಿ ಪ್ರೌಢಶಾಲೆ ಮಡಿಕೇರಿ ಈ ಶಾಲೆಗಳ ಶಿಕ್ಷಕರಿಗೆ ವೇತನ ಪಾವತಿಗಾಗಿ ರೂ 130.00 ಲಕ್ಷ ಅನುದಾನ ಬಿಡುಗಡೆಯಾಗಿದ್ದು, ಈ ಅನುದಾನದಲ್ಲಿ ಮಾರ್ಚ್ 2019ರ ಅಂತ್ಯಕ್ಕೆ ರೂ 127.50 ಲಕ್ಷ ಖರ್ಚು ಭರಿಸಿ ಶಿಕ್ಷಕರುಗಳಿಗೆ ವೇತನ ಪಾವತಿಸಿದೆ.

ಧನ ಸಹಾಯ ಮತ್ತು ಶುಲ್ಕ ಮರುಪಾವತಿ:

2019–20 ನೇ ಸಾಲಿನಲ್ಲಿ ಧನ ಸಹಾಯ ಮತ್ತು ಶುಲ್ಕ ಮರುಪಾವತಿಗಾಗಿ ರೂ. 25.79 ಲಕ್ಷ ಅನುದಾನ ಬಿಡುಗಡೆಯಾಗಿದ್ದು, 8 ರಿಂದ 10ನೇ ತರಗತಿ ಪ.ಜಾತಿ ಮತ್ತು ಪ.ಪಂಗಡದ ವಿದ್ಯಾರ್ಥಿಗಳಿಗೆ ಮತ್ತು ಇತರೆ ಹೆಣ್ಣು ಮಕ್ಕಳಿಗೆ ಶಾಲಾ ಶುಲ್ಕ ಮರುಪಾವತಿಗಾಗಿ ಹಾಗೂ ಏಪ್ರಿಲ್–2019ರ ಎಸ್.ಎಸ್.ಎಲ್.ಸಿ ಪರೀಕ್ಷೆಗೆ ಹಾಜರಾದ ಪ.ಜಾತಿ, ಪ.ಪಂಗಡ ಮತ್ತು ಇತರೆ ಹೆಣ್ಣು ಮಕ್ಕಳ ಪರೀಕ್ಷಾ ಶುಲ್ಕ ಮರುಪಾವತಿಗಾಗಿ ರೂ.20.70 ಗಳನ್ನು ಖರ್ಚು ಭರಿಸಲಾಗಿದೆ.

ಸರ್ಕಾರಿ ಪ್ರೌಢಶಾಲೆಗಳಿಗೆ ಸಾಮಾಗ್ರಿ ಸರಬರಾಜು

2019–20 ನೇ ಸಾಲಿನಲ್ಲಿ ಸಾಮಾಗ್ರಿ ಸರಬರಾಜು ಮಾಡಲು ರೂ.35.00 ಲಕ್ಷ ಬಿಡುಗಡೆಯಾಗಿದ್ದು, ಈ ಅನುದಾನದಲ್ಲಿ ಜಿಲ್ಲೆಯ ಸರ್ಕಾರಿ ಪ್ರೌಢಶಾಲೆಗಳಿಗೆ ಸರ್ಕಾರಿ ಪ್ರೌಢಶಾಲೆಗಳಿಗೆ ಕಲಿಕ ಸಾಮಾಗ್ರಿಗಳಾದ ಕಂಪ್ಯೂಟರ್, ಪ್ರೊಜೆಕ್ಟರ್, ಯು.ಪಿ.ಎಸ್ ಮತ್ತು Interactive boardಗಳನ್ನು ಖರೀದಿಗೆ ಬಿಡುಗಡೆ ಮಾಡಲಾಗಿದೆ.

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ

1. 2205–00–104–0–26 (ಕ್ರೀಡಾಕೂಟ ರ್‍ಯಾಲಿಗಳ ಸಂಘಟನೆ ಮತ್ತು ಅದರಲ್ಲಿ ಭಾಗವಹಿಸುವವರಿಗೆ ಪ್ರಯಾಣ ಭತ್ಯೆ/ದಿನ ಭತ್ಯೆ ಪಾವತಿ):– ಆರ್ಥಿಕ: ರೂ. 40.00 ಲಕ್ಷ , ಭೌತಿಕ: 26, ಸಾಧನೆ: 58.25%

ಈ ಕಾರ್ಯಕ್ರಮದಡಿಯಲ್ಲಿ ರೂ. 40.00 ಲಕ್ಷ ಅನುದಾನ ಸರ್ಕಾರದಿಂದ ಮಂಜೂರಾಗಿದ್ದು, ಜಿಲ್ಲಾ ಪಂಚಾಯತ್‌ನಿಂದ ರೂ. 40.00 ಲಕ್ಷ ಬಿಡುಗಡೆಯಾಗಿರುತ್ತದೆ. ಈ ಅನುದಾನದಲ್ಲಿ ಜಿಲ್ಲೆಯ ಶಾಲಾ/ ಕಾಲೇಜು ವಿದ್ಯಾರ್ಥಿಗಳಿಗೆ ಹಾಗೂ ಯುವಕ/ಯುವತಿಯರಿಗೆ ಜಿಲ್ಲಾ ಪಂಚಾಯತ್ ವತಿಯಿಂದ ತಾಲ್ಲೂಕು ಹಾಗೂ ಜಿಲ್ಲಾ ಮಟ್ಟದ ದಸರಾ ಕ್ರೀಡಾಕೂಟ, ಹೋಬಳಿ ಮಟ್ಟದ ಗ್ರಾಮಿಣ ಕ್ರೀಡಾಕೂಟ ಸಂಘಟಿಸಲಾಗಿರುತ್ತದೆ, ಜಿಲ್ಲಾ ಮಟ್ಟದ ಯುವಜನ ಮೇಳ, ಯುವಜನೋತ್ಸವ, ಕಾರ್ಯಕ್ರಮಗಳನ್ನು ಏರ್ಪಡಿಸಲಾಗಿರುತ್ತದೆ. ರಾಜ್ಯ ಸರ್ಕಾರಿ ನೌಕರರಿಗೆ ಜಿಲ್ಲಾ ಮಟ್ಟದ ಸರ್ಕಾರಿ ನೌಕರರ ಕ್ರೀಡಾಕೂಟವನ್ನು ಏರ್ಪಡಿಸಲಾಗಿರುತ್ತದೆ. ವಿಭಾಗ ಹಾಗೂ ರಾಜ್ಯ ಮಟ್ಟದ ಯುವಜನ ಮೇಳ ಹಾಗೂ ದಸರಾ ಕ್ರೀಡಾಕೂಟದಲ್ಲಿ ಭಾಗವಹಿಸಿದ ಕೊಡಗು ಜಿಲ್ಲೆಯ ಕ್ರೀಡಾಪಟುಗಳು/ ಸ್ಪಾರ್ಧಾಳುಗಳಿಗೆ ಪ್ರಯಾಣಭತ್ಯೆ ಹಾಗೂ ದಿನಭತ್ಯೆ ಪಾವತಿಸಲಾಗಿರುತ್ತದೆ. ಇಲಾಖೆಯಿಂದ ನಡೆಸುತ್ತಿರುವ ಕ್ರೀಡಾಶಾಲೆ ಕೂಡಿಗೆ ಕ್ರೀಡಾ ಶಾಲೆಗೆ 2020–21ನೇ ಸಾಲಿಗೆ ಪ್ರತಿಭಾನ್ವಿತ ಕ್ರೀಡಾಪಟುಗಳ ಆಯ್ಕೆಯನ್ನು ಮಾಡಲಾಗಿರುತ್ತದೆ. ರಾಷ್ಟ್ರೀಯ ಹಬ್ಬಗಳ ಪ್ರಯುಕ್ತ ಆಟೋಟ ಮತ್ತು ಟೇಬಲ್ ಟೆನ್ನೀಸ್ ಪಂದ್ಯಾವಳಿಗಳನ್ನು ಏರ್ಪಡಿಸಲಾಗಿರುತ್ತದೆ.

2. 2205–00–104–0–27 (ನಿರ್ದೇಶನ ಮತ್ತು ಆಡಳಿತ ಸಹಾಯಕ ಯುವ ಸಬಲೀಕರಣ ಮತ್ತು ಕ್ರೀಡಾ ಅಧಿಕಾರಿಗಳು):– ಆರ್ಥಿಕ: ರೂ. 8.00 ಲಕ್ಷ , ಭೌತಿಕ: 2, ಸಾಧನೆ: 96%

ಈ ಕಾರ್ಯಕ್ರಮದಡಿಯಲ್ಲಿ ರೂ. 8.00 ಲಕ್ಷ ಅನುದಾನ ಸರ್ಕಾರದಿಂದ ಮಂಜೂರಾಗಿದ್ದು, ಜಿಲ್ಲಾ ಪಂಚಾಯತ್‌ನಿಂದ ರೂ.8.00 ಲಕ್ಷ ಬಿಡುಗಡೆಯಾಗಿರುತ್ತದೆ. ಈ ಅನುದಾನದಲ್ಲಿ ಸಹಾಯಕ ನಿರ್ದೇಶಕರ ಹಾಗೂ ದ್ವಿತೀಯ ದರ್ಜೆ ಸಹಾಯಕರ ಫೆಬ್ರವರಿ–19 ರಿಂದ ಅಕ್ಟೋಬರ್–19ರ ವರೆಗೆ ವೇತನ ಹಾಗೂ ಅರಿಯರ್ಸ್ ಬಿಲ್ಲು ಭರಿಸಲಾಗಿರುತ್ತದೆ.

2.1 2205–00–104–0–27 (ಕಚೇರಿ ವೆಚ್ಚ):– ಆರ್ಥಿಕ: ರೂ. 3.67 ಲಕ್ಷ , ಭೌತಿಕ: 2, ಸಾಧನೆ: 41.41%

ಈ ಕಾರ್ಯಕ್ರಮದಡಿಯಲ್ಲಿ ರೂ. 3.67 ಲಕ್ಷ ಅನುದಾನ ಸರ್ಕಾರದಿಂದ ಮಂಜೂರಾಗಿದ್ದು, ಜಿಲ್ಲಾ ಪಂಚಾಯತ್‌ನಿಂದ ರೂ. 3.67 ಲಕ್ಷ ಬಿಡುಗಡೆಯಾಗಿರುತ್ತದೆ. ಈ ಅನುದಾನದಲ್ಲಿ ಕಚೇರಿ ವೆಚ್ಚ ಭರಿಸಲಾಗುತ್ತಿದೆ.

3. 2205–00–104–0–28 (ಕ್ರೀಡಾಂಗಣ ಮತ್ತು ಇತರೆಗಳ ನಿರ್ಮಾಣ ಮತ್ತು ನಿರ್ವಾಹಣೆ):– ಆರ್ಥಿಕ: ರೂ. 70.00 ಲಕ್ಷ , ಭೌತಿಕ: 17, ಸಾಧನೆ: 78.30%:–

ಈ ಕಾರ್ಯಕ್ರಮದಡಿಯಲ್ಲಿ ರೂ. 70.00 ಲಕ್ಷ ಅನುದಾನ ಸರ್ಕಾರದಿಂದ ಮಂಜೂರಾಗಿದ್ದು, ಜಿಲ್ಲಾ ಪಂಚಾಯತ್‌ನಿಂದ ರೂ. 70.00 ಲಕ್ಷ ಬಿಡುಗಡೆಯಾಗಿರುತ್ತದೆ. ಸದರಿ ಅನುದಾನದಲ್ಲಿ ಜಿಲ್ಲಾ ಕ್ರೀಡಾಂಗಣದ ನಿರ್ವಹಣೆ(ಈಜುಕೊಳ, ಒಳಾಂಗಣ ಕ್ರೀಡಾಂಗಣ, ಜಿಲ್ಲಾ ಕ್ರೀಡಾಂಗಣಕ್ಕೆ ಸ್ವಚ್ಚತಾ ಸಾಮಗ್ರಿಗಳ ಖರೀದಿ, ಸಿಬ್ಬಂದಿ ವೇತನ ಪಾವತಿ, ವಿದ್ಯುತ್‌ಬಿಲ್ಲು ಪಾವತಿ, ಇತರೇ) ಪೊನ್ನಂಪೇಟೆ ತಾಲ್ಲೂಕು ಕ್ರೀಡಾಂಗಣದಲ್ಲಿರುವ ಸಿಂಥೆಟಿಕ್ ಹಾಕಿ ಟರ್ಫ್ ನಿರ್ವಹಣೆ(ವಿದ್ಯುತ್‌ಬಿಲ್ಲು ಪಾವತಿ, ಇತರೇ) ಹಾಗೂ ಈ ಕೆಳಕಂಡ ಕ್ರೀಡಾಂಗಣಗಳ ಅಭಿವೃದ್ಧಿ ಹಾಗೂ ದುರಸ್ಥಿಗಾಗಿ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗದಿಂದ ಉಪಯೋಗಿಸಲಾಗಿರುತ್ತದೆ.

ಕ್ರ.ಸಂ	ಕ್ರೀಡಾಂಗಣದ ವಿವರ	ಅನುದಾನ ರೂ.
1	ಜಿಲ್ಲಾ ಕ್ರೀಡಾಂಗಣದ ಟ್ರ್ಯಾಕ್‌ನ ಸುತ್ತಲಿರುವ ಹಳೆಯ ಸ್ಲ್ಯಾಬ್‌ಗಳನ್ನು ತೆಗೆದು ಹೊಸ ಸ್ಲ್ಯಾಬ್‌ಗಳನ್ನು ಅಳವಡಿಸುವುದು ಹಾಗೂ ರಸ್ತೆ ಕಾಮಗಾರಿ	3.55 ಲಕ್ಷ
2	ಜಿಲ್ಲಾ ಕ್ರೀಡಾಂಗಣದ ಮೆಲ್ಚಾವಣಿ ದುರಸ್ಥಿ ಕಾಮಗಾರಿ	4.90 ಲಕ್ಷ
3	ಕ್ರೀಡಾಂಗಣದ ಒಳಭಾಗದಲ್ಲಿರುವ ಮೆಟ್ಟಿಲುಗಳಿಗೆ ಟೈಲ್ಸ್ ಅಳವಡಿಕೆ, ನೀರಿನ ಟ್ಯಾಂಕ್ ಅಳವಡಿಕೆ ಕಾಮಗಾರಿ.	4.90 ಲಕ್ಷ
4	ವಿರಾಜಪೇಟೆ ತಾಲ್ಲೂಕು ಪೊನ್ನಂಪೇಟೆ ತಾಲ್ಲೂಕು ಮಿನಿ ಕ್ರೀಡಾಂಗಣದ ದುರಸ್ಥಿ ಕಾಮಗಾರಿ	3.00 ಲಕ್ಷ
5	ಸೋಮವಾರಪೇಟೆ ತಾಲ್ಲೂಕು ಮಿನಿ ಕ್ರೀಡಾಂಗಣದ ದುರಸ್ಥಿ ಕಾಮಗಾರಿ	3.00 ಲಕ್ಷ
6	ಮಡಿಕೇರಿ ತಾಲ್ಲೂಕು ನಾಪೋಕ್ಲು ತಾಲ್ಲೂಕು ಮಿನಿ ಕ್ರೀಡಾಂಗಣದ ದುರಸ್ಥಿ ಕಾಮಗಾರಿ	3.00 ಲಕ್ಷ
7	ಈಜುಕೊಳದ ದುರಸ್ಥಿ ಕಾಮಗಾರಿ	3.00 ಲಕ್ಷ
8	ಒಳಾಂಗಣ ಕ್ರೀಡಾಂಗಣದ ದುರಸ್ಥಿ ಕಾಮಗಾರಿ	3.00 ಲಕ್ಷ
	ಒಟ್ಟು ರೂ.	**28.35 ಲಕ್ಷ**

ವರ್ಷಾಂತ್ಯಕ್ಕೆ ಉಳಿಕೆಯಾದ ಅನುದಾನವನ್ನು ಈ ಕೆಳಕಂಡ ಕ್ರೀಡಾಂಗಣಗಳ ಅಭಿವೃದ್ಧಿ ಹಾಗೂ ದುರಸ್ಥಿಗಾಗಿ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗದಿಂದ ಉಪಯೋಗಿಸಲಾಗಿರುತ್ತದೆ.

ಕ್ರ.ಸಂ	ಕ್ರೀಡಾಂಗಣದ ವಿವರ	ಅನುದಾನ ರೂ.
1	ಒಳಾಂಗಣ ಕ್ರೀಡಾಂಗಣದಲ್ಲಿರುವ ಷಟಲ್ ಬ್ಯಾಡ್ಮಿಂಟನ್ ಕೋರ್ಟ್‌ಗೆ ಸುಣ್ಣ–ಬಣ್ಣ ಬಳಿಯುವುದು.	4.90 ಲಕ್ಷ
2	ಒಳಾಂಗಣ ಕ್ರೀಡಾಂಗಣದ ಷಟಲ್ ಬ್ಯಾಡ್ಮಿಂಟನ್ ಕೋರ್ಟ್ ಹಾಗೂ ಜಿಮ್ ಕೊಠಡಿಗಳ ನಡುವಿನ ಹಾಲ್‌ಗಳ ದುರಸ್ಥಿ ಮತ್ತು ಸುಣ್ಣ–ಬಣ್ಣ ಬಳಿಯುವುದು.	4.90 ಲಕ್ಷ
3	ಜಿಲ್ಲಾ ಕ್ರೀಡಾಂಗಣದಲ್ಲಿರುವ ಕಟ್ಟಡ ದುರಸ್ಥಿ ಮತ್ತು ಸುಣ್ಣ–ಬಣ್ಣ ಬಳಿಯುವುದು.	4.90 ಲಕ್ಷ
4	ಈಜುಕೊಳದ ಮೋಟಾರ್ ದುರಸ್ಥಿ ಹಾಗೂ ಜಿಲ್ಲಾ ಕ್ರೀಡಾಂಗಣ ಹಾಗೂ ಈಜುಕೊಳದ ಶೌಚಾಲಯಕ್ಕೆ ನೀರಿನ ಟ್ಯಾಂಕ್ ಅಳವಡಿಕೆ ಕಾಮಗಾರಿ.	0.75 ಲಕ್ಷ
	ಒಟ್ಟು ರೂ.	**15.45 ಲಕ್ಷಗಳು**

4. 2205–00–104–0–29 (ಕ್ರೀಡಾ ವಸತಿ ನಿಲಯ, ಪೊನ್ನಂಪೇಟೆ):– ಆರ್ಥಿಕ: ರೂ. 76.00 ಲಕ್ಷ, ಭೌತಿಕ: 14, ಸಾಧನೆ: 79.78%

ಈ ಕಾರ್ಯಕ್ರಮದಡಿಯಲ್ಲಿ ರೂ. 76.00 ಲಕ್ಷ ಅನುದಾನ ಸರ್ಕಾರದಿಂದ ಮಂಜೂರಾಗಿದ್ದು, ಜಿಲ್ಲಾ ಪಂಚಾಯತ್‌ನಿಂದ ರೂ. 76.00 ಲಕ್ಷ ಬಿಡುಗಡೆಯಾಗಿರುತ್ತದೆ. ಸದರಿ ಅನುದಾನದಲ್ಲಿ ಪೊನ್ನಂಪೇಟೆಯಲ್ಲಿರುವ ಕೊಡಗು ಜಿಲ್ಲಾ ಪಂಚಾಯತ್ ಮತ್ತು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಕೊಡಗು ಜಿಲ್ಲೆ, ಮಡಿಕೇರಿ ವತಿಯಿಂದ ನಡೆಸುತ್ತಿರುವ ಬಾಲಕ/ಬಾಲಕಿಯರ ಕ್ರೀಡಾ ವಸತಿ ನಿಲಯದಲ್ಲಿ 60 ಕ್ರೀಡಾಪಟುಗಳಿಗೆ ಹಾಕಿ ಕ್ರೀಡೆಯಲ್ಲಿ ತರಬೇತುದಾರರಿಂದ ಬೆಳಿಗ್ಗೆ ಮತ್ತು ಸಂಜೆಯ ವೇಳೆಯಲ್ಲಿ ತರಬೇತಿಯನ್ನು ನೀಡಲಾಗಿರುತ್ತದೆ. ಹಾಗೂ ಈ ಕ್ರೀಡಾಪಟುಗಳಿಗೆ ಉಚಿತ ಊಟ, ವಸತಿ, ಕ್ರೀಡಾಕಿಟ್ ಹಾಗೂ ಇತರೆ ಸೌಲಭ್ಯಗಳನ್ನು ಒದಗಿಸಲಾಗಿರುತ್ತದೆ.

ಹಾಗೂ ಇಲಾಖೆ ವತಿಯಿಂದ ನಡೆಸುತ್ತಿರುವ ಮಡಿಕೇರಿಯಲ್ಲಿರುವ ಕಿರಿಯರ ಕ್ರೀಡಾ ವಸತಿ ನಿಲಯದಲ್ಲಿ 32 ಕ್ರೀಡಾಪಟುಗಳಿಗೆ ಹಾಕಿ ಮತ್ತು ಅಥ್ಲೆಟಿಕ್ ಕ್ರೀಡೆಯಲ್ಲಿ ತರಬೇತುದಾರರಿಂದ ಬೆಳಿಗ್ಗೆ ಮತ್ತು ಸಂಜೆಯ ವೇಳೆಯಲ್ಲಿ ತರಬೇತಿಯನ್ನು ನೀಡಲಾಗಿರುತ್ತದೆ. ಹಾಗೂ ಈ ಕ್ರೀಡಾಪಟುಗಳಿಗೆ ಉಚಿತ ವಸತಿ, ಕ್ರೀಡಾಕಿಟ್ ಹಾಗೂ ಇತರೆ ಸೌಲಭ್ಯಗಳನ್ನು ಒದಗಿಸಲಾಗಿರುತ್ತದೆ.

ಮೇಲಿನ ಎರಡೂ ಕ್ರೀಡಾ ವಸತಿ ನಿಲಯದ ಕ್ರೀಡಾಪಟುಗಳಿಗೆ ವೈದ್ಯಕೀಯ ವೆಚ್ಚ ಭರಿಸಲಾಗಿದೆ. ಹಾಗೂ ವಿವಿಧ ಸ್ಥಳಗಳಲ್ಲಿ ನಡೆದ ಹಾಕಿ ಹಾಗೂ ಅಥ್ಲೆಟಿಕ್ಸ್ ಕ್ರೀಡಾಕೂಟದಲ್ಲಿ ಭಾಗವಹಿಸಿದ ಕ್ರೀಡಾ ನಿಲಯದ ಕ್ರೀಡಾಪಟುಗಳು ಹಾಗೂ ತರಬೇತುದಾರರಿಗೆ ದಿನಭತ್ಯೆ ಹಾಗೂ ಪ್ರಯಾಣಭತ್ಯೆಯನ್ನು ಪಾವತಿಸಲಾಗಿರುತ್ತದೆ.

5. 2205–00–104–0–30 (ಕಷ್ಟ ಪರಿಸ್ಥಿತಿಯಲ್ಲಿರುವ ಕ್ರೀಡಾಪಟುಗಳಿಗೆ ಹಾಗೂ ಕುಸ್ತಿಗಾರರಿಗೆ ಆರ್ಥಿಕ ನೆರವು):– ಆರ್ಥಿಕ: ರೂ.1.00 ಲಕ್ಷ , ಭೌತಿಕ: 2, ಸಾಧನೆ: 42%

ಈ ಕಾರ್ಯಕ್ರಮದಡಿಯಲ್ಲಿ ರೂ. 1.00 ಲಕ್ಷ ಅನುದಾನ ಸರ್ಕಾರದಿಂದ ಮಂಜೂರಾಗಿದ್ದು, ಜಿಲ್ಲಾ ಪಂಚಾಯತ್‌ನಿಂದ ರೂ. 1.00 ಲಕ್ಷ ಬಿಡುಗಡೆಯಾಗಿರುತ್ತದೆ. ಸದರಿ ಅನುದಾನದಲ್ಲಿ ಶ್ರೀ ಎಂ.ಎನ್ ಗೋವಿಂದರಾಜುಲು, ಮಾಜಿ ಕುಸ್ತಿ ಕ್ರೀಡಾಪಟು ಮಡಿಕೇರಿ ಇವರಿಗೆ ಮಾಸಿಕ ರೂ.2500 ಹಾಗೂ ಶ್ರೀ ಬಿ.ಎಂ. ಪೂಣಚ್ಚ, ಆಟೋಟ ಕ್ರೀಡಾಪಟು ಇವರಿಗೆ ಪ್ರತಿ ಮಾಹೆ ರೂ. 1000 ರಂತೆ ಒಟ್ಟು ರೂ. 42,000/–ಗಳ ಮಾಸಾಶನಗಳನ್ನು ನೀಡಲಾಗಿರುತ್ತದೆ

6. 2205–00–104–0–33 (ಕ್ರೀಡಾ ಸಾಮಗ್ರಿಗಳನ್ನು ಕೊಳ್ಳು ಮತ್ತು ಕ್ರೀಡಾ ಬಹಲು ಅಭಿವೃದ್ಧಿಗೊಳಿಸಲು ವಿದ್ಯಾ ಮತ್ತು ಇತರೆ ಸಂಸ್ಥೆಗಳಿಗೆ ಸಹಾಯ):– ಆರ್ಥಿಕ: ರೂ. 2.45 ಲಕ್ಷ , ಭೌತಿಕ: 3, ಸಾಧನೆ: 100%:–

ಈ ಕಾರ್ಯಕ್ರಮದಡಿಯಲ್ಲಿ ರೂ. 2.45 ಲಕ್ಷ ಅನುದಾನ ಸರ್ಕಾರದಿಂದ ಮಂಜೂರಾಗಿದ್ದು, ಜಿಲ್ಲಾ ಪಂಚಾಯತ್‌ನಿಂದ ರೂ. 2.45 ಲಕ್ಷ ಬಿಡುಗಡೆಯಾಗಿರುತ್ತದೆ. ಇಲಾಖೆಗೆ ಸಂಬಂಧಿಸಿದ ಈ ಕೆಳಕಂಡ ಕಾಮಗಾರಿಗಳಿಗಾಗಿ ಅನುದಾನವನ್ನು ಖಜಾನೆ–2ಯ ಮೂಲಕ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗದಿಂದ ಉಪಯೋಗಿಸಲಾಗಿರುತ್ತದೆ.

ಕ್ರ.ಸಂ	ಕಾಮಗಾರಿಯ ವಿವರ	ಮೀಸಲಿರುವ ಅನುದಾನ ರೂ. ಲಕ್ಷಗಳಲ್ಲಿ
1	ಸರ್ಕಾರಿ ಪದವಿ ಪೂರ್ವ ಕಾಲೇಜು , ಕುಶಾಲನಗರ – ಸೋ. ತಾ ಶಾಲಾ ಆಟದ ಮೈದಾನ ಅಭಿವೃದ್ಧಿ ಕಾಮಗಾರಿ	0.82 ಲಕ್ಷ
2	ಸರ್ಕಾರಿ ಪ್ರೌಢ ಶಾಲೆ, ಕುಶಾಲನಗರ – ಸೋ. ತಾ ಶಾಲಾ ಆಟದ ಮೈದಾನ ಅಭಿವೃದ್ಧಿ ಕಾಮಗಾರಿ	0.81 ಲಕ್ಷ
3	ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಕೆ. ಪಿ ಬಾಣೆ– ಮಡಿಕೇರಿ ತಾ. ಶಾಲಾ ಆಟದ ಮೈದಾನ ಅಭಿವೃದ್ಧಿ ಕಾಮಗಾರಿ	0.82 ಲಕ್ಷ
	ಒಟ್ಟು	**ರೂ. 2.45 ಲಕ್ಷಗಳು**

7. **2205–00–104–0–34 (ಒಳಾಂಗಣ ಕ್ರೀಡಾಂಗಣ ಮತ್ತು ಬಯಲು ರಂಗ ಮಂದಿರಗಳ ನಿರ್ಮಾಣಕ್ಕೆ ಅನುದಾನ): ಆರ್ಥಿಕ: ರೂ. 15.00 ಲಕ್ಷ , ಭೌತಿಕ: 15, ಸಾಧನೆ: 100%:–**

ಈ ಕಾರ್ಯಕ್ರಮದಡಿಯಲ್ಲಿ ರೂ. 15.00 ಲಕ್ಷ ಅನುದಾನ ಸರ್ಕಾರದಿಂದ ಮಂಜೂರಾಗಿದ್ದು, ಜಿಲ್ಲಾ ಪಂಚಾಯತ್‌ನಿಂದ ರೂ. 15.00 ಲಕ್ಷ ಬಿಡುಗಡೆಯಾಗಿರುತ್ತದೆ. ಸದರಿ ಅನುದಾನದಲ್ಲಿ ಕೊಡಗು ಜಿಲ್ಲೆಯ ಈ ಕೆಳಕಂಡ ಶಾಲೆಯ ಆಟದ ಮೈದಾನದಲ್ಲಿ ಬಯಲು ರಂಗಮಂದಿರಗಳನ್ನು ನಿರ್ಮಾಣ ಮಾಡಲಾಗಿರುತ್ತದೆ.

ಕ್ರ.ಸಂ	ಶಾಲೆಯ ಹೆಸರು	ರೂ
1	ಸರ್ಕಾರಿ ಪ್ರಾಥಮಿಕ ಶಾಲೆ, ನಾಪೋಕ್ಲು	1.00
2	ಸರ್ಕಾರಿ ಪ್ರಾಥಮಿಕ ಶಾಲೆ, ಕೋಟೆ ಪೆರಾಜೆ (ಮುಂದುವರೆದ ಕಾಮಗಾರಿ)	1.00
3	ಸರ್ಕಾರಿ ಪ್ರಾಥಮಿಕ ಶಾಲೆ, ಕಕ್ಕಬ್ಬೆ	1.00
4	ಸರ್ಕಾರಿ ಪ್ರಾಥಮಿಕ ಶಾಲೆ ಕಡಂಗ	1.00
5	ಸರ್ಕಾರಿ ಪ್ರಾಥಮಿಕ ಶಾಲೆ , ಪಾರಾಣೆ	1.00
6	ಸರ್ಕಾರಿ ಪ್ರಾಥಮಿಕ ಶಾಲೆ, ಯಡೂರು ಹಣಗಲ್ಲು	1.00
7	ಸರ್ಕಾರಿ ಪ್ರಾಥಮಿಕ ಶಾಲೆ, ಚಿಕ್ಕಬಂಡಾರ	1.00
8	ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಗರಗಂದೂರು	1.00
9	ಸರ್ಕಾರಿ ಪ್ರೌಢ ಶಾಲೆ ಹೆಬ್ಬಾಲೆ,	1.00
10	ಸರ್ಕಾರಿ ಪ್ರೌಢ ಶಾಲೆ, ಸುಂಟಿಕೊಪ್ಪ	1.00
11	ಸರ್ಕಾರಿ ಪ್ರಾಥಮಿಕ ಶಾಲೆ, ಕುಟ್ಟಂದಿ	1.00
12	ಸರ್ಕಾರಿ ಪ್ರೌಢ ಶಾಲೆ, ದೇವಣಗೇರಿ	1.00
13	ಸರ್ಕಾರಿ ಪ್ರಾಥಮಿಕ ಶಾಲೆ, ಹೊಸೂರು	1.00
14	ಸರ್ಕಾರಿ ಪ್ರಾಥಮಿಕ ಶಾಲೆ, ಬೆಕ್ಕೆಸೊಡ್ಲೂರು (ಮುಂದುವರೆದ ಕಾಮಗಾರಿ)	1.00
15	ಸರ್ಕಾರಿ ಪ್ರಾಥಮಿಕ ಶಾಲೆ, ದೇವರಪುಡಿ	1.00
	ಒಟ್ಟು ರೂ.	**15.00**

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ

ಕೊಡಗು ಜಿಲ್ಲೆಯಲ್ಲಿ ರಾಷ್ಟ್ರೀಯ ಆರೋಗ್ಯ ಅಭಿಯಾನ ಅಸ್ಥಿತ್ವದಲ್ಲಿದ್ದು, ತಾಯಿ ಮತ್ತು ಮಕ್ಕಳ ಆರೋಗ್ಯ ರಕ್ಷಣೆಗೆ ಮೊದಲ ಆದ್ಯತೆ ನೀಡಿ ಕಾರ್ಯ ಯೋಜನೆಗಳನ್ನು ರೂಪಿಸಿಕೊಂಡು ಕಾರ್ಯ ನಿರ್ವಹಿಸಲಾಗುತ್ತಿದೆ. ಅರ್ಹ ದಂಪತಿಗಳ ಸಮೀಕ್ಷೆ ನಡೆಸಿ ಗರ್ಭಿಣಿ ಮತ್ತು ಬಾಣಂತಿಯರ ದಾಖಲಾತಿ ಮತ್ತು ಸೇವೆಗಳನ್ನು ಹಾಗೂ ಹುಟ್ಟಿದ ಮಕ್ಕಳಿಗೆ ರಕ್ಷಣಾತ್ಮಕ ಚಿಕಿತ್ಸೆಗಳನ್ನು ಕಾಲಕಾಲಕ್ಕೆ ಅವರ ಹತ್ತಿರದ ಸೇವಾಕೇಂದ್ರಗಳ ಮೂಲಕ ಉಚಿತವಾಗಿ ಒದಗಿಸಲಾಗುತ್ತಿದೆ. ಹಾಗೆಯೇ ಅವರ ಆರೋಗ್ಯ ರಕ್ಷಣೆಗೆ ಅಗತ್ಯವಾದ ಆರೋಗ್ಯ ತಪಾಸಣೆ ನಡೆಸುವ ಮೂಲಕ 100% ಆಸ್ಪತ್ರೆಗಳಲ್ಲಿಯೇ ಹೆರಿಗೆಗಳಾಗುವಂತೆ ಉತ್ತೇಜಿಸಲಾಗುತ್ತಿದೆ ಹಾಗೂ ಕುಟುಂಬ ಕಲ್ಯಾಣ ವಿಧಾನಗಳ ತಿಳುವಳಿಕೆ ನೀಡಿ ಅರ್ಹರಿಗೆ ಸಂತಾನ ಹರಣ ಶಸ್ತ್ರ ಚಿಕಿತ್ಸೆಗೆ ಮನವೊಲಿಸುವ ಮತ್ತು ಮಕ್ಕಳ ನಡುವೆ ಅಂತರ ಕಾಯ್ದುಕೊಳ್ಳುವ ಬಗ್ಗೆ ಸಲಹೆ ನೀಡಿ ಜನಸಂಖ್ಯಾ ಸ್ಥಿರತೆ ಸಾಧಿಸುವ ಮತ್ತು ಚಿಕ್ಕ ಕುಟುಂಬದ ಮಹತ್ವವನ್ನು ಜನಸಾಮಾನ್ಯರಿಗೆ ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ಸೂಕ್ತವಾಗಿ ನಡೆಸಲಾಗುತ್ತಿದೆ.

ಜಿಲ್ಲೆಯಲ್ಲಿ ಪೌಷ್ಠಿಕ ಆಹಾರ ವಿತರಣೆ ಕಾರ್ಯಕ್ರಮದಡಿಯಲ್ಲಿ ಸ್ತ್ರೀಯರಲ್ಲಿ ಮತ್ತು ಮಕ್ಕಳಲ್ಲಿ ಕಂಡು ಬರುವ ರಕ್ತ ಹೀನತೆಯನ್ನು ತಡೆಗಟ್ಟಲು ಕಬ್ಬಿಣಾಂಶ ಮತ್ತು ಫೋಲಿಕ್ ಆಮ್ಲ ಮಾತ್ರೆಗಳನ್ನು ವಿತರಿಸುವ ಕಾರ್ಯಕ್ರಮವನ್ನು ಯಶಸ್ವಿಯಾಗಿ ನಡೆಸಲಾಗುತ್ತಿದೆ.

ತಾಯಂದಿರ ಮತ್ತು ಶಿಶು ಮರಣ ತಡೆಗಟ್ಟುವ ದೃಷ್ಟಿಯಲ್ಲಿ ಸಕಾಲದಲ್ಲಿ ಗರ್ಭಿಣಿಯರ ನೋಂದಣಿ ಹಾಗೂ ಕಾಲಕಾಲಕ್ಕೆ ತಪಾಸಣೆ, ಧನುರ್ವಾಯು ವಿರುದ್ಧ ಲಸಿಕೆ ನೀಡುವಿಕೆ ಹಾಗೂ ಹೆರಿಗೆಯನ್ನು ಕಡ್ಡಾಯವಾಗಿ ಆಸ್ಪತ್ರೆಗಳಲ್ಲಿ ಮಾಡಿಸಲು ವ್ಯವಸ್ಥೆ ಮಾಡಲಾಗಿದೆ.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಕುಟುಂಬ ಕಲ್ಯಾಣ ಕಾರ್ಯಕ್ರಮವು ಸಂತಾನೋತ್ಪತ್ತಿ ವಯಸ್ಸಿನಲ್ಲಿರುವ ಮಹಿಳೆಯರ ಆರೋಗ್ಯ ಉತ್ತಮ ಪಡಿಸುವಲ್ಲಿ ಕೇಂದ್ರಿಕೃತವಾಗಿದ್ದು, ಜನಸಂಖ್ಯೆ ನಿಯಂತ್ರಣಕ್ಕೆ ಪುರುಷರಿಗೂ ಹಾಗೂ ಮಹಿಳೆಯರಿಗೂ ಸಂತಾನ ಹರಣ ಶಸ್ತ್ರ ಚಿಕಿತ್ಸೆ ನಮ್ಮ ಕುಟುಂಬ ಕಲ್ಯಾಣ ಕಾರ್ಯಕ್ರಮದ ಮುಖ್ಯ ಉದ್ದೇಶ. ಇದನ್ನು ಯಶಸ್ವಿಯಾಗಿ ನಡೆಸಲಾಗುತ್ತಿದೆ.

ಇಲಾಖೆಯ ಮುಖಾಂತರ ಮಕ್ಕಳಲ್ಲಿ ಬರಬಹುದಾದ 10 ಮಾರಕ ರೋಗಗಳಾದ ಬಾಲಕ್ಷಯ, ಗಂಟಲು ಮಾರಿ, ನಾಯಿಕೆಮ್ಮು, ಧನುರ್ವಾಯು ಹಾಗೂ ಹೆಪಟೈಟಿಸ್–ಬಿ ಇವುಗಳನ್ನು ತಡೆಗಟ್ಟಲು ಬಿ.ಸಿ.ಜಿ., ಪೆಂಟಾಲವೆಂಟ್ ಎಂಬ ಲಸಿಕೆಯನ್ನು ನೀಡಲಾಗುತ್ತಿದ್ದು, ಜೊತೆಗೆ ಪೋಲಿಯೊ (IPV) ಹಾಗೂ ದಡಾರ ಮತ್ತು ರುಬೆಲ್ಲಾ (MR) ಲಸಿಕೆ ನೀಡಲಾಗುವುದು. ಇದರಿಂದ ಶಿಶುಗಳ ಹಾಗೂ ಚಿಕ್ಕ ಮಕ್ಕಳ ಕಾಯಿಲೆ ದರ, ಮರಣ ದರ ನಿಯಂತ್ರಿಸಬಹುದು.

ಜಿಲ್ಲೆಯಲ್ಲಿ 15 ವರ್ಷದ ಒಳಗಿರುವ ಮಕ್ಕಳಲ್ಲಿ ಕಂಡುಬರುವ ಅಕ್ಯೂಟ್ ಫ್ಲಾಸಿಡ್ ಪ್ಯಾರಾಲಿಸಿಸ್ ಬಗ್ಗೆ ಸಮೀಕ್ಷೆ ನಡೆಸುವುದರೊಂದಿಗೆ ವರ್ಷಕ್ಕೆ ಒಂದು ಬಾರಿ ಪಲ್ಸ್ ಪೋಲಿಯೋ ಕಾರ್ಯಕ್ರಮ ನಡೆಸಿ ಪೋಲಿಯೋ ನಿರ್ಮೂಲನ ಕಾರ್ಯಕ್ರಮವನ್ನು ಯಶಸ್ವಿಗೊಳಿಸಲಾಗುತ್ತಿದೆ.

2019–20 ನೇ ಸಾಲಿನ ವಿವಿಧ ವಿಧಾನವಾರು ಕುಟುಂಬ ಕಲ್ಯಾಣ ಕಾರ್ಯಕ್ರಮಗಳ ಪ್ರಗತಿ ವಿವರಗಳು ಈ ಕೆಳಕಂಡಂತಿವೆ.

ಕ್ರಮ ಸಂಖ್ಯೆ	ಕಾರ್ಯಕ್ರಮ	ಗುರಿ	ಸಾಧನೆ	ಶೇಕಡ
1	ಸಂತಾನ ಹರಣ ಶಸ್ತ್ರ ಚಿಕಿತ್ಸೆ	3446	1470	43%
2	ವಂಕಿ ಧಾರಣೆ	2010	2654	132%
3	ನಿರೋಧ್	5200	4555	88%
4	ನುಂಗುವ ಗುಳಿಗೆ	3552	2458	68%

ಪರಿಷ್ಕೃತ ರಾಷ್ಟ್ರೀಯ ಕ್ಷಯ ರೋಗ ನಿಯಂತ್ರಣಾ ಕಾರ್ಯಕ್ರಮ

ಜಿಲ್ಲಾ ಕ್ಷಯರೋಗ ನಿಯಂತ್ರಣ ಕೇಂದ್ರ ಹಾಗೂ ಜಿಲ್ಲೆಯ ಆರೋಗ್ಯ ಕೇಂದ್ರಗಳಲ್ಲಿ 364 ಕ್ಷಯ ರೋಗಿಗಳನ್ನು ಪತ್ತೆಹಚ್ಚುವ ಗುರಿ ಹೊಂದಿದ್ದು, ವಾರ್ಷಿಕ 442 ರೋಗಿಗಳನ್ನು ಪತ್ತೆ ಹಚ್ಚಿ ಶೇಕಡ 121% ಪ್ರಗತಿ ಸಾಧಿಸಲಾಗಿದೆ. ಅದೇ ರೀತಿ ವಾರ್ಷಿಕ 3641 ಕಫ ಲೇಪನ ಪರೀಕ್ಷೆಗೊಳಪಡಿಸುವ ಗುರಿ ಇದ್ದು, 9236 ಕಫಲೇಪನ ಪರೀಕ್ಷಿಸಿ ಶೇಕಡ 254% ಪ್ರಗತಿ ಸಾಧಿಸಲಾಗಿದೆ.

ರಾಷ್ಟ್ರೀಯ ಕೀಟ ಜನ್ಯ ರೋಗಗಳ ನಿಯಂತ್ರಣಾ ಕಾರ್ಯಕ್ರಮ (ಎನ್.ವಿ.ಬಿ.ಡಿ.ಸಿ.ಪಿ.)

ರಾಷ್ಟ್ರೀಯ ಮಲೇರಿಯಾ ವಿರೋಧಿ ಕಾರ್ಯಕ್ರಮದಡಿಯಲ್ಲಿ 2019ನೇ ವರ್ಷದಲ್ಲಿ ಒಟ್ಟು 1,78,010 ರಕ್ತಲೇಪನಗಳನ್ನು ಸಂಗ್ರಹಿಸಿ ಪರೀಕ್ಷಿಸಲಾಗಿದೆ. ವಾರ್ಷಿಕ ರಕ್ತಲೇಪನದ ಸಂಗ್ರಹಣೆಯಲ್ಲಿ ಗುರಿ ಮೀರಿ ಸಾಧಿಸಲಾಗಿದೆ. 2019ನೇ ವರ್ಷದಲ್ಲಿ ಯಾವುದೇ ಮಲೇರಿಯಾ ಪ್ರಕರಣ ದಾಖಲಾಗಿರುವುದಿಲ್ಲ, ಮಲೇರಿಯಾ ಬಾರದಂತೆ ಅಗತ್ಯ ಮುಂಜಾಗೃತಾ ಕ್ರಮ ಕೈಗೊಳ್ಳಲಾಗಿದೆ.

ಡೆಂಗ್ಯೂ ಚಿಕುಂಗುನ್ಯ ನಿಯಂತ್ರಣ:

2019ನೇ ಸಾಲಿನಲ್ಲಿ ಒಟ್ಟು 18 ಡೆಂಗ್ಯೂ ಪ್ರಕರಣಗಳು ವರದಿಯಾಗಿದ್ದು, ಬಹುತೇಕ ಪ್ರಕರಣಗಳು ಹೊರ ಜಿಲ್ಲೆಯಲ್ಲಿದ್ದು ಚಿಕಿತ್ಸೆಗಾಗಿ ಈ ಜಿಲ್ಲೆಗೆ ಬಂದಂತವುಗಳಾಗಿವೆ. ಚಿಕುಂಗುನ್ಯ 8 ಪ್ರಕರಣಗಳು ವರದಿಯಾಗಿರುತ್ತವೆ. ಈ ಪ್ರಕರಣಗಳ ನಿಯಂತ್ರಣಕ್ಕಾಗಿ ಮನೆ ಮನೆ ಭೇಟಿ ಮಾಡಿ ಸೊಳ್ಳೆ, ಲಾರ್ವ ಸಮೀಕ್ಷೆ ನಡೆಸಿ ಉತ್ಪತ್ತಿ ತಾಣಗಳ ನಿರ್ಮೂಲನೆ ಹಾಗೂ ಜನರಿಗೆ ಆರೋಗ್ಯ ಶಿಕ್ಷಣ ಚಟುವಟಿಕೆಗಳನ್ನು ನಡೆಸಲಾಗಿದೆ. ಈ ಕಾರ್ಯಕ್ರಮ ನಿರಂತರವಾಗಿ ನಡೆಯುತ್ತಲೇ ಇರುತ್ತದೆ.

ಹೆಚ್1ಎನ್1

2019 ರಲ್ಲಿ ಜಿಲ್ಲೆಯಲ್ಲಿ ಒಟ್ಟು 11 ಪ್ರಕರಣಗಳು ವರದಿಯಾಗಿದ್ದು, ಚಿಕಿತ್ಸೆ ನಂತರ ಗುಣಮುಖರಾಗಿರುತ್ತಾರೆ. ಔಷಧಿ ಸಾಕಷ್ಟು ದಾಸ್ತಾನು ಇರುತ್ತದೆ. ಹೆಚ್1ಎನ್1 ನಿಯಂತ್ರಣಕ್ಕಾಗಿ ಜನತೆಗೆ ನಿರಂತರ ಆರೋಗ್ಯ ಶಿಕ್ಷಣ ನೀಡಲಾಗುತ್ತಿದೆ.

ತಾಯಿ ಮತ್ತು ಮಕ್ಕಳ ಆರೋಗ್ಯ ರಕ್ಷಣೆ

2019–20 ರಲ್ಲಿ ಜಿಲ್ಲೆಯಲ್ಲಿ ಗರ್ಭಿಣಿ ನೋಂದಾವಣೆಗೆ ಗುರಿ 8,300 ಇದ್ದು, 6882 ನೋಂದಾವಣೆಯಾಗಿ ಶೇಕಡ 83% ಸಾಧನೆಯಾಗಿರುತ್ತದೆ. ಅದೇ ರೀತಿ ಹೆರಿಗೆಗಳ ಗುರಿ 7,470 ಇದ್ದು 6390 ಜೀವಂತ ಜನನಗಳು 74 ನಿರ್ಜೀವ ಜನನಗಳು ಆಗಿರುತ್ತದೆ. ಜಿಲ್ಲೆಯಲ್ಲಿ 2 ತಾಯಿ ಮರಣ ಪ್ರಕರಣಗಳು ಮತ್ತು 70 ಶಿಶು ಮರಣ ಪ್ರಕರಣಗಳು ಆಗಿರುತ್ತವೆ. ಈ ಪ್ರಕರಣಗಳ ಕುರಿತು ಕೂಲಂಕುಶ ಪರಾಮರ್ಶೆಯನ್ನು ಪ್ರತಿ ತಿಂಗಳ ಪ್ರಗತಿ ಪರಿಶೀಲನಾ ಸಭೆಗಳಲ್ಲಿ ಚರ್ಚಿಸಿ ತಡೆಗಟ್ಟಬಹುದಾದ ಕ್ರಮಗಳನ್ನು ಅನುಸರಿಸುವ ಬಗ್ಗೆ ಮಾರ್ಗದರ್ಶನ ನೀಡಿ ಇಲಾಖೆಯು ಗಮನ ಹರಿಸುತ್ತಿದೆ.

ತಾಯಿ ಮತ್ತು ಮಕ್ಕಳ ಆರೋಗ್ಯ ಕಾರ್ಯಕ್ರಮದಡಿಯಲ್ಲಿ ರಕ್ಷಣಾ ಚಿಕಿತ್ಸೆ ಚುಚ್ಚು ಮದ್ದು ನೀಡಿಕೆ ಕಾರ್ಯಕ್ರಮದ ಪ್ರಗತಿಯ ವಿವರಗಳು:

ಕ್ರ.ಸಂ	ಕಾರ್ಯಕ್ರಮ	ಗುರಿ	ಸಾಧನೆ	ಶೇಕಡ
1	ಟಿ.ಟಿ. ಚುಚ್ಚು ಮದ್ದು(ಗರ್ಭಿಣಿಯರಿಗೆ)	8300	7430	90%
2	ಬಿ.ಸಿ.ಜಿ. ಲಸಿಕೆ	7291	6310	87%
3	ಪೆಂಟಾವಲೆಂಟ್	7291	6966	96%
4	ಪೋಲಿಯೋ	7291	7006	96%
5	ದಡಾರ & ರುಬೇಲ್ಲಾ	7291	6678	92%
6	ಡಿ.ಪಿ.ಟಿ. ಪೋಲಿಯೋ ವರ್ಧಕ	6974	6595	95%
7	ಡಿ.ಟಿ.5 ವರ್ಷ	6974	7459	107%
8	ಟಿ.ಟಿ.10 ವರ್ಷ	7837	11259	144%
9	ಟಿ.ಟಿ.16 ವರ್ಷ	7295	7046	97%
10	ಕಬ್ಬಿಣಾಂಶ ಮತ್ತು ಪೋಲಿಕ್ ಆಮ್ಲ ಮಾತ್ರೆ ವಿತರಣೆ (ಮಕ್ಕಳಿಗೆ)		33542 (ಪ್ರತಿ ತಿಂಗಳು)	

ಪಲ್ಸ್ ಪೋಲಿಯೋ ಪ್ರಗತಿಯ ವರದಿ:

2020ನೇ ಜನವರಿ ತಿಂಗಳಲ್ಲಿ ನಡೆಸಿದ ಒಂದು ಸುತ್ತಿನ ಪಲ್ಸ್ ಪೋಲಿಯೋ ಸುತ್ತಿನಲ್ಲಿ ಗುರಿ ಮೀರಿದ ಸಾಧನೆ ನಡೆಸಿ ಪೋಲಿಯೋ ನಿರ್ಮೂಲನೆಗೆ ಕ್ರಮಕೈಗೊಳ್ಳಲಾಗಿದೆ. ಮೊದಲನೇ ಸುತ್ತಿನಲ್ಲಿ 39466 ಗುರಿಗೆ 41038 ಆಗಿದ್ದು 104%ರಷ್ಟು ಸಾಧನೆಯಾಗಿದೆ.

ರಾಷ್ಟ್ರೀಯ ಕುಷ್ಠ ರೋಗ ನಿವಾರಣಾ ಕಾರ್ಯಕ್ರಮ

ರಾಷ್ಟ್ರೀಯ ಕುಷ್ಠರೋಗ ನಿವಾರಣಾ ಕಾರ್ಯಕ್ರಮದಡಿಯಲ್ಲಿ ಮಾನ್ಯ ಜಿಲ್ಲಾಧಿಕಾರಿಯವರ ಅಧ್ಯಕ್ಷತೆಯಲ್ಲಿ ಜಿಲ್ಲಾ ಬಹು ಔಷಧಿ ಚಿಕಿತ್ಸಾ (ಕುಷ್ಠ) ಸಂಘವು ಕಾರ್ಯ ನಿರ್ವಹಿಸುತ್ತಿದು, 2019ರಲ್ಲಿ 2 ರೋಗಿಗಳನ್ನು ಪತ್ತೆ ಹಚ್ಚಲಾಗಿದೆ. ಅದೇ ರೀತಿ 2 ಕುಷ್ಠ ರೋಗಿಗಳಿಗೆ ಚಿಕಿತ್ಸೆ ನೀಡಲಾಗುತ್ತಿದೆ. ಜನವರಿ–2020ರ ಕುಷ್ಠ ರೋಗ ಮಾಸಾಚರಣೆ ಮತ್ತು 31.01.2020 ರಿಂದ 13.02.2020 ರವರೆಗೆ ಕುಷ್ಠರೋಗ ಪಾಕ್ಷಿಕ ಆಚರಣೆಯನ್ನು ನಡೆಸಿ ಜನರಲ್ಲಿ ಜಾಗೃತಿ ಮೂಡಿಸುವ ಕಾರ್ಯ ಕೈಗೊಳ್ಳಲಾಗಿದೆ.

ರಾಷ್ಟ್ರೀಯ ಅಂಧತ್ವ ನಿವಾರಣಾ ಕಾರ್ಯಕ್ರಮ

ರಾಷ್ಟ್ರೀಯ ಅಂಧತ್ವ ನಿವಾರಣಾ ಕಾರ್ಯಕ್ರಮದಡಿಯಲ್ಲಿ ಜಿಲ್ಲಾ ಅಂಧತ್ವ ನಿವಾರಣಾ ಸಂಸ್ಥೆಯು ಮಾನ್ಯ ಜಿಲ್ಲಾಧಿಕಾರಿಯವರ ಅಧ್ಯಕ್ಷತೆಯಲ್ಲಿ ಅಸ್ಥಿತ್ವದಲ್ಲಿದ್ದು, ಜಿಲ್ಲೆಯಲ್ಲಿರುವ ಸ್ವಯಂ ಸೇವಾ ಸಂಸ್ಥೆಗಳ ನೆರವಿನೊಂದಿಗೆ ಜಿಲ್ಲೆಯಲ್ಲಿ ಒಟ್ಟು 1430 ಕಣ್ಣಿನ ಪೊರೆ ಶಸ್ತ್ರ ಚಿಕಿತ್ಸೆಗಳನ್ನು ನಡೆಸಲಾಗಿದೆ.

ಐ.ಇ.ಸಿ/ಬಿ.ಸಿ.ಸಿ ಕಾರ್ಯಕ್ರಮ (ಆರೋಗ್ಯ ಶಿಕ್ಷಣ ಕಾರ್ಯಕ್ರಮಗಳು)

ನಮ್ಮ ಇಲಾಖೆಯ ಯಾವುದೇ ಕಾರ್ಯಕ್ರಮಗಳು ಯಶಸ್ವಿಯಾಗಬೇಕಿದ್ದಲ್ಲಿ ಜನ ಸಮುದಾಯದ ಸಹಕಾರ ಮತ್ತು ಸಹಭಾಗಿತ್ವ ಅತ್ಯಗತ್ಯ ಇದನ್ನು ಉತ್ತಮ ಆರೋಗ್ಯ ಶಿಕ್ಷಣ ಚಟುವಟಿಕೆಗಳನ್ನು ಸಾದ್ಯವಿರುವೆಡೆಯೆಲ್ಲಾ ನಡೆಸಿ ಜನರಲ್ಲಿ ಆರೋಗ್ಯ ಕಾರ್ಯಕ್ರಮಗಳ ಬಗೆಗೆ ಅರಿವು ಮೂಡಿಸುವ ಪ್ರಯತ್ನ ನಡೆಸಲಾಗುತ್ತಿದೆ. ಹೆಚ್ಚಿನ ಕಾರ್ಯಕ್ರಮಗಳು ಮಹಿಳೆಯರ ಮತ್ತು ಮಕ್ಕಳ ಆರೋಗ್ಯ ರಕ್ಷಣೆಗೆ ಸಂಬಂಧಿಸಿದಂತೆ ಇರುವುದರಿಂದ ಹಳ್ಳಿಹಳ್ಳಿಗಳ ಅಂಗನವಾಡಿ ಕೇಂದ್ರಗಳಲ್ಲಿ ಆರೋಗ್ಯ ಶಿಕ್ಷಣ ಚಟುವಟಿಕೆ ನಡೆಸಲಾಗುತ್ತಿದೆ. ಜೊತೆಗೆ ಜಾನಪದ ಕಲಾ ತಂಡಗಳ ಮೂಲಕ ಬೀದಿ ನಾಟಕಗಳು, ಜಾನಪದ ಗಾಯನ ಇತ್ಯಾದಿಗಳನ್ನು ನಡೆಸಿ ಆರೋಗ್ಯ ಕಾರ್ಯಕ್ರಮಗಳ ಬಗೆಗೆ ಅರಿವು ಮೂಡಿಸಲಾಗುತ್ತಿದೆ.

2019–20 ನೇ ಸಾಲಿನ ಅನುದಾನಿತ ಐ.ಇ.ಸಿ/ಬಿ.ಸಿ.ಸಿ ಕಾರ್ಯಕ್ರಮದಡಿಯಲ್ಲಿ ಸಾಧಿಸಲಾದ ಪ್ರಗತಿಯ ವರದಿ.

ಕ್ರ.ಸಂ	ಕಾರ್ಯಕ್ರಮಗಳು	ಗುರಿ	ಸಾಧನೆ
1	ಆರೋಗ್ಯವಂತ ಶಿಶು ಪ್ರದರ್ಶನ	196	196
2	ಪದವಿ ಕಾಲೇಜು ವಿದ್ಯಾರ್ಥಿಗಳಿಗೆ ರಸಪ್ರಶ್ನೆ ಕಾರ್ಯಕ್ರಮ	6	6
3	ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ಬಗ್ಗೆ ಪ್ರಬಂಧ ಸ್ಪರ್ಧೆ	16	16
4	ಜಾನಪದ ಕಲಾ ತಂಡಗಳ ತರಬೇತಿ ಕಾರ್ಯಗಾರ	0	0
5	ರಾಷ್ಟ್ರೀಯ ಆರೋಗ್ಯ ಅಭಿಯಾನದ ಕಾರ್ಯಕ್ರಮ/ಯೋಜನೆಗಳ ಬಗ್ಗೆ ಜಾನಪದ ಕಾರ್ಯಕ್ರಮ	30	30
6	ಜಾತ್ರೆ/ಸಂತೆಗಳಲ್ಲಿ ಆರೋಗ್ಯ ಕಾರ್ಯಕ್ರಮದ ಕುರಿತು ಅರಿವು ಮೂಡಿಸುವುದು	5	5
7	ಜಿಲ್ಲಾ ಮಟ್ಟದಲ್ಲಿ ಪತ್ರಿಕಾ ಪ್ರಕಟಣೆ/ಜಾಹೀರಾತು	10	10
8	ಅಂತರ ಇಲಾಖೆಯ ತಾಲ್ಲೂಕು ಮಟ್ಟದ ಅಧಿಕಾರಿಗಳಿಗೆ ಒಂದು ದಿನದ ಆರೋಗ್ಯ ಅರಿವು ಮೂಡಿಸುವ ಕಾರ್ಯಕ್ರಮ (ತಾಲ್ಲೂಕು ಮಟ್ಟದಲ್ಲಿ)	3	3
9	ಅಸಾಂಕ್ರಾಮಿಕ ರೋಗಗಳ ಕುರಿತು (NCD)ಗೋಡೆಬರಹ	15	15
10	ರಾಷ್ಟ್ರೀಯ ಆರೋಗ್ಯ ಕಾರ್ಯಕ್ರಮಗಳು/ಯೋಜನೆಗಳ ಕುರಿತು ಪ್ರಮುಖ ಪ್ರೇರಣಾದಾರರಿಗೆ (Key Influrencers) ಅರಿವು ಮೂಡಿಸುವ ಕಾರ್ಯಕ್ರಮ	1	1
	ಒಟ್ಟು	282	282

2019–20ನೇ ಸಾಲಿನ ವಾರ್ಷಿಕ ಆಡಳಿತ ವರದಿ, ಜಿಲ್ಲಾ ಆಯುಷ್ ಇಲಾಖೆ, ಕೊಡಗು ಜಿಲ್ಲೆ, ಮಡಿಕೇರಿ.

ಕ್ರ.ಸಂ.	ಲೆಕ್ಕಶೀರ್ಷಿಕೆ	ವಿಷಯ	ಲಿಂಕ್ ಡಾಕ್ಯುಮೆಂಟ್‌ನಿಂದ ಬಿಡುಗಡೆಯಾದ ಮೊತ್ತ (ಲಕ್ಷಗಳಲ್ಲಿ)	ಜಿಲ್ಲಾ ಪಂಚಾಯತ್‌ನಿಂದ ಬಿಡುಗಡೆಯಾದ ಮೊತ್ತ (ಲಕ್ಷಗಳಲ್ಲಿ)	ಖರ್ಚು (ಲಕ್ಷಗಳಲ್ಲಿ)	ಉಳಿಕೆ (ಲಕ್ಷಗಳಲ್ಲಿ)	ಷರಾ
1	2210–00–101–0–35 (ಯೋಜನೇತರ)	ಅಧಿಕಾರಿ/ಸಿಬ್ಬಂದಿಯವರ ವೇತನ	55	55	50.51011	4.48989	ಸರ್ಕಾರಿ ಹೋಮಿಯೋಪತಿ ಮತ್ತು ಆಯುರ್ವೇದ ಆಸ್ಪತ್ರೆ, ಸೋಮವಾರಪೇಟೆ ಇಲ್ಲಿಂದ ಕಿ.ಮ.ಆ.ಸ ಸಿಬ್ಬಂದಿಯವರು ವರ್ಗಾವಣೆಗೊಂಡಿರುವುದು.
2	2210–00–101–0–29 (ಯೋಜನೇತರ)	ಅಧಿಕಾರಿ/ಸಿಬ್ಬಂದಿಯವರ ವೇತನ	105	105	92.98903	12.01097	ಸರ್ಕಾರಿ ಆಯುರ್ವೇದ ಚಿಕಿತ್ಸಾಲಯ, ತೊರೆನೂರು ಹಾಗೂ ಶ್ರೀಮಂಗಲ ಇಲ್ಲಿಂದ ವೈದ್ಯಾಧಿಕಾರಿಗಳು ವರ್ಗಾವಣೆಗೊಂಡಿರುವುದು.
3	2210–00–101–0–35 (ಯೋಜನೇತರ)	ವೇತನೇತರ ಅನುನದಾನ (ಸಾದಿಲ್ವಾರು + ಪ್ರಯಾಣ ಭತ್ಯೆ)	7.35	7.35	6.71614	0.63386	–
4	2210–00–101–0–29 ವೇತನೇತರ	ವೇತನೇತರ ಅನುದಾನ (ಸಾದಿಲ್ವಾರು +ಪ್ರಯಾಣ ಭತ್ಯೆ)	8.57	8.57	8.07364	0.49636	–
5	2210–00–101–36 ಯೋಜನೆ ಭಾ.ವೈ.ಪ. ಕಟ್ಟಡಗಳು	ಕಟ್ಟಡಗಳು	70	70	70	0	2019–20ನೇ ಸಾಲಿನಲ್ಲಿ ಆಯುಷ್ ಇಲಾಖೆಯ ಸಂಪೂರ್ಣ ಕಟ್ಟಡ ಕಾಮಗಾರಿಗಳನ್ನು PRED ಗೆ ವಹಿಸಲಾಗಿರುತ್ತದೆ.
6	2210–00–101–0–37 (ಯೋಜನೇತರ) ಭಾ.ವೈ.ಪ. ಔಷಧಿ & ರಾಸಾಯನಿಕಗಳು	2210–00–101–0–37 (ಯೋಜನೇತರ) ಭಾ.ವೈ.ಪ. ಔಷಧಿ & ರಾಸಾಯನಿಕಗಳು ಔಷಧಿ ಮತ್ತು ರಸಾಯನಿಕಗಳನ್ನು ಖರೀದಿಸಲಾಗಿರುವುದು.	15.92	15.92	15.8186	0.1014	–

ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ

ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯು ಕೊಡಗು ಜಿಲ್ಲಾ ಪಂಚಾಯತ್ ಅಡಿಯಲ್ಲಿ ಕೆಲಸ ನಿರ್ವಹಿಸುತ್ತಿದ್ದು, ಮಹಿಳೆಯರ ಮತ್ತು ಮಕ್ಕಳ ಸರ್ವತೋಮುಖ ಅಭಿವೃದ್ಧಿಗಾಗಿ ಹಲವಾರು ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುತ್ತಿದೆ.

1. ಸಮಗ್ರ ಶಿಶು ಅಭಿವೃದ್ಧಿ ಸೇವಾ ಯೋಜನೆ:–

ಇಲಾಖೆಯಲ್ಲಿ ಸಮಗ್ರ ಶಿಶು ಅಭಿವೃದ್ಧಿ ಸೇವಾ ಯೋಜನೆಯು ಅತಿ ಪ್ರಾಮುಖ್ಯ ಕಾರ್ಯಕ್ರಮವಾಗಿದ್ದು, 0–6 ವರ್ಷದೊಳಗಿನ ಮಕ್ಕಳ ಪೌಷ್ಠಿಕತೆ ಮಟ್ಟ ಹಾಗೂ ಆರೋಗ್ಯ ಸ್ಥಿತಿಯನ್ನು ಸುಧಾರಿಸುವುದು, ಮಗುವಿನ ಮಾನಸಿಕ, ಸಾಮಾಜಿಕ, ದೈಹಿಕ ಸಮರ್ಪಕ ಬೆಳವಣಿಗೆಗೆ ಬುನಾದಿ ಹಾಕುವುದು, ಶಿಶು ಮರಣ ದರ, ಅಪೌಷ್ಠಿಕತೆ, ಕಾಯಿಲೆ ಪ್ರಮಾಣ ಹಾಗೂ ಮಕ್ಕಳು ಶಾಲೆ ಬಿಡುವ ಪ್ರಮಾಣವನ್ನು ಕಡಿಮೆ ಮಾಡುವುದು, ಮಗುವಿನ ಸರ್ವಾಂಗೀಣ ಅಭಿವೃದ್ಧಿಗೆ ಇತರೆ ಇಲಾಖೆಗಳೊಂದಿಗೆ ಪರಿಣಾಮಕಾರಿಯಾದ ಸಮನ್ವಯತೆ ಸಾಧಿಸುವುದು, ಪೌಷ್ಠಿಕಾಂಶ ಹಾಗೂ ಆರೋಗ್ಯ ಶಿಕ್ಷಣವನ್ನು ನೀಡುವುದರ ಮೂಲಕ ಮಕ್ಕಳ ಸಾಮಾನ್ಯ ಆರೋಗ್ಯ ಹಾಗೂ ಪೌಷ್ಠಿಕ ಮಟ್ಟವನ್ನು ಕಾಪಾಡುವ ಬಗ್ಗೆ ತಾಯಂದಿರ ಸಾಮರ್ಥ್ಯವನ್ನು ಹೆಚ್ಚಿಸುವುದು ಯೋಜನೆಯ ಮುಖ್ಯ ಉದ್ದೇಶವಾಗಿರುತ್ತದೆ. ಈ ಯೋಜನೆಯಡಿ 6 ಸೇವೆಗಳನ್ನು ಒದಗಿಸಲಾಗುತ್ತಿದೆ.

1. 6 ವರ್ಷದೊಳಗಿನ ಮಕ್ಕಳಿಗೆ ಗರ್ಭಿಣಿ ಹಾಗೂ ಬಾಣಂತಿಯರಿಗೆ ಪೂರಕ ಪೌಷ್ಠಿಕ ಆಹಾರ ನೀಡುವುದು.
2. ಮಕ್ಕಳಿಗೆ ಹಾಗೂ ತಾಯಂದಿರಿಗೆ ರೋಗ ನಿರೋಧಕ ಚುಚ್ಚುಮದ್ದು ನೀಡುವುದು.
3. ಆರೋಗ್ಯ ತಪಾಸಣೆ.
4. ಸಲಹಾ ಸೇವೆ.
5. ಮಹಿಳೆಯರಿಗೆ ಆರೋಗ್ಯ ಮತ್ತು ಪೌಷ್ಠಿಕ ಶಿಕ್ಷಣ ನೀಡುವುದು.
6. 3–6 ವರ್ಷದೊಳಗಿನ ಮಕ್ಕಳಿಗೆ ಶಾಲಾಪೂರ್ವ ಚಟುವಟಿಕೆ ನಡೆಸುವುದು.

ಜಿಲ್ಲೆಯಲ್ಲಿ 846 ಅಂಗನವಾಡಿ ಕೇಂದ್ರಗಳು ಮತ್ತು 23 ಮಿನಿ ಅಂಗನವಾಡಿ ಕೇಂದ್ರಗಳು ಸೇರಿದಂತೆ ಒಟ್ಟು 869 ಕೇಂದ್ರಗಳು ಕಾರ್ಯ ನಿರ್ವಹಿಸುತ್ತಿವೆ.

ಸಮಗ್ರ ಶಿಶು ಅಭಿವೃದ್ಧಿ ಸೇವಾ ಯೋಜನೆಯಡಿ ಜಿಲ್ಲಾ ಉಪ ನಿರ್ದೇಶಕರ ಕಚೇರಿಯಲ್ಲಿರುವ ಐಸಿಡಿಎಸ್ ಉಸ್ತುವಾರಿ ಕೋಶದ 8 ಸಿಬ್ಬಂದಿಗಳಿಗೆ ವೇತನ ಪಾವತಿಸಲು ಮತ್ತು ಸದರಿ ಕೋಶದ ಆಡಳಿತ ವೆಚ್ಚ ಭರಿಸುವ ಸಲುವಾಗಿ ರೂ. 30.32 ಲಕ್ಷ ಅನುದಾನ ಬಿಡುಗಡೆಯಾಗಿದ್ದು, ರೂ. 16.33 ಲಕ್ಷ ಖರ್ಚಾಗಿರುತ್ತದೆ.

ಕೇಂದ್ರ ಸರ್ಕಾರದ ಸಮಗ್ರ ಶಿಶು ಅಭಿವೃದ್ಧಿ ಸೇವಾ ಯೋಜನೆಯಡಿ ಮಕ್ಕಳ ಸರ್ವತೋಮುಖ ಅಭಿವೃದ್ಧಿಗಾಗಿ 6 ಬಗೆಯ ವಿವಿಧ ಸೇವೆಗಳನ್ನು ಜಾರಿಗೊಳಿಸಲು ಅಗತ್ಯವಿರುವ ಆಡಳಿತಾತ್ಮಕ ವೆಚ್ಚಗಳನ್ನು ಭರಿಸಲು ಹಾಗೂ ಮೂರೂ ತಾಲ್ಲೂಕು ಶಿಶು ಅಭಿವೃದ್ಧಿ ಯೋಜನೆಗಳ ಸಿಬ್ಬಂದಿ ವೇತನ ಮತ್ತು ಅಂಗನವಾಡಿ ಕಾರ್ಯಕರ್ತೆ ಮತ್ತು ಸಹಾಯಕಿಯರ ಗೌರವಧನ ಪಾವತಿಗಾಗಿ ರೂ. 1924.68 ಲಕ್ಷ ಅನುದಾನ ಬಿಡುಗಡೆಯಾಗಿದ್ದು, ರೂ. 1782.09 ಲಕ್ಷ ಅನುದಾನ ಖರ್ಚಾಗಿರುತ್ತದೆ.

2. ಪೂರಕ ಪೌಷ್ಠಿಕ ಆಹಾರ ಕಾರ್ಯಕ್ರಮ:–

ಈ ಕಾರ್ಯಕ್ರಮದಡಿ ಆಯ್ಕೆ ಮಾಡಲಾದ ಗರ್ಭಿಣಿಯರು, ಬಾಣಂತಿಯರು ಮತ್ತು 6 ವರ್ಷದೊಳಗಿನ ಮಕ್ಕಳಿಗೆ ಅಂಗನವಾಡಿಗಳಲ್ಲಿ ವರ್ಷದಲ್ಲಿ 300 ದಿನಗಳ ಕಾಲ ಪೂರಕ ಪೌಷ್ಠಿಕ ಆಹಾರವನ್ನು ನೀಡಲಾಗುವುದು. ಈ ಕಾರ್ಯಕ್ರಮದಡಿ 6 ತಿಂಗಳಿಂದ 6 ವರ್ಷದ ಮಕ್ಕಳಿಗೆ ರೂ. 8.00, ಗರ್ಭಿಣಿ, ಬಾಣಂತಿ, ಅಂಗನವಾಡಿ

ಕಾರ್ಯಕರ್ತೆ ಮತ್ತು ಸಹಾಯಕಿಯರಿಗೆ ಮಾತೃಪೂರ್ಣ ಯೋಜನೆಯಡಿ ರೂ. 21.00, ಶಾಲೆಯಿಂದ ಹೊರಗುಳಿದ 11–14 ವರ್ಷದ ಕಿಶೋರಿಯರಿಗೆ ರೂ. 9.50 ಹಾಗೂ ತೀವ್ರ ಅಪೌಷ್ಠಿಕ ಮಕ್ಕಳಿಗೆ ರೂ. 12.00 ರ ಘಟಕ ವೆಚ್ಚದಲ್ಲಿ ಪೂರಕ ಪೌಷ್ಠಿಕ ಆಹಾರ ಬಾಬ್ತು ವೆಚ್ಚ ಭರಿಸಲಾಗುತ್ತಿದೆ. ಇದರಲ್ಲಿ ಅಂಗನವಾಡಿ ಕೇಂದ್ರಗಳಿಗೆ ಆಹಾರ ಪದಾರ್ಥಗಳನ್ನು ಒದಗಿಸುವ ಸಾಗಾಣಿಕೆ ವೆಚ್ಚ ಹಾಗೂ ಉರುವಲು ವೆಚ್ಚ ಒಳಗೊಂಡಿರುತ್ತದೆ. ಇದು ತಾಲ್ಲೂಕು ಪಂಚಾಯತ್ ಕಾರ್ಯಕ್ರಮವಾಗಿರುತ್ತದೆ. ಹಾಗೂ ಕ್ಷೀರಭಾಗ್ಯ ಯೋಜನೆಯಡಿ 6 ತಿಂಗಳಿಂದ 6 ವರ್ಷದ ಮಕ್ಕಳಿಗೆ ವಾರದಲ್ಲಿ 5 ದಿನ ಕೆನೆಸಹಿತ ಹಾಲಿನ ಪುಡಿಯಿಂದ ತಯಾರಿಸಿದ 150 ಮಿ.ಲೀ. ಹಾಲನ್ನು 10 ಗ್ರಾಂ ಸಕ್ಕರೆ ಬೆರೆಸಿ ನೀಡಲಾಗುವುದು. ಅಂಗನವಾಡಿ ಕೇಂದ್ರಗಳಿಗೆ ಹಾಜರಾಗುವ 3 ರಿಂದ 6 ವರ್ಷದ ಮಕ್ಕಳಿಗೆ ವಾರದಲ್ಲಿ 2 ದಿನ ಮೊಟ್ಟೆ ನೀಡಲಾಗುತ್ತಿದೆ. ಈ ಕಾರ್ಯಕ್ರಮದಡಿ 2019–20ನೇ ಸಾಲಿನಲ್ಲಿ 1536.01 ಲಕ್ಷ ಅನುದಾನ ಬಿಡುಗಡೆಯಾಗಿದ್ದು, ರೂ. 895.88 ಲಕ್ಷ ವೆಚ್ಚ ಭರಿಸಲಾಗಿರುತ್ತದೆ. ತಾಲ್ಲೂಕುವಾರು ಸಾಧನೆಯ ವಿವರ ಈ ಕೆಳಕಂಡಂತಿರುತ್ತದೆ.

ಕ್ರ. ಸಂ.	ಯೋಜನೆಯ ಹೆಸರು	ಕಾರ್ಯನಿರತ ಅಂಗನವಾಡಿ/ ಮಿನಿ ಅಂಗನವಾಡಿ ಕೇಂದ್ರಗಳ ಸಂಖ್ಯೆ	ಭೌತಿಕ		ಆರ್ಥಿಕ	
			ಗುರಿ	ಸಾಧನೆ	ಬಿಡುಗಡೆಯಾದ ಅನುದಾನ (ರೂ. ಲಕ್ಷಗಳಲ್ಲಿ)	ಸಾಧನೆ (ರೂ. ಲಕ್ಷಗಳಲ್ಲಿ)
1	ಮಡಿಕೇರಿ	246+3	9101	6789	474.88	239.36
2	ಸೋಮವಾರಪೇಟೆ	275+9	12483	9611	532.36	287.20
3	ಪೊನ್ನಂಪೇಟೆ	325+10	14284	11309	528.77	369.32
	ಒಟ್ಟು	846+23	35868	27709	1536.01	895.88

3. ಅಂಗನವಾಡಿ ಕಟ್ಟಡಗಳ ದುರಸ್ತಿ:–

2019–20ನೇ ಸಾಲಿನಲ್ಲಿ ಅಂಗನವಾಡಿ ಕಟ್ಟಡಗಳ ದುರಸ್ತಿಗಾಗಿ ರೂ. 80.00 ಲಕ್ಷ ಅನುದಾನ ಬಿಡುಗಡೆಯಾಗಿದ್ದು, 56 ಕಟ್ಟಡಗಳ ದುರಸ್ತಿಗಾಗಿ ರೂ. 27.99 ಲಕ್ಷ ಅನುದಾನ ವೆಚ್ಚ ಭರಿಸಲಾಗಿರುತ್ತದೆ.

4. ನಿರ್ಗತಿಕ ಮಕ್ಕಳ ಕುಟೀರಗಳಿಗೆ ಅನುದಾನ:–

ಅನಾಥ ಹಾಗೂ ನಿರ್ಗತಿಕ ಮಕ್ಕಳ ಕುಟೀರ ನಡೆಸಲು ಅರ್ಹ ಸ್ವಯಂ ಸೇವಾ ಸಂಸ್ಥೆಗಳಿಗೆ ನಿಬಂಧನೆಗೊಳಪಟ್ಟು ಶೇ. 90 ರಷ್ಟು ಸಹಾಯಧನ ನೀಡಲಾಗುತ್ತಿದೆ. ಈ ಯೋಜನೆಯಡಿಯಲ್ಲಿ ಜಿಲ್ಲಾ ಪಂಚಾಯತ್‌ನಿಂದ ರೂ. 9.00 ಲಕ್ಷ ಬಿಡುಗಡೆ ಆಗಿರುತ್ತದೆ. ಬಿಡುಗಡೆಯಾದ ಅನುದಾನದಲ್ಲಿ ಜಿಲ್ಲೆಯ 3 ನಿರ್ಗತಿಕ ಕುಟೀರಗಳ 44 ಫಲಾನುಭವಿಗಳಿಗೆ ರೂ. 4.81 ಲಕ್ಷ ಖರ್ಚಾಗಿರುತ್ತದೆ.

ಸಮಾಜ ಕಲ್ಯಾಣ ಇಲಾಖೆ

2019–20ನೇ ಸಾಲಿಗೆ ಜಿಲ್ಲೆಯ ಪರಿಶಿಷ್ಟ ಜಾತಿ ಜನಾಂಗದವರ ಸಾಮಾಜಿಕ, ಆರ್ಥಿಕ ಮತ್ತು ಶೈಕ್ಷಣಿಕ ಅಭಿವೃದ್ಧಿಗೆ ಇಲಾಖೆಯಿಂದ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಈ ಹಿನ್ನೆಲೆಯಲ್ಲಿ ಜಿಲ್ಲಾ ಪಂಚಾಯತ್ ಕಾರ್ಯಕ್ರಮದಡಿ ರೂ.420.30ಲಕ್ಷ ಅನುದಾನ ನಿಗಧಿಪಡಿಸಿದ್ದು, ಬಿಡುಗಡೆಯಾದ ರೂ.437.30ಲಕ್ಷ ಅನುದಾನದಲ್ಲಿ ರೂ.417.25ಲಕ್ಷ ಖರ್ಚು ಭರಿಸಿ, ಶೇ.95.41ರಷ್ಟು ಸಾಧನೆ ಮಾಡಲಾಗಿರುತ್ತದೆ. ಹಾಗೂ ತಾಲ್ಲೂಕು ಪಂಚಾಯತ್ ಕಾರ್ಯಕ್ರಮಗಳಡಿ ರೂ.574.60ಲಕ್ಷ ಅನುದಾನ ನಿಗಧಿಯಾಗಿದ್ದು, ರೂ.514.60ಲಕ್ಷ ಬಿಡುಗಡೆಯಾಗಿರುತ್ತದೆ. ಸದರಿ ಅನುದಾನದಲ್ಲಿ ಮಾರ್ಚ್–2020ರ ಅಂತ್ಯಕ್ಕೆ ರೂ.454.89ಲಕ್ಷ ಅನುದಾನವನ್ನು ಖರ್ಚುಭರಿಸಲಾಗಿದ್ದು, ಶೇ.88.39%ರಷ್ಟು ಪ್ರಗತಿ ಸಾಧಿಸಲಾಗಿರುತ್ತದೆ.

ವಿದ್ಯಾಭ್ಯಾಸ:–ಜಿಲ್ಲೆಯ ಸಮಾಜ ಕಲ್ಯಾಣ ಇಲಾಖೆಯಲ್ಲಿ ಒಟ್ಟು 21 ವಿದ್ಯಾರ್ಥಿನಿಲಯಗಳು ಕಾರ್ಯನಿರ್ವಹಿಸುತ್ತಿದ್ದು, ಅದರಲ್ಲಿ ಮೆಟ್ರಿಕ್ ಪೂರ್ವ ಬಾಲಕರ 10 ಹಾಗೂ 07 ಬಾಲಕಿಯರ ವಿದ್ಯಾರ್ಥಿ ನಿಲಯಗಳು, 02 ಮೆಟ್ರಿಕ್ ನಂತರದ ಬಾಲಕರ ಮತ್ತು 02 ಬಾಲಕಿಯರ ವಿದ್ಯಾರ್ಥಿನಿಲಯಗಳು, 01 ವಸತಿ ಶಾಲೆ, 01 ಮೊರಾರ್ಜಿ ದೇಸಾಯಿ ವಸತಿ ಶಾಲೆ ಹಾಗೂ ಪದವಿ ಪೂರ್ವ ಕಾಲೇಜು, 01 ಡಾ॥ ಬಿ.ಆರ್. ಅಂಬೇಡ್ಕರ್ ವಸತಿ ಶಾಲೆ (ಸಹ ಶಿಕ್ಷಣ) ಹಾಗೂ 01 ಡಾ॥ ಬಿ.ಆರ್.ಅಂಬೇಡ್ಕರ್ ಬಾಲಕಿಯರ ವಸತಿ ಶಾಲೆ ಕಾರ್ಯ ನಿರ್ವಹಿಸುತ್ತಿದ್ದು, ಸದರಿ ವಿದ್ಯಾರ್ಥಿನಿಲಯದ ವಿದ್ಯಾರ್ಥಿಗಳಿಗೆ ಇಲಾಖಾ ವತಿಯಿಂದ ಉಚಿತ ಊಟ, ವಸತಿ, ಸಮವಸ್ತ್ರ, ಲೇಖನಾ ಸಾಮಾಗ್ರಿ ಹಾಗೂ ಇತರೆ ಸಾಧಿಲ್ವಾರು ಸಾಮಾಗ್ರಿಗಳನ್ನು ನೀಡಲಾಗುತ್ತಿದೆ.

ನಿರ್ದೇಶನ ಮತ್ತು ಆಡಳಿತ: 2019–20ನೇ ಸಾಲಿನಲ್ಲಿ ಯೋಜನೇತರ ಬಾಬ್ತಿನಡಿ ಉಪನಿರ್ದೇಶಕರ ಕಛೇರಿ ಮತ್ತು 03 ತಾಲ್ಲೂಕಿನ ಸಹಾಯಕ ನಿರ್ದೇಶಕರ ಕಛೇರಿ ಸಿಬ್ಬಂದಿ ವೇತನ, ಹೊರಸಂಪನ್ಮೂಲ ಸಿಬ್ಬಂದಿ ವೇತನ ಹಾಗೂ ಕಛೇರಿ ನಿರ್ವಹಣೆಗಾಗಿ ರೂ. 140.00 ಲಕ್ಷ ಅನುದಾನ ನಿಗಧಿಪಡಿಸಲಾಗಿದ್ದು, ಖಾಯಂ ಸಿಬ್ಬಂದಿ ವೇತನಕ್ಕಾಗಿ ಹೆಚ್ಚುವರಿಯಾಗಿ ರೂ.18.00ಲಕ್ಷ ಒಟ್ಟು ರೂ.158.00ಲಕ್ಷ ಅನುದಾನ ಬಿಡುಗಡೆಯಾಗಿರುತ್ತದೆ. ಸದರಿ ಅನುದಾನದಲ್ಲಿ ಒಟ್ಟು ರೂ.149.47ಲಕ್ಷ ಅನುದಾನವನ್ನು ಮಾರ್ಚ್–2020ರ ಅಂತ್ಯಕ್ಕೆ ಖರ್ಚು ಭರಿಸಲಾಗಿರುತ್ತದೆ.

ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಗಳು: ಈ ಕಾರ್ಯಕ್ರಮದಡಿ ಜಿಲ್ಲೆಯ 17 ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಗಳ ಖಾಯಂ ಸಿಬ್ಬಂದಿ ವೇತನ ಹಾಗೂ ಹೊರಸಂಪನ್ಮೂಲ ಸಿಬ್ಬಂದಿಗಳ ವೇತನ ಮತ್ತು ವಿದ್ಯಾರ್ಥಿಗಳ ಊಟೋಪಚಾರ, ಸಾದಿಲ್ವಾರು ವೆಚ್ಚ ಮತ್ತು ನಿಲಯ ನಿರ್ವಹಣೆಗಾಗಿ ವಾರ್ಷಿಕ ಅನುದಾನ ರೂ.393.00ಲಕ್ಷಗಳನ್ನು ನಿಗಧಿಪಡಿಸಲಾಗಿದ್ದು, ಬಿಡುಗಡೆಯಾದ ರೂ.393.00ಲಕ್ಷಗಳಲ್ಲಿ, ರೂ.336.41ಲಕ್ಷಗಳನ್ನು ಖರ್ಚುಭರಿಸಿ, 650 ಭೌತಿಕ ಸಾಧನೆಯಾಗಿರುತ್ತದೆ.

ಸರ್ಕಾರಿ ಕಾಲೇಜು ವಿದ್ಯಾರ್ಥಿ ನಿಲಯಗಳು: ಈ ಕಾರ್ಯಕ್ರಮದಡಿ 04 ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳು ಕಾರ್ಯನಿರ್ವಹಿಸುತ್ತಿದ್ದು ಖಾಯಂ ಸಿಬ್ಬಂದಿ ಹಾಗೂ ಹೊರಸಂಪನ್ಮೂಲ ಸಿಬ್ಬಂದಿ ವೇತನ ಮತ್ತು ನಿಲಯ ನಿರ್ವಹಣೆಗಾಗಿ ರೂ.70.52ಲಕ್ಷ ಅನುದಾನ ನಿಗಧಿಪಡಿಸಲಾಗಿದ್ದು ಬಿಡುಗಡೆಯಾದ ರೂ.70.52ಲಕ್ಷ ಅನುದಾನದಲ್ಲಿ ರೂ.60.40ಲಕ್ಷ ಅನುದಾನ ವೆಚ್ಚಭರಿಸಿ 349 ಭೌತಿಕ ಸಾಧನೆಯಾಗಿರುತ್ತದೆ.

ವಸತಿ ಶಾಲೆಗಳು: ವಸತಿ ಶಾಲೆ, ಕಕ್ಕಬೆ ಮಡಿಕೇರಿ ತಾಲ್ಲೂಕು ಇಲ್ಲಿನ ಖಾಯಂ/ ಹೊರಸಂನ್ಮೂಲ ಸಿಬ್ಬಂದಿ ವೇತನ ಹಾಗೂ ವಿದ್ಯಾರ್ಥಿಗಳ ನಿರ್ವಹಣೆಗಾಗಿ ರೂ.16.78ಲಕ್ಷ ಅನುದಾನ ನಿಗಧಿಪಡಿಸಿ ರೂ.16.78ಲಕ್ಷ ಅನುದಾನ ಬಿಡುಗಡೆಯಾಗಿರುತ್ತದೆ. ರೂ.15.28ಲಕ್ಷ ಅನುದಾನವನ್ನು ವೆಚ್ಚಭರಿಸಿ 57 ಭೌತಿಕ ಸಾಧನೆಯಾಗಿರುತ್ತದೆ.

ಶ್ರೇಷ್ಟತೆ ಪಡೆದ ಪರಿಶಿಷ್ಟ ಜಾತಿ ವಿದ್ಯಾರ್ಥಿಗಳಿಗೆ ಸಹಾಯಧನ: ಸದರಿ ಕಾರ್ಯಕ್ರಮ ಅನುಷ್ಠಾನಕ್ಕಾಗಿ

ರೂ.50.00ಲಕ್ಷ ಅನುದಾನ ನಿಗಧಿಪಡಿಸಿದ್ದು, ರೂ.50.00ಲಕ್ಷ ಬಿಡುಗಡೆಯಾಗಿರುತ್ತದೆ. ಸದರಿ ಅನುದಾನದಲ್ಲಿ ಕಾಲೇಜು ಹಂತದ ಕೊನೆಯ ವಾರ್ಷಿಕ ಪರೀಕ್ಷೆಯಲ್ಲಿ ಪ್ರಥಮ ದರ್ಜೆಯಲ್ಲಿ ಪ್ರಥಮ ಹಂತದಲ್ಲಿ ಉತ್ತೀರ್ಣರಾದ ಪರಿಶಿಷ್ಟ ಜಾತಿಯ 300 ಅಭ್ಯರ್ಥಿಗಳಿಗೆ ಪ್ರೋತ್ಸಾಹಧನ ಹಾಗೂ 42 ಬಿ.ಎಡ್ ಪ್ರಶಿಕ್ಷಣಾರ್ಥಿಗಳಿಗೆ ಬೋಧನಾ ಉಪಕರಣಗಳನ್ನು ಸರಬರಾಜು ಮಾಡಿ ಒಟ್ಟು ರೂ.50.0ಲಕ್ಷ ಅನುದಾನವನ್ನು ಖರ್ಚು ಭರಿಸಲಾಗಿರುತ್ತದೆ.

ವೈದ್ಯಕೀಯ ಮತ್ತು ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಪುಸ್ತಕ ಭಂಡಾರ: ಸದರಿ ಕಾರ್ಯಕ್ರಮದಡಿ ರಾಜ್ಯದ ಪಾಲಿನ ರೂ. 0.50 ಲಕ್ಷ ಮತ್ತು ಕೇಂದ್ರದ ಪಾಲಿನ ರೂ.0.50ಲಕ್ಷ ಒಟ್ಟು ರೂ.1.00ಲಕ್ಷ ಅನುದಾನ ನಿಗಧಿಯಾಗಿದ್ದು, ಅನುದಾನ ಬಿಡುಗಡೆಯಾಗಿರುವುದಿಲ್ಲ.

ಕಾನೂನು ಪದವೀಧರರಿಗೆ ಸಹಾಯಧನ: ಸದರಿ ಕಾರ್ಯಕ್ರಮಕ್ಕಾಗಿ ರೂ. 3.60 ಲಕ್ಷ ಅನುದಾನ ನಿಗಧಿಪಡಿಸಿದ್ದು, ರೂ.3.00ಲಕ್ಷ ಅನುದಾನ ಬಿಡುಗಡೆಯಾಗಿರುತ್ತದೆ. ಸದರಿ ಅನುದಾನದಲ್ಲಿ ಕಾನೂನು ಪದವೀಧರರಿಗೆ ಮಾಹೆವಾರು ರೂ. 10000/–ಗಳ ಶಿಷ್ಯವೇತನ ನೀಡಿ ರೂ.3.00ಲಕ್ಷಗಳನ್ನು ಒಟ್ಟು 6 ಕಾನೂನುಪದವೀಧರರಿಗಾಗಿ ವೆಚ್ಚಭರಿಸಲಾಗಿರುತ್ತದೆ.

ಪರಿಶಿಷ್ಟ ಜಾತಿ ವಿದ್ಯಾರ್ಥಿಗಳಿಗೆ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ವೇತನ: ಸದರಿ ಕಾರ್ಯಕ್ರಮದಡಿ ಒಟ್ಟು ರೂ.96.00ಲಕ್ಷ ಅನುದಾನ ನಿಗಧಿಪಡಿಸಿ ಬಿಡುಗಡೆಯಾದ ರೂ.96.00ಲಕ್ಷ ಅನುದಾನದಲ್ಲಿ ಜಿಲ್ಲೆಯಲ್ಲಿರುವ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿ 1 ರಿಂದ 10ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ಜಾತಿಯ 6114 ವಿದ್ಯಾರ್ಥಿಗಳಿಗೆ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ವೇತನ ಮಂಜೂರಾತಿಗಾಗಿ ರೂ.94.60ಲಕ್ಷಗಳನ್ನು ವೆಚ್ಚಭರಿಸಲಾಗಿರುತ್ತದೆ.

ಮೆಟ್ರಿಕ್ ನಂತರದ ವಿದ್ಯಾರ್ಥಿವೇತನ: ಸದರಿ ಕಾರ್ಯಕ್ರಮದಡಿ ಪಿ.ಯು.ಸಿ ಯಿಂದ ಸ್ನಾತಕೋತರ, ವೈದ್ಯಕೀಯ, ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಓದುತ್ತಿರುವ ವಿದ್ಯಾರ್ಥಿಗಳಿಗೆ ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನ ಮಂಜೂರು ಮಾಡಲು ಕೇಂದ್ರದ ಪಾಲು ರೂ.60.00ಲಕ್ಷ ಅನುದಾನ ನಿಗಧಿಪಡಿಸಿದ್ದು, ಅನುದಾನ ಬಿಡುಗಡೆಯಾಗಿರುವುದಿಲ್ಲ.

ಹೆಚ್ಚಿನ ಊಟ ಮತ್ತು ವಸತಿ ವೆಚ್ಚಗಳ ಸಹಾಯ: ಸದರಿ ಕಾರ್ಯಕ್ರಮದಡಿ ಜಿಲ್ಲೆಯ ಮೆಟ್ರಿಕ್ ನಂತರದ 02 ಬಾಲಕರ ಹಾಗೂ 02 ಬಾಲಕಿಯರ ವಿದ್ಯಾರ್ಥಿ ನಿಲಯಗಳಲ್ಲಿ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ಜಾತಿ ವಿದ್ಯಾರ್ಥಿಗಳಿಗೆ ಹೆಚ್ಚಿನ ಊಟ ಮತ್ತು ವಸತಿ ವೆಚ್ಚಕ್ಕಾಗಿ ರೂ.17.00ಲಕ್ಷ ಅನುದಾನ ನಿಗಧಿಪಡಿಸಿದ್ದು, ರೂ.17.00ಲಕ್ಷ ಅನುದಾನ ಬಿಡುಗಡೆಯಾಗಿರುತ್ತದೆ. ಈ ಅನುದಾನದಲ್ಲಿ 210 ವಿದ್ಯಾರ್ಥಿಗಳಿಗೆ ರೂ.16.92ಲಕ್ಷ ಅನುದಾನವನ್ನು ಖರ್ಚುಭರಿಸಲಾಗಿದೆ.

ನರ್ಸರಿ ಮತ್ತು ಮಹಿಳಾ ಕಲ್ಯಾಣ ಕೇಂದ್ರ: ಸದರಿ ಕಾರ್ಯಕ್ರಮದಡಿ ಮಡಿಕೇರಿ ತಾಲ್ಲೂಕಿನ ಮಹಿಳಾ ಕಲ್ಯಾಣ ಕೇಂದ್ರದ ಒಬ್ಬ ಸಿಬ್ಬಂದಿ ವೇತನಕ್ಕಾಗಿ ರೂ.5.00ಲಕ್ಷ ಅನುದಾನ ನಿಗಧಿಪಡಿಸಿದ್ದು, ರೂ.5.00ಲಕ್ಷ ಅನುದಾನ ಬಿಡುಗಡೆಯಾಗಿರುತ್ತದೆ. ಈ ಅನುದಾನದಲ್ಲಿ ರೂ.3.96ಲಕ್ಷ ಅನುದಾನ ಖರ್ಚು ಭರಿಸಲಾಗಿರುತ್ತದೆ.

ಪರಿಶಿಷ್ಟ ವರ್ಗಗಳ ಕಲ್ಯಾಣಾ ಇಲಾಖೆ

ಜಿಲ್ಲಾ ಪಂಚಾಯತ್ ಕಾರ್ಯಕ್ರಮ:–

ಜಿಲ್ಲಾ ಪಂಚಾಯತ್ ಕಾರ್ಯಕ್ರಮದಡಿ ರೂ.883.50ಲಕ್ಷ ಬಿಡುಗಡೆಯಾಗಿದ್ದು, ಮಾರ್ಚ್ 2020ರ ಅಂತ್ಯದವರೆಗೆ ರೂ.814.04ಲಕ್ಷ ವೆಚ್ಚವಾಗಿದ್ದು, ಶೇ.92 ರಷ್ಟು ಪ್ರಗತಿಯನ್ನು ಸಾಧಿಸಲಾಗಿರುತ್ತದೆ.

ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನ

ಮೆಟ್ರಿಕ್ ನಂತರದ ವಿದ್ಯಾರ್ಥಿವೇತನಕ್ಕಾಗಿ ಲೆಕ್ಕಶೀರ್ಷಿಕೆ:2225–00–102–0–31 ರಡಿ ರೂ.18.69ಲಕ್ಷ ಅನುದಾನ ಬಿಡುಗಡೆಯಾಗಿದ್ದು, ಮಾರ್ಚ್ 2020ರ ಅಂತ್ಯದವರೆಗೆ ರೂ.18.69ಲಕ್ಷ ವೆಚ್ಚವಾಗಿರುತ್ತದೆ.

ಮಡಿಕೇರಿ ತಾಲ್ಲೂಕಿನಲ್ಲಿ 1, ಸೋಮವಾರಪೇಟೆ ತಾಲ್ಲೂಕಿನಲ್ಲಿ 1 ಹಾಗೂ ವಿರಾಜಪೇಟೆ ತಾಲ್ಲೂಕಿನಲ್ಲಿ 6 ಒಟ್ಟು 8 ವಿದ್ಯಾರ್ಥಿನಿಲಯಗಳು ಕಾರ್ಯನಿರ್ವಹಿಸುತ್ತಿವೆ. 2019–20ನೇ ಸಾಲಿನಲ್ಲಿ ವಿದ್ಯಾರ್ಥಿಗಳ ಊಟದ ವೆಚ್ಚ, ವಿದ್ಯಾರ್ಥಿನಿಲಯಗಳ ನಿರ್ವಹಣಾ ವೆಚ್ಚ ಹಾಗೂ ಸದರಿ ವಿದ್ಯಾರ್ಥಿನಿಲಯಗಳಲ್ಲಿ ಕಾರ್ಯನಿರ್ವಹಿಸುತ್ತಿರುವ 18 ಖಾಯಂ ಸಿಬ್ಬಂದಿಗಳ ವೇತನ ಹಾಗೂ ಹೊರಸಂಪನ್ಮೂಲ ಸಿಬ್ಬಂದಿಗಳ ವೇತನಕ್ಕಾಗಿ ಲೆಕ್ಕಶೀರ್ಷಿಕೆ:2225–00–102–0–33 ರಡಿ ರೂ.205.29ಲಕ್ಷ ಬಿಡುಗಡೆಯಾಗಿದ್ದು, ಮಾರ್ಚ್ 2020ರ ಅಂತ್ಯಕ್ಕೆ ರೂ.198.31ಲಕ್ಷ ವೆಚ್ಚವಾಗಿರುತ್ತದೆ.

ಆಶ್ರಮಶಾಲೆಗಳು :

ಜಿಲ್ಲೆಯಲ್ಲಿ 11 ಆಶ್ರಮಶಾಲೆಗಳು ಕಾರ್ಯನಿರ್ವಹಿಸುತ್ತಿದ್ದು, ಈ ಶಾಲೆಗಳಲ್ಲಿ 1 ರಿಂದ 7ನೇ ತರಗತಿವರೆಗೆ ಪರಿಶಿಷ್ಟ ವರ್ಗ, ಪರಿಶಿಷ್ಟ ಜಾತಿ ಹಾಗೂ ಇತರೆ ಹಿಂದುಳಿದ ವರ್ಗದ ವಿದ್ಯಾರ್ಥಿಗಳಿಗೆ ವಿದ್ಯಾಭ್ಯಾಸ ಮಾಡಲು ಅವಕಾಶವಿರುತ್ತದೆ. ಈ ವಿದ್ಯಾರ್ಥಿಗಳಿಗೆ ಸರ್ಕಾರದಿಂದ ಉಚಿತ ಶಿಕ್ಷಣ, ಉಚಿತ ಊಟ, ಸಮವಸ್ತ್ರ, ಲೇಖನಾ ಸಾಮಾಗ್ರಿ ಇತ್ಯಾದಿಗಳನ್ನು ನೀಡಲಾಗುತ್ತದೆ. 2019–20ನೇ ಸಾಲಿನ ವಿದ್ಯಾರ್ಥಿಗಳಿಗೆ ಆಹಾರ ವೆಚ್ಚ ಹಾಗೂ 11 ಶಾಲೆಗಳ ನಿರ್ವಹಣೆ ಹಾಗೂ 95 ಖಾಯಂ ಸಿಬ್ಬಂದಿಗಳ ವೇತನ ಹಾಗೂ ಹೊರಸಂಪನ್ಮೂಲ ಸಿಬ್ಬಂದಿಗಳ ವೇತನ ಮತ್ತಿತರ ವೆಚ್ಚಗಳಿಗಾಗಿ ಲೆಕ್ಕಶಿರ್ಷಿಕೆ:2225–00–102–0–35 ರಡಿ ರೂ.534.29ಲಕ್ಷ ಬಿಡುಗಡೆಯಾಗಿದ್ದು, ಮಾರ್ಚ್ 2020ರ ಅಂತ್ಯಕ್ಕೆ ರೂ.491.97ಲಕ್ಷ ವೆಚ್ಚವಾಗಿರುತ್ತದೆ.

ಕಚೇರಿ ನಿರ್ವಹಣೆ :

ಜಿಲ್ಲಾ ಕಚೇರಿಯಲ್ಲಿ ಒಟ್ಟು 10 ಜನ ಖಾಯಂ ಅಧಿಕಾರಿ ಮತ್ತು ಸಿಬ್ಬಂದಿಗಳಿದ್ದು, ಇವರ ವೇತನ, ಕಚೇರಿ ಹಾಗೂ ವಾಹನ ನಿರ್ವಹಣೆ, ಹೊರಸಂಪನ್ಮೂಲ ಸಿಬ್ಬಂದಿಗಳ ವೇತನ ಮತ್ತಿತರ ವೆಚ್ಚಗಳಿಗಾಗಿ ಲೆಕ್ಕಶಿರ್ಷಿಕೆ:2225–00–102–0–45 ರಡಿ ರೂ.83.23ಲಕ್ಷ ಬಿಡುಗಡೆಯಾಗಿದ್ದು, ಮಾರ್ಚ್ 2020ರ ಅಂತ್ಯಕ್ಕೆ ರೂ.82.52ಲಕ್ಷ ವೆಚ್ಚವಾಗಿರುತ್ತದೆ.

ಮೆಟ್ರಿಕ್ ಪೂರ್ವ ವಿದ್ಯಾರ್ಥಿವೇತನ/ಪ್ರೋತ್ಸಾಹಧನ :

ಮೆಟ್ರಿಕ್ ಪೂರ್ವ ವಿದ್ಯಾರ್ಥಿಗಳ ವಿದ್ಯಾರ್ಥಿವೇತನ/ ಧನ ಸಹಾಯ/ ಪ್ರೋತ್ಸಾಹಧನಕ್ಕಾಗಿ ಲೆಕ್ಕಶೀರ್ಷಿಕೆ:2225–00–102–0–38 ರಡಿ ರೂ.42.00ಲಕ್ಷ ಬಿಡುಗಡೆಯಾಗಿದ್ದು, ಮಾರ್ಚ್ 2020ರ ಅಂತ್ಯಕ್ಕೆ ರೂ.22.55ಲಕ್ಷ ವೆಚ್ಚವಾಗಿರುತ್ತದೆ.

ಪುಸ್ತಕ ಭಂಡಾರ :

ಲೆಕ್ಕಶೀರ್ಷಿಕೆ:2225–00–102–0–08 ರಡಿ ಪರಿಶಿಷ್ಟ ವರ್ಗದ ವೈದ್ಯಕೀಯ ಮತ್ತು ಇಂಜಿನಿಯರಿಂಗ್ ವಿದ್ಯಾರ್ಥಿಗಳ ಪುಸ್ತಕ ಭಂಡಾರಕ್ಕಾಗಿ ಕೇಂದ್ರ ಪುರಸ್ಕೃತ ಯೋಜನೆ ಕಾರ್ಯಕ್ರಮವಿದ್ದು, 2019–20ನೇ ಸಾಲಿಗೆ ಅನುದಾನ ಬಿಡುಗಡೆಯಾಗಿರುವುದಿಲ್ಲ.

ತಾಲ್ಲೂಕು ಪಂಚಾಯತ್ ಕಾರ್ಯಕ್ರಮ:–

ತಾಲ್ಲೂಕು ಪಂಚಾಯತ್ ಕಾರ್ಯಕ್ರಮದಡಿ ರೂ.108.23ಲಕ್ಷ ಬಿಡುಗಡೆಯಾಗಿದ್ದು, ಮಾರ್ಚ್ 2020ರ ಅಂತ್ಯದವರೆಗೆ ರೂ.95.95ಲಕ್ಷ ವೆಚ್ಚವಾಗಿದ್ದು, ಶೇ.89 ರಷ್ಟು ಪ್ರಗತಿಯನ್ನು ಸಾಧಿಸಲಾಗಿರುತ್ತದೆ.

ಮೆಟ್ರಿಕ್ ಪೂರ್ವ ವಿದ್ಯಾರ್ಥಿವೇತನ :

1 ರಿಂದ 5ನೇ ತರಗತಿ ಬಾಲಕರಿಗೆ ವಾರ್ಷಿಕವಾಗಿ ರೂ:1000/–, ಬಾಲಕಿಯರಿಗೆ ರೂ:1100/–, 6 ರಿಂದ 7ನೇ ತರಗತಿ ಬಾಲಕರಿಗೆ ವಾರ್ಷಿಕವಾಗಿ ರೂ:1150/–, ಬಾಲಕಿಯರಿಗೆ ರೂ:1250/– ಹಾಗೂ 8 ರಿಂದ 10ನೇ ತರಗತಿ

ಬಾಲಕರಿಗೆ ವಾರ್ಷಿಕವಾಗಿ ರೂ:1250/–, ಬಾಲಕಿಯರಿಗೆ ರೂ:1350/–ರಂತೆ SSP (State Scholarship Portal) ರಡಿ ವಿದ್ಯಾರ್ಥಿ ವೇತನಕ್ಕಾಗಿ ಲೆಕ್ಕಶೀರ್ಷಿಕೆ:2225–00–102–0–68 ರಡಿ ರೂ.53.20ಲಕ್ಷ ಬಿಡುಗಡೆಯಾಗಿದ್ದು, ಮಾರ್ಚ್ 2020ರ ಅಂತ್ಯಕ್ಕೆ 3660 ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ಮಂಜೂರು ಮಾಡಿ ರೂ.43.33ಲಕ್ಷ ವೆಚ್ಚವಾಗಿರುತ್ತದೆ.

9 ಮತ್ತು 10ನೇ ತರಗತಿ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ

9 ಮತ್ತು 10ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ವಾರ್ಷಿಕವಾಗಿ ರೂ.2250/– ರಂತೆ ವಿದ್ಯಾರ್ಥಿ ವೇತನಕ್ಕಾಗಿ ಲೆಕ್ಕಶೀರ್ಷಿಕೆ:2225–00–102–0–09 ರಡಿ ರೂ.12.90ಲಕ್ಷ ಬಿಡುಗಡೆಯಾಗಿದ್ದು, ಮಾರ್ಚ್ 2020ರ ಅಂತ್ಯಕ್ಕೆ ಒಟ್ಟು 53 ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ಮಂಜೂರು ಮಾಡಿ ರೂ.12.09ಲಕ್ಷ ವೆಚ್ಚವಾಗಿರುತ್ತದೆ.

ಮೆಟ್ರಿಕ್ ನಂತರದ ವಿದ್ಯಾರ್ಥಿವೇತನ

ಪಿ.ಯು.ಸಿ. ಮತ್ತು ಪಾಲಿಟೆಕ್ನಿಕ್, ಪದವಿ, ಸ್ನಾತಕೋತ್ತರ, ಹಾಗೂ ಇಂಜಿನಿಯರಿಂಗ್ ವಿದ್ಯಾರ್ಥಿಗಳಿಗೆ ಮೆಟ್ರಿಕ್ ನಂತರದ ವಿದ್ಯಾರ್ಥಿವೇತನಕ್ಕಾಗಿ ಲೆಕ್ಕಶೀರ್ಷಿಕೆ:2225–00–102–0–07 ರಡಿ ರೂ.37.13ಲಕ್ಷ ಬಿಡುಗಡೆಯಾಗಿದ್ದು, ಒಟ್ಟು ಮಾರ್ಚ್ 2020ರ ಅಂತ್ಯಕ್ಕೆ ಒಟ್ಟು 570 ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ಮಂಜೂರು ಮಾಡಿ ರೂ.37.13ಲಕ್ಷ ವೆಚ್ಚವಾಗಿರುತ್ತದೆ.

ಹೆಚ್ಚುವರಿ ಭೋಜನಾ ಮತ್ತು ವಸತಿ ವೆಚ್ಚ

ಗ್ರೂಪ್–1 (ಇಂಜಿನಿಯರಿಂಗ್ & ಮೆಡಿಕಲ್), ಗ್ರೂಪ್–2 (ಸ್ನಾತಕೋತ್ತರ ಪದವಿ), ಗ್ರೂಪ್–3 (ಪದವಿ ಮತ್ತು ಸಮನಾಂತರ), ಗ್ರೂಪ್–4 (ಪಿಯುಸಿ ಮತ್ತು ಸಮನಾಂತರ) ವಿದ್ಯಾರ್ಥಿಗಳಿಗೆ ಭೋಜನಾ ವೆಚ್ಚಕ್ಕಾಗಿ ಲೆಕ್ಕಶೀರ್ಷಿಕೆ:2225–00–102–0–71ರಡಿ ರೂ.5.00ಲಕ್ಷ ಬಿಡುಗಡೆಯಾಗಿದ್ದು, ಮಾರ್ಚ್ 2020ರ ಅಂತ್ಯಕ್ಕೆ ಒಟ್ಟು 30 ವಿದ್ಯಾರ್ಥಿಗಳಿಗೆ ರೂ.3.40ಲಕ್ಷ ವೆಚ್ಚವಾಗಿರುತ್ತದೆ.

ಗಿರಿಜನ ಉಪಯೋಜನೆ ಕಾರ್ಯಕ್ರಮ

ಈ ಕಾರ್ಯಕ್ರಮವನ್ನು ತಾಲ್ಲೂಕು ಪಂಚಾಯತ್ ಕಾರ್ಯನಿರ್ವಹಣಾಧಿಕಾರಿಗಳ ಮೂಲಕ ಅನುಷ್ಠಾನಗೊಳಿಸಲಾಗುತ್ತಿದ್ದು, ಲೆಕ್ಕಶೀರ್ಷಿಕೆ:2225–00–102–0–69 ರಡಿ 2019–20ನೇ ಸಾಲಿನಲ್ಲಿ ಪರಿಶಿಷ್ಟ ಪಂಗಡದ ಕಾಲೋನಿಗಳಲ್ಲಿ ರಸ್ತೆ, ಚರಂಡಿ ಮುಂತಾದ ಮೂಲಭೂತ ಸೌಕರ್ಯಗಳನ್ನು ಒದಗಿಸಲು ರೂ.37.00ಲಕ್ಷ ಬಿಡುಗಡೆಯಾಗಿದ್ದು, ಮಾರ್ಚ್ 2020 ರ ಅಂತ್ಯದೊಳಗೆ ರೂ.33.73ಲಕ್ಷವನ್ನು ವೆಚ್ಚಮಾಡಿ ಶೇ.91 ರಷ್ಟು ಸಾಧನೆ ಮಾಡಲಾಗಿರುತ್ತದೆ. 42 ಭೌತಿಕ ಗುರಿಗೆ 38 ಸಾಧನೆಯಾಗಿರುತ್ತದೆ.

ಪರಿಶಿಷ್ಟ ಪಂಗಡದ ಕುಟುಂಬಗಳಿಗೆ ಸಹಾಯಧನ ಒದಗಿಸಲು ಕಾರ್ಯಕ್ರಮದಡಿ ಕೃಷಿ ಇಲಾಖೆಯಿಂದ ಕೃಷಿ ಉಪಕರಣ, ರಸ ಗೊಬ್ಬರ, ಬಿತ್ತನೆಬೀಜ ಮುಂತಾದ ಕಾರ್ಯಕ್ರಮಗಳಿಗೆ ಸಹಾಯಧನ, ತೋಟಗಾರಿಕೆ ಇಲಾಖೆಯಿಂದ ಹಣ್ಣಿನ ಗಿಡಗಳ ಸರಬರಾಜು, ಜಲಾನಯನ ಇಲಾಖೆಯಿಂದ ಕೃಷಿಹೊಂಡ ನಿರ್ಮಾಣಕ್ಕೆ ಸಹಾಯಧನ, ಪಶುಸಂಗೋಪನಾ ಇಲಾಖೆಯಿಂದ ಹಸು ಮತ್ತು ಹಂದಿಮರಿಗಳ ಖರೀದಿಗೆ ಸಹಾಯಧನ, ಅರಣ್ಯ ಇಲಾಖೆಯಿಂದ ಕಿಟಕಿ–ಬಾಗಿಲು ಇತರೆ ಕಟ್ಟಡ ಸಾಮಗ್ರಿಗಳ ಸರಬರಾಜು, ಕೈಗಾರಿಕಾ ಇಲಾಖೆಯಿಂದ ಜೇನುಕೃಷಿ ತರಬೇತಿ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯಿಂದ ಆದಿಯುಗ ಪಂಗಡದ ವಿದ್ಯಾರ್ಥಿಗಳಿಗೆ ವಿಶೇಷ ಶಿಷ್ಯವೇತನ, ಪರಿಶಿಷ್ಟ ಪಂಗಡದ ಗಿರಿಜನ ಫಲಾನುಭವಿಗಳಿಗೆ ಮನೆಗಳ ನಿರ್ಮಾಣ, ಸಣ್ಣನೀರಾವರಿ ಇಲಾಖೆಯಿಂದ ಸಮೂಹ ನೀರಾವರಿ ಯೋಜನೆ ಮುಂತಾದ ವೈಯಕ್ತಿಕ ಕಾರ್ಯಕ್ರಮಗಳಿಗಾಗಿ ರೂ.19.00ಲಕ್ಷ ಬಿಡುಗಡೆಯಾಗಿದ್ದು, ಮಾರ್ಚ್ 2020ರ ಅಂತ್ಯಕ್ಕೆ ಲೆಕ್ಕಶೀರ್ಷಿಕೆ:2225–00–102–0–70 ರಡಿ ರೂ.18.64ಲಕ್ಷ ವೆಚ್ಚವಾಗಿದ್ದು, ಶೇ.98 ರಷ್ಟು ಸಾಧನೆಯಾಗಿರುತ್ತದೆ.

ಒಟ್ಟಾರೆಯಾಗಿ ಗಿರಿಜನ ಉಪಯೋಜನೆಯಡಿ ರೂ.56.00ಲಕ್ಷ ಬಿಡುಗಡೆಯಾಗಿದ್ದು, ಮಾರ್ಚ್ 2020 ರ ಅಂತ್ಯಕ್ಕೆ ರೂ.52.37ಲಕ್ಷ ವೆಚ್ಚವಾಗಿದ್ದು, ಶೇ. 94 ರಷ್ಟು ಸಾಧನೆಯಾಗಿರುತ್ತದೆ. 1629 ಭೌತಿಕ ಗುರಿಗೆ 1553 ಸಾಧನೆಯಾಗಿರುತ್ತದೆ.

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ

1.ಮೆಟ್ರಿಕ್ ಪೂರ್ವ/ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳ ನಿರ್ವಹಣೆ:

ಕೊಡಗು ಜಿಲ್ಲೆಯಲ್ಲಿ ಈ ಕೆಳಕಂಡಂತೆ ಒಟ್ಟು 19 ಮೆಟ್ರಿಕ್ ಪೂರ್ವ ಬಾಲಕ/ಬಾಲಕಿಯರ ವಿದ್ಯಾರ್ಥಿ ನಿಲಯಗಳು ಕಾರ್ಯಾಚರಣೆಯಲ್ಲಿರುತ್ತದೆ. ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಗಳ ವಿದ್ಯಾರ್ಥಿಗಳಿಗೆ ಮಾಸಿಕ ರೂ.1,500/–ರ ದರದ ವೆಚ್ಚದಲ್ಲಿ ಉಚಿತ ಊಟ ನೀಡುವುದರೊಂದಿಗೆ, ವಸತಿ ಸೌಕರ್ಯದ ಜೊತೆಯಲ್ಲಿ ಉಚಿತ ಸಮವಸ್ತ್ರ, ಪಠ್ಯಪುಸ್ತಕ, ನೋಟ್ ಪುಸ್ತಕ, ವೈದ್ಯಕೀಯ ಸೌಲಭ್ಯ, ಹಾಸಿಗೆ ಹೊದಿಕೆಗಳು, ಕ್ರೀಡಾ ಸಾಮಾಗ್ರಿಗಳು ಹಾಗೂ ಇನ್ನಿತರ ಮೂಲಭೂತ ಸೌಲಭ್ಯಗಳನ್ನು ಇಲಾಖಾ ವತಿಯಿಂದ ನೀಡಲಾಗುತ್ತಿದೆ. ಜಿಲ್ಲೆಯಲ್ಲಿರುವ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಗಳು ಈ ಕೆಳಕಂಡಂತಿದೆ.

1) ಮೂರ್ನಾಡು, 2) ಸಂಪಾಜೆ, 3)ಪಾರಾಣೆ, 4) ಮರಗೋಡು (ಬಾಲಕಿಯರು), 5) ಮಡಿಕೇರಿಟೌನ್ (ಬಾಲಕಿಯರು), 6)ಸುಂಟಿಕೊಪ್ಪ, 7)ಕುಶಾಲನಗರ, 8)ಶಿರಂಗಾಲ, 9)ಆಲೂರುಸಿದ್ಧಾಪುರ, 10)ಆಲೂರು ಸಿದ್ಧಾಪುರ (ಬಾಲಕಿಯರು),11.ಸೋಮವಾರಪೇಟೆ, 12)ಶನಿವಾರಸಂತೆ, 13)ಕೊಡ್ಲಿಪೇಟೆ, 14)ಚೆಟ್ಟಳ್ಳಿ, 15)ಪೊನ್ನಂಪೇಟೆ, 16.ಪೊನ್ನಂಪೇಟೆ (ಬಾಲಕಿಯರು), 17) ಹುದಿಕೇರಿ (ಬಾಲಕಿಯರು), 18)ಶ್ರೀಮಂಗಲ,19)ಬಿರುನಾಣಿ.

ಕೊಡಗು ಜಿಲ್ಲೆಯಲ್ಲಿ ಒಟ್ಟು 19 ಮೆಟ್ರಿಕ್‌ನಂತರದ ಬಾಲಕ/ಬಾಲಕಿಯರ ವಿದ್ಯಾರ್ಥಿ ನಿಲಯಗಳು ಕಾರ್ಯಾಚರಣೆಯಲ್ಲಿರುತ್ತದೆ. ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳ ವಿದ್ಯಾರ್ಥಿಗಳಿಗೆ ಮಾಸಿಕ ರೂ.1,600/–ರಂತೆ ಉಚಿತ ಊಟ ಮತ್ತು ವಸತಿ ಸೌಲಭ್ಯಗಳನ್ನು ಇಲಾಖಾ ವತಿಯಿಂದ ನೀಡಲಾಗುತ್ತಿದೆ.

1)ಮಡಿಕೇರಿಟೌನ್ (ಗದ್ದುಗೆ ಪಕ್ಕ),2) ಮಡಿಕೇರಿಟೌನ್ (ಎಫ್.ಎಂ.ಸಿ.ಕಾಲೇಜು ಹಿಂಭಾಗ), 3)ಮಡಿಕೇರಿಟೌನ್ (ಬಾಲಕಿಯರು), 4)ಮಡಿಕೇರಿ ಟೌನ್–2(ಬಾಲಕಿಯರು), 5)ಭಾಗಮಂಡಲ, 6)ಸೋಮವಾರಪೇಟೆ (ಬಾಲಕಿಯರು), 7)ಕುಶಾಲನಗರ ಬೈಚನಹಳ್ಳಿ 8)ಆಲೂರು ಸಿದ್ಧಾಪುರ, ಬಾಲಕರು, 9)ಆಲೂರು ಸಿದ್ಧಾಪುರ (ಬಾಲಕಿಯರು), 10)ಮಾದರಿ ಸಾರ್ವಜನಿಕ ಮೆಟ್ರಿಕ್ ನಂತರದ ಬಾಲಕಿಯರು, ಕುಶಾಲನಗರ, 11)ಮಾದರಿ ಮೆಟ್ರಿಕ್ ನಂತರದ ಮಹಿಳಾ ಕುಶಾಲನಗರ (ಹೊಸದು), 12)ವೃತ್ತಿಪರ ಮೆಟ್ರಿಕ್ ನಂತರದ ಬಾಲಕರು, ಕುಶಾಲನಗರ, 13)ಇಂಜಿನಿಯರ್ ಕುಶಾಲನಗರ (ಪುರುಷರು), 14)ಇಂಜಿನಿಯರ್ ಕುಶಾಲನಗರ (ಮಹಿಳೆಯರು), 15) ಮೆಟ್ರಿಕ್ ನಂತರದ ಮಹಿಳಾ ಕುಶಾಲನಗರ (ನರ್ಸಿಂಗ್ ಪರಿವರ್ತಿತ), 15)ವಿರಾಜಪೇಟೆ–1, 16)ವೀರಾಜಪೇಟೆ–2(ಬಾಲಕಿಯರು), 17)ಗೋಣಿಕೊಪ್ಪಲು, 18)ವೃತ್ತಿಪರ ಮೆಟ್ರಿಕ್ ನಂತರದ ಪೊನ್ನಂಪೇಟೆ (ಬಾಲಕಿಯರು)

2019–20ನೇ ಸಾಲಿನಲ್ಲಿ ಈ ಕಾರ್ಯಕ್ರಮದಡಿ ಒಟ್ಟು ರೂ.809.50 ಲಕ್ಷಗಳ ಅನುದಾನ ಒದಗಿಸಲಾಗಿದ್ದು, 2020ನೇ ಮಾರ್ಚ್ ಅಂತ್ಯದವರೆಗೆ ರೂ.761.59 ಲಕ್ಷಗಳು ಖರ್ಚಾಗಿದ್ದು1721 ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ.

2.ಹೊಲಿಗೆ ತರಬೇತಿ ಕೇಂದ್ರಗಳ ಪ್ರಾರಂಭ ಮತ್ತು ನಿರ್ವಹಣೆ:

ಕೊಡಗುಜಿಲ್ಲೆ, ಮಡಿಕೇರಿ ತಾಲ್ಲೂಕಿನ ಮೂರ್ನಾಡು ಮತ್ತು ಮಕ್ಕಂದೂರಿನಲ್ಲಿ 2 ಮಹಿಳಾ ಹೊಲಿಗೆ ತರಬೇತಿ ಕೇಂದ್ರಗಳಿದ್ದು, ಪ್ರತೀ ಕೇಂದ್ರಗಳಲ್ಲಿ ತಲಾ 20 ಮಹಿಳಾ ಅಭ್ಯರ್ಥಿಗಳಿಗೆ ಹೊಲಿಗೆ ತರಬೇತಿಯನ್ನು ನೀಡಲಾಗುತ್ತಿದೆ. ವರ್ಷದ ಕೊನೆಯಲ್ಲಿ ವಾರ್ಷಿಕ ಪರೀಕ್ಷೆಯನ್ನು ನಡೆಸಿ ಉತ್ತೀರ್ಣರಾದವರಿಗೆ ಉಚಿತವಾಗಿ ಹೊಲಿಗೆ ಯಂತ್ರ ಹಾಗೂ ಅರ್ಹತಾ ಪ್ರಮಾಣ ಪತ್ರವನ್ನು ನೀಡಲಾಗುತ್ತಿದೆ. ತರಬೇತಿ ಅವಧಿಯಲ್ಲಿ ಅಭ್ಯರ್ಥಿಗಳಿಗೆ ಮಾಸಿಕ ರೂ.300/–ರಂತೆ ಶಿಷ್ಯವೇತನ ನೀಡಲಾಗುತ್ತಿದೆ. ಈ ಹೊಲಿಗೆ ತರಬೇತಿ ಕೇಂದ್ರಗಳಿಗೆ ಪ್ರವೇಶ ಪಡೆಯಲು ಅಭ್ಯರ್ಥಿಗಳು ಕನಿಷ್ಠ 7ನೇ ತರಗತಿಯಲ್ಲಿ ಉತ್ತೀರ್ಣರಾಗಿರಬೇಕು. 2019–20ನೇ ಸಾಲಿನಲ್ಲಿ ಒಟ್ಟು ರೂ.11.34 ಲಕ್ಷಗಳನ್ನು ಆಯವ್ಯಯದಲ್ಲಿ ಒದಗಿಸಲಾಗಿದ್ದು, 2020ನೇ ಮಾರ್ಚ್ ಅಂತ್ಯದವರೆಗೆ ಒಟ್ಟು ರೂ.6.87 ಲಕ್ಷಗಳ ಖರ್ಚಾಗಿರುತ್ತದೆ. ಎರಡು ಕೇಂದ್ರದ ಅಭ್ಯರ್ಥಿಗಳು ಈ ಪ್ರಯೋಜನವನ್ನು ಪಡೆದಿರುತ್ತಾರೆ.

3.ಕಾನೂನು ಪದವೀಧರರಿಗೆ ಶಿಷ್ಯವೇತನ:

ಕಾನೂನು ಪದವಿಯನ್ನು ಪಡೆದಿರುವ ಹಿಂದುಳಿದ ವರ್ಗಗಳ ಕಾನೂನು ಪದವೀಧರರಿಗೆ ನ್ಯಾಯಾಂಗ ಆಡಳಿತದಲ್ಲಿ ತರಬೇತಿಗಾಗಿಆಯ್ಕೆ ಮಾಡಿ ಒಟ್ಟು 4 ವರ್ಷಗಳವರೆಗೆ ತರಬೇತಿಯನ್ನು ನೀಡಲಾಗುತ್ತಿದ್ದು, ಮಾಹೆಯಾನ ರೂ.4,000/–ರಂತೆ ಶಿಷ್ಯವೇತನ ನೀಡಲಾಗುತ್ತದೆ. 2019–20ನೇ ಸಾಲಿನಲ್ಲಿ ಒಟ್ಟು ರೂ.19.20 ಲಕ್ಷಗಳನ್ನು ಆಯವ್ಯಯದಲ್ಲಿ ಒದಗಿಸಲಾಗಿದ್ದು, 2019ರ ಮಾರ್ಚ್ ಅಂತ್ಯದವರೆಗೆ ರೂ.7.76 ಲಕ್ಷಗಳು ಖರ್ಚಾಗಿದ್ದು, ಒಟ್ಟು 22 ಕಾನೂನು ಪದವೀಧರರಿಗೆ ಶಿಷ್ಯವೇತನ ನೀಡಲಾಗಿದೆ.

4.ಇಲಾಖಾ ಸ್ವಂತ ಕಟ್ಟಡಗಳ ನಿರ್ವಹಣೆ ಹಾಗೂ ದುರಸ್ಥಿ:

ಇಲಾಖಾ ವತಿಯಿಂದ ನಡೆಸಲ್ಪಡುತ್ತಿರುವ ವಿದ್ಯಾರ್ಥಿನಿಲಯಗಳ ಸ್ವಂತ ಕಟ್ಟಡಗಳಿಗೆ ಪೇಯಿಂಟಿಂಗ್, ವಿದ್ಯುತ್ ವಯರಿಂಗ್, ನೀರಿನ ವ್ಯವಸ್ಥೆ, ಹೆಚ್ಚುವರಿ ಕೊಠಡಿ ನಿರ್ಮಾಣ, ಆವರಣಗೋಡೆ ನಿರ್ಮಾಣ ಇತ್ಯಾದಿ ಕಾಮಗಾರಿಗಳನ್ನು ನಿರ್ವಹಿಸಲಾಗುತ್ತಿದೆ. 2019–20ನೇ ಸಾಲಿನಲ್ಲಿ ಜಿಲ್ಲಾವಲಯ ಯೋಜನೇತರ ಕಾರ್ಯಕ್ರಮದಡಿ ಒಟ್ಟು ರೂ.37.23 ಲಕ್ಷಗಳನ್ನು ಒದಗಿಸಲಾಗಿದ್ದು, 2020ನೇ ಮಾರ್ಚ್ ಅಂತ್ಯದವರೆಗೆ ಒಟ್ಟು 8 ಕಾಮಗಾರಿಗಳಿಗಾಗಿ ರೂ.37.23 ಲಕ್ಷಗಳು ಖರ್ಚು ಮಾಡಲಾಗಿರುತ್ತದೆ.

5.ವಿದ್ಯಾರ್ಥಿ ನಿಲಯಗಳ ಸುಧಾರಣೆ:

ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳಿಗೆ ಮೂಲಭೂತ ಸೌಕರ್ಯಗಳಾದ ಹಾಸಿಗೆ ಹೊದಿಕೆಗಳು, ಕ್ರೀಡಾ ಸಾಮಾಗ್ರಿಗಳು, ಕಬ್ಬಿಣದ ಮಂಚ, ಕಂಪ್ಯೂಟರ್, ಪಾತ್ರೆ ಇತ್ಯಾದಿ ಮೂಲಭೂತ ಸೌಕರ್ಯಗಳನ್ನು ಇಲಾಖಾ ವತಿಯಿಂದ ಒದಗಿಸಲಾಗುತ್ತಿದ್ದು, 2019–20ನೇ ಸಾಲಿನಲ್ಲಿ ಈ ಕಾರ್ಯಕ್ರಮದಡಿ ರೂ.30.00 ಲಕ್ಷಗಳನ್ನು ಅಯವ್ಯಯದಲ್ಲಿ ಒದಗಿಸಲಾಗಿದ್ದು, 2020ನೇ ಮಾರ್ಚ್ ಅಂತ್ಯದವರೆಗೆ ಒಟ್ಟು 38 ವಿದ್ಯಾರ್ಥಿನಿಲಯಗಳಿಗೆ ಅವಶ್ಯಕ ಮೂಲಭೂತ ಸೌಲಭ್ಯಗಳಿಗಾಗಿ ರೂ.29.70 ಲಕ್ಷಗಳನ್ನು ಖರ್ಚು ಮಾಡಲಾಗಿದೆ.

6.ಶುಲ್ಕ ವಿನಾಯಿತಿ ನೀಡಿಕೆ:

ಸರ್ಕಾರದಿಂದ ಮಾನ್ಯತೆ ಪಡೆದುಅನುದಾನ ಸಹಿತ ಹಾಗೂ ಅನುದಾನ ರಹಿತ ಶಿಕ್ಷಣ ಸಂಸ್ಥೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಸರ್ಕಾರ ನಿಗಧಿಪಡಿಸಿದ ದರದಂತೆ ಬೋಧನಾ ಶುಲ್ಕ, ಪ್ರವೇಶ ಶುಲ್ಕ ಹಾಗೂ ಇನ್ನಿತರ ಶುಲ್ಕವನ್ನು ಇಲಾಖಾ ವತಿಯಿಂದ ಮರು ಪಾವತಿಸಲಾಗುತ್ತಿದೆ. 2019–20 ನೇ ಸಾಲಿನಲ್ಲಿ ಈ ಕಾರ್ಯಕ್ರಮದಡಿ ಒಟ್ಟು ರೂ.270.88 ಲಕ್ಷಗಳನ್ನು ಒದಗಿಸಲಾಗಿದ್ದು, ಮಾರ್ಚ್–2020ನೇ ಅಂತ್ಯದವರೆಗೆ ಒಟ್ಟು ರೂ.270.71 ಲಕ್ಷಗಳನ್ನು ಖರ್ಚು ಮಾಡಲಾಗಿದ್ದು ಒಟ್ಟು 2800 ವಿದ್ಯಾರ್ಥಿಗಳಿಗೆ ಡಿಬಿಟಿ ಆನ್‌ಲೈನ್ ಮೂಲಕ ಖರ್ಚು ಮಾಡಲಾಗಿರುತ್ತದೆ.

7.ದೇವರಾಜ ಅರಸು ಹುಟ್ಟು ಹಬ್ಬ ದಿನಾಚರಣೆ:

ಇಲಾಖಾ ವತಿಯಿಂದ ದೇವರಾಜ ಅರಸು ಹುಟ್ಟು ಹಬ್ಬ ದಿನಾಚರಣೆ ಕಾರ್ಯಕ್ರಮವನ್ನು 2019ನೇ ಆಗಸ್ಟ್ 20ನೇ ದಿನಾಂಕದಂದು ಯಶಸ್ವಿಯಾಗಿ ಆಚರಿಸಲಾಗಿರುತ್ತದೆ. ಈ ಕಾರ್ಯಕ್ರಮಕ್ಕಾಗಿ ಉಪನ್ಯಾಸ/ಊಟೋಪಚಾರ ಇನ್ನಿತರೆ ವೆಚ್ಚಕ್ಕಾಗಿ ರೂ.1.00 ಲಕ್ಷಗಳನ್ನು ಒದಗಿಸಲಾಗಿದ್ದು ರೂ.1.00 ಲಕ್ಷಗಳನ್ನು ಖರ್ಚು ಮಾಡಲಾಗಿರುತ್ತದೆ.

8.ಮೆಟ್ರಿಕ್ ಪೂರ್ವ/ನಂತರದ ವಿದ್ಯಾರ್ಥಿವೇತನ:

ವಿವಿಧ ಶಾಲಾ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ 1ನೇ ತರಗತಿಯಿಂದ 10ನೇ ತರಗತಿವರೆಗೆ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ವೇತನವನ್ನು ಹಾಗೂ ಪ್ರಥಮ ಪಿ.ಯು.ಸಿಯಿಂದ ಸ್ನಾತಕೋತ್ತರ ತರಗತಿ ಹಾಗೂ ತಾಂತ್ರಿಕ ಕೋರ್ಸುಗಳಲ್ಲಿ ವ್ಯಾಸಂಗ ಮಾಡುತ್ತಿರುವ

ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನವನ್ನು ಇಲಾಖಾ ವತಿಯಿಂದ ಮಂಜೂರು ಮಾಡಲಾಗುತ್ತಿದೆ.

ತರಗತಿ	ಬಾಲಕ/ಬಾಲಕಿ	Adhoc Grant	ಒಟ್ಟು
1 ರಿಂದ 5	250/-	500/-	750/-
6 ರಿಂದ 8	400/-	500/-	900/-
9 ರಿಂದ 10	500/-	500/-	1000/-

2019–20ನೇ ಸಾಲಿನಲ್ಲಿ ಮೇಲ್ಕಂಡ ಕಾರ್ಯಕ್ರಮದಡಿ ಒಟ್ಟು ರೂ.113.58 ಲಕ್ಷಗಳನ್ನು ಒದಗಿಸಲಾಗಿದ್ದು, ರೂ.68.60 ಲಕ್ಷಗಳನ್ನು ಒಟ್ಟು 6149 ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನಕ್ಕಾಗಿ ಖರ್ಚು ಮಾಡಲಾಗಿದೆ. ಮೆಟ್ರಿಕ್ ಪೂರ್ವ/ನಂತರದ ವಿದ್ಯಾರ್ಥಿ ವೇತನವನ್ನು ಡಿಬಿಟಿ ಮೂಲಕ ಆನ್ ಲೈನ್ ಮೂಲಕ ಮಂಜೂರು ಮಾಡಲಾಗಿರುತ್ತದೆ.

9.ಕಾರ್ಯನಿರ್ವಾಹಕ ಸಿಬ್ಬಂದಿ:

ಜಿಲ್ಲಾ ಕಛೇರಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಜಿಲ್ಲಾ ಅಧಿಕಾರಿ ಹಾಗೂ ಸಿಬ್ಬಂದಿ ವರ್ಗದವರ ವೇತನ ಪಾವತಿ, ಪ್ರಯಾಣಭತ್ಯೆ ಇಲಾಖಾ ವಾಹನ ದುರಸ್ಥಿ, ಇಂಧನ ಖರೀದಿ, ಕಛೇರಿ ನಿರ್ವಹಣೆ, ಸಾದಿಲ್ವಾರು ವೆಚ್ಚ, ದೂರವಾಣಿ ವೆಚ್ಚ ವಿದ್ಯುತ್ ಪಾವತಿ ಇತ್ಯಾದಿ ಕಾರ್ಯಕ್ರಮಗಳಿಗಾಗಿ ಒಟ್ಟು ರೂ.31.00 ಲಕ್ಷಗಳನ್ನು ಆಯವ್ಯಯದಲ್ಲಿ ಒದಗಿಸಲಾಗಿದ್ದು 2020ನೇ ಮಾರ್ಚ್ ಅಂತ್ಯದವರೆಗೆ ಒಟ್ಟು ರೂ.31.00 ಲಕ್ಷಗಳನ್ನು ಈ ಕಾರ್ಯಕ್ರಮದಡಿ ಖರ್ಚು ಮಾಡಲಾಗಿದೆ.

10.ಹಿಂದುಳಿದ ವರ್ಗಗಳ ತಾಲ್ಲೂಕು ವಿಸ್ತರಣಾ ಕಛೇರಿಗಳು:

ಕೊಡಗು ಜಿಲ್ಲೆಯಲ್ಲಿ ಒಟ್ಟು 3 ತಾಲ್ಲೂಕು ಹಿಂದುಳಿದ ವರ್ಗಗಳ ವಿಸ್ತರಣಾಧಿಕಾರಿಗಳ ವೇತನ ಹಾಗೂ ಕಛೇರಿ ನಿರ್ವಹಣೆಗಾಗಿ ಒಟ್ಟು ರೂ.13.00 ಲಕ್ಷಗಳನ್ನು ಆಯವ್ಯಯದಲ್ಲಿ ಒದಗಿಸಲಾಗಿದ್ದು, ಮಾರ್ಚ್ ಅಂತ್ಯದವರೆಗೆ ಒಟ್ಟು ರೂ.12.89 ಲಕ್ಷಗನ್ನು ಒಂದು 1 ಹಿಂದುಳಿದ ವರ್ಗಗಳ ವಿಸ್ತರಣಾಧಿಕಾರಿಯವರ ವೇತನ ಹಾಗೂ 3 ಕಛೇರಿ ನಿರ್ವಹಣೆಗಾಗಿ ಖರ್ಚು ಮಾಡಲಾಗಿದೆ.

11.ವಿದ್ಯಾರ್ಥಿನಿಲಯಗಳಲ್ಲಿರುವ ವಿದ್ಯಾರ್ಥಿಗಳಿಗೆ ಪ್ರೋತ್ಸಾಹಕ ಮಂಜೂರಾತಿ:

ವಿದ್ಯಾರ್ಥಿ ನಿಲಯಗಳಲ್ಲಿದ್ದು ವಾರ್ಷಿಕ ಪಬ್ಲಿಕ್ ಪರೀಕ್ಷೆಗಳಲ್ಲಿ ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾದವರಿಗೆ ಪ್ರೋತ್ಸಾಹಧನವನ್ನು ಮಂಜೂರು ಮಾಡಲಾಗುತ್ತಿದ್ದು 2020ನೇ ಮಾರ್ಚ್ ಅಂತ್ಯದವರೆಗ ಒಟ್ಟು ರೂ.12.85 ಲಕ್ಷಗಳನ್ನು ಆಯವ್ಯಯದಲ್ಲಿ ಒದಗಿಸಲಾಗಿದ್ದು 2020ನೇ ಮಾರ್ಚ್ ಅಂತ್ಯದವರೆಗೆ ಒಟ್ಟು ರೂ.7.62 ಲಕ್ಷಗಳನ್ನು 425 ವಿದ್ಯಾರ್ಥಿಗಳಿಗೆ ಪ್ರೋತ್ಸಾಹಧನವನ್ನು ಮಂಜೂರು ಮಾಡಲಾಗಿದೆ.

ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ

1. ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳ ನಿರ್ವಹಣೆ:

ಕೊಡಗು ಜಿಲ್ಲೆ, ಮಡಿಕೇರಿ ಟೌನ್‌ನಲ್ಲಿ 50 ಸಂಖ್ಯಾ ಬಲದ ಮೆಟ್ರಿಕ್ ನಂತರದ ಬಾಲಕಿಯರ ವಿದ್ಯಾರ್ಥಿ ನಿಲಯ ಹಾಗೂ ಕುಶಾಲನಗರದಲ್ಲಿ 75 ಸಂಖ್ಯಾ ಬಲದ ಮೆಟ್ರಿಕ್ ನಂತರದ ಬಾಲಕರ ವಿದ್ಯಾರ್ಥಿ ನಿಲಯಗಳು ಕಾರ್ಯಾಚರಣೆಯಲ್ಲಿರುತ್ತದೆ.ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳ ವಿದ್ಯಾರ್ಥಿಗಳಿಗೆ ಮಾಸಿಕ ರೂ.1,600/–ರಂತೆ ಉಚಿತ ಊಟ ಮತ್ತು ವಸತಿ ಸೌಲಭ್ಯಗಳನ್ನು ಇಲಾಖಾ ವತಿಯಿಂದ ನೀಡಲಾಗುತ್ತಿದೆ. 2019–20ನೇ ಸಾಲಿನಲ್ಲಿ ಈ ಕಾರ್ಯ ಕ್ರಮದಡಿ ಒಟ್ಟು ರೂ.48.65 ಲಕ್ಷಗಳ ಅನುದಾನ ಒದಗಿಸಲಾಗಿದ್ದು, ಮಾರ್ಚ್ ಅಂತ್ಯದವರೆಗೆ ರೂ. 45.70 ಲಕ್ಷಗಳು ಖರ್ಚಾಗಿದ್ದು, ಒಟ್ಟು 125 ವಿದ್ಯಾರ್ಥಿಗಳು ಪ್ರಯೋಜನ ಪಡೆದಿರುತ್ತಾರೆ.

2. ಕಾನೂನು ಪದವೀಧರರಿಗೆ ಶಿಷ್ಯವೇತನ:

ಕಾನೂನು ಪದವಿಯನ್ನು ಪಡೆದಿರುವ ಅಲ್ಪಸಂಖ್ಯಾತರ ಕಾನೂನು ಪದವೀಧರರಿಗೆ ನ್ಯಾಯಾಂಗ ಆಡಳಿತ ತರಬೇತಿಗಾಗಿ ಆಯ್ಕೆ ಮಾಡಿ ಒಟ್ಟು 4 ವರ್ಷಗಳ ತರಬೇತಿಯನ್ನು ನೀಡಲಾಗುತ್ತಿದ್ದು, ಮಾಹೆಯಾನ ರೂ.5000 ರಂತೆ ಶಿಷ್ಯವೇತನ ನೀಡಲಾಗುತ್ತಿದೆ. 2019–20ನೇ ಸಾಲಿನಲ್ಲಿ ಒಟ್ಟು 4.80ಲಕ್ಷಗಳನ್ನು ಆಯವ್ಯಯದಲ್ಲಿ ಒದಗಿಸಲಾಗಿದ್ದು,2020 ನೇ ಮಾರ್ಚ್ ಅಂತ್ಯದವರೆಗೆ ರೂ2.75 ಲಕ್ಷಗಳು ಖರ್ಚಾಗಿದ್ದು, ಒಟ್ಟು 7 ಕಾನೂನು ಪಧವೀದರರಿಗೆ ಶಿಷ್ಯವೇತನ ನೀಡಲಾಗಿದೆ.

3. ಕಾರ್ಯ ನಿರ್ವಾಹಕ ಸಿಬ್ಬಂದಿ:

ಜಿಲ್ಲಾ ಕಛೇರಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಜಿಲ್ಲಾ ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರ ವೇತನ ಪಾವತಿ, ಪ್ರಯಾಣ ಭತ್ಯೆ, ಇಲಾಖಾ ವಾಹನ ದುರಸ್ಥಿ, ಇಂಧನ ಖರೀದಿ, ಕಛೇರಿ ನಿರ್ವಹಣೆ, ಸಾದಿಲ್ವಾರು ವೆಚ್ಚ, ದೂರವಾಣಿ ವೆಚ್ಚ, ವಿದ್ಯುತ್ ಬಿಲ್ಲು ಪಾವತಿ ಇತ್ಯಾದಿ ಕಾರ್ಯಕ್ರಮಗಳಿಗಾಗಿ ಒಟ್ಟು ರೂ.19.92 ಲಕ್ಷಗಳನ್ನು ಆಯವ್ಯಯದಲ್ಲಿ ಒದಗಿಸಲಾಗಿದ್ದು 2020ನೇ ಮಾರ್ಚ್ ಅಂತ್ಯದವರೆಗೆ ಒಟ್ಟು ರೂ17.75 ಲಕ್ಷಗಳನ್ನು ಈ ಕಾರ್ಯಕ್ರಮದಡಿ ಖರ್ಚು ಮಾಡಲಾಗಿದೆ.

ಕೈಗಾರಿಕಾ ಇಲಾಖೆ

ದೇಶದಆರ್ಥಿಕ ಪ್ರಗತಿಗೆ ಕೈಗಾರಿಕಾ ರಂಗದ ಪಾತ್ರ ಇಂದಿನ ದಿನ ಬಹಳ ಮಹತ್ವ ಪಡೆದುಕೊಂಡಿರುತ್ತದೆ. ಅದರಲ್ಲೂ ಹಚ್ಚಿನ ಜನಸಂಖ್ಯೆಯುಳ್ಳ ನಮ್ಮ ದೇಶದಲ್ಲಿ ಆರ್ಥಿಕವಾಗಿ ಅಭಿವೃದ್ಧಿ ಹೊಂದಲು ವ್ಯವಸಾಯ ಕ್ಷೇತ್ರದಷ್ಟೇ ಮುಖ್ಯ ಕೈಗಾರಿಕಾಕ್ಷೇತ್ರವು ಆಗಿರುತ್ತದೆ. ನಮ್ಮ ಮೂಲಭೂತ ಸಮಸ್ಯೆಗಳಲ್ಲಿ ನಿರುದ್ಯೋಗ ಸಮಸ್ಯೆ ಸಹ ಒಂದು. ಹೊಸ ಹೊಸ ವಿಜ್ಞಾನ ಮತ್ತು ತಂತ್ರಜ್ಞಾನ ಅವಿಷ್ಕಾರ ಗೊಂಡಿರುವ ಇಂದಿನ ದಿನಗಳಲ್ಲಿ ವರ್ಷಪೂರ್ತಿ ವ್ಯವಸಾಯವನ್ನೇ ಮುಖ್ಯ ಕಸುಬನ್ನಾಗಿ ಅವಲಂಬಿಸಿಕೊಳ್ಳುವುದು ಅಸಾಧ್ಯವಾಗಿದೆ. ಜೊತೆಗೆ ಹೆಚ್ಚುತ್ತಿರುವ ಜನಸಂಖ್ಯೆಗೆ ಅನುಗುಣವಾಗಿ ಅದರಲ್ಲೂ ಯುವಜನರಿಗೆ ಉದ್ಯೋಗ ಅವಕಾಶ ಒದಗಿಸುವುದರ ಜೊತೆಗೆ ದೇಶದ ಆರ್ಥಿಕ ಪ್ರಗತಿಯಲ್ಲಿ ಸಹಭಾಗಿಗಳಾಗಲು ಕೈಗಾರಿಕೆಗಳು ಮುಖ್ಯ ಪಾತ್ರವಹಿಸುತ್ತದೆ.

ಈ ದೃಷ್ಟಿಯಿಂದ ನಮ್ಮ ಇಲಾಖೆಯಲ್ಲಿ ಜಿಲ್ಲಾ ಕೈಗಾರಿಕಾ ಕೇಂದ್ರಗಳು 1982ರಿಂದ ಅಸ್ತಿತ್ವಕ್ಕೆ ಬಂದವು. ಜಿಲ್ಲಾ ಕೈಗಾರಿಕಾ ಕೇಂದ್ರಗಳ ಮುಖ್ಯ ಉದ್ದೇಶ "ಭಾವಿ ಉದ್ಯಮಶೀಲರನ್ನು ಗುರುತಿಸಿ, ಅದರಲ್ಲಿ ಉದ್ಯಮಶೀಲತೆಯನ್ನು ಅಭಿವೃದ್ಧಿ ಪಡಿಸುವುದು ಮತ್ತು ತ್ರಾಂತ್ರಿಕ ಮಾಹಿತಿಗಳನ್ನು ನೀಡುವುದು ಹಾಗೂ ಕೈಗಾರಿಕೆಗಳನ್ನು ಆಯ್ಕೆ ಮಾಡುವಲ್ಲಿ ಸಹಕರಿಸುವುದು", ಕೈಗಾರಿಕೆಗಳಿಗೆ ಅವಶ್ಯವಿರುವ ಮೂಲಭೂತ ಸೌಕಾರ್ಯಗಳಾದ ಕೈಗಾರಿಕಾ ನಿವೇಶನ, ಕೈಗಾರಿಕಾ ಮಳಿಗೆಗಳು, ವಿದ್ಯುತ್‌ಚ್ಛಕ್ತಿ ಮಂಜೂರಾತಿ ಜೊತೆಗೆ ಸಾಲ ಸೌಲಭ್ಯ ಒದಗಿಸುವುದು ಮತ್ತು ಇತರೆ ಕಾರ್ಯಗಳನ್ನೂ ನಿರ್ವಹಿಸುವುದಾಗಿದೆ.

ನಮ್ಮ ರಾಜ್ಯದಲ್ಲಿ ಗ್ರಾಮಾಂತರ ಪ್ರದೇಶಗಳ ಸರ್ವಾಂಗೀಣ ಅಭಿವೃದ್ಧಿಯನ್ನು ಪ್ರಜೆಗಳೇ ಯೋಜನೆಗಳನ್ನು ಸಿದ್ಧಪಡಿಸಿ ಅನುಷ್ಠಾನಗೊಳಿಸುವ ದೃಷ್ಟಿಯಿಂದ 1987–88 ರಿಂದ ಜಿಲ್ಲಾ ಪರಿಷತ್ ಹಾಗೂ ಮಂಡಲ ಪಂಚಾಯತ್ತುಗಳು ಅಸ್ತಿತ್ವಕ್ಕೆ ಬಂದವು. ಈಗ ಕೈಗಾರಿಕೆಗಳು ಮತ್ತು ಕುಶಲಕರ್ಮಿಗಳ ಪಾತ್ರ ಅತೀ ಹೆಚ್ಚಿನದ್ದಾಗಿದ್ದು, ಆದರಿಂದ ನಮ್ಮ ಇಲಾಖೆಯ ಒಂದು ಭಾಗವಾದ "ಖಾದಿ ಮತ್ತು ಗ್ರಾಮೋದ್ಯೋಗ" ವಿಭಾಗವು ಜಿಲ್ಲಾ ಪಂಚಾಯತ್ ವ್ಯಾಪ್ತಿಯಲ್ಲಿ ಒಳಪಟ್ಟು ಈ ಕೆಲಸವನ್ನು ನಿರ್ವಹಿಸುತ್ತದೆ. ಈ ವ್ಯವಸ್ಥೆಯ ಮುಖ್ಯ ಉದ್ದೇಶ "ಗ್ರಾಮೀಣ ಪ್ರದೇಶದಲ್ಲಿರುವ ಯುವಜನರಿಗೆ ವಿವಿಧ ಕೈಗಾರಿಕಾ ಕಸುಬನ್ನು ಮುಂದುವರೆಸಿಕೊಂಡು ಹೋಗಲು ಎಲ್ಲಾ ರೀತಿಯ ಸೌಲಭ್ಯಗಳನ್ನು ನೀಡಿ ಸ್ವಯಂ ಉದ್ಯೋಗಿಗಳನ್ನಾಗಿ ಮಾಡುವುದು". ಗ್ರಾಮಾಂತರ ಪ್ರದೇಶದಲ್ಲಿರುವ ಕುಶಕರ್ಮಿಗಳನ್ನು ಗುರುತಿಸಿ ಅವರಿಗೆ ಬೇಕಾಗುವ ಸವಲತ್ತನ್ನು ಒದಗಿಸುವುದು.

2019–20 ನೇ ಸಾಲಿನಲ್ಲಿಜಿಲ್ಲಾ ಪಂಚಾಯತ್‌ನ ಕೈಗಾರಿಕಾ ವಿಭಾಗದಿಂದ ಜಿಲ್ಲಾ ವಲಯದಡಿ ಈ ಕೆಳಕಂಡ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗಿದ್ದು ವಿವರ ಈ ಕೆಳಕಂಡಂತಿದೆ.

1. ಜಿಲ್ಲಾ ಉದ್ಯಮ ಕೇಂದ್ರ ಯೋಜನೆ.
2. ವೃತ್ತಿ ನಿರತ ಕುಶಲಕರ್ಮಿಗಳಿಗೆ ಉಚಿತ ಸುಧಾರಿತವಿದ್ಯುತ್‌ಚಾಲಿತ ಸಲಕರಣೆಗಳ ವಿತರಣೆಯೋಜನೆ.
3. ವಿಚಾರಗೋಷ್ಠಿಗಳು, ಕ್ಷೇತ್ರೋತ್ಸವಗಳು ಮತ್ತು ವಸ್ತು ಪ್ರದರ್ಶನಗಳು ಯೋಜನೆ.

1. ಜಿಲ್ಲಾಉದ್ಯಮಕೇಂದ್ರ ಲೆಕ್ಕ ಶೀರ್ಷಿಕೆ : 2851–00–107–0–27:–

ಈ ಯೋಜನೆಯಡಿ 2019–20ನೇ ಸಾಲಿನಲ್ಲಿ ರೂ 6.00 ಲಕ್ಷಅನುದಾನ ಹಂಚಿಕೆಯಿದ್ದು, ರೂ. 6.00 ಲಕ್ಷ ಬಿಡುಗಡೆಯಾಗಿರುತ್ತದೆ. ಇದರಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಉಪಶೀರ್ಷಿಕೆ 422 ಮತ್ತು 423 ಗಳಡಿ ತಲಾ 1.50 ಲಕ್ಷಗಳನ್ನು ವಿಂಗಡಿಸಿದೆ.

ಇದರಲ್ಲಿ ಗ್ರಾಮೀಣ ಪ್ರದೇಶದ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡಗಳ ತರಬೇತಿ ಪಡೆದ/ ವೃತ್ತಿಪರ ಅಭ್ಯರ್ಥಿಗಳಿಗೆ ಒಟ್ಟು 36 ಫ್ಯಾಷನ್ ಮೇಕರ್ ಹೊಲಿಗೆ ಯಂತ್ರಗಳನ್ನು ರೂ.3.00 ಲಕ್ಷ ವೆಚ್ಚದಲ್ಲಿ ಖರೀದಿಸಲಾಗಿದೆ. ಹಾಗೂ ಸಾಮಾನ್ಯ ಹಿಂದುಳಿದ ವರ್ಗಗಳ ತರಬೇತಿ ಪಡೆದ ಮತ್ತು ವೃತ್ತಿಪರ ಟೈಲರಿಂಗ್ ಅಭ್ಯರ್ಥಿಗಳಿಗೆ ಒಟ್ಟು 37 ವಿದ್ಯುತ್‌ಚಾಲಿತ ಪೂಟ್ ಮಾಡಲ್ ಹೊಲಿಗೆ ಯಂತ್ರಗಳನ್ನು ರೂ. 3.00 ಲಕ್ಷದಲ್ಲಿ

ಖರೀದಿಸಲಾಗಿದೆ. ಈ ಯೋಜನೆಯಲ್ಲಿ ಆರ್ಥಿಕ ಶೇ 100% ರಷ್ಟು ಮತ್ತು ಭೌತಿಕ ಶೇ. 100% ರಷ್ಟು ಸಾಧನೆ ಮಾಡಲಾಗಿದೆ.

2. ವೃತ್ತಿಪರ ಕುಶಲ ಕರ್ಮಿಗಳಿಗೆ ಉಚಿತ ಸುಧಾರಿತ ಸಲಕರಣೆಗಳ ಸರಬರಾಜು ಲೆಕ್ಕ ಶೀರ್ಷಕೆ : 2851–00–107–0–32:–

ಈ ಯೋಜನೆಯಡಿ 2019–20 ನೇ ಸಾಲಿಗೆ ರೂ.4.00 ಲಕ್ಷ ಅನುದಾನ ಹಂಚಿಕೆ ಆಗಿದ್ದು, ರೂ.4.00 ಲಕ್ಷ ಅನುದಾನ ಬಿಡುಗಡೆಯಾಗಿರುತ್ತದೆ. ಒಟ್ಟಾರೆ ರೂ. 4.00 ಲಕ್ಷ ಅನುದಾನದಲ್ಲಿ ಉಪಶೀರ್ಷಿಕೆ 090 ದಲ್ಲಿ ರೂ. 2.00 ಲಕ್ಷ, ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಉಪಶೀರ್ಷಿಕೆ 422 ಮತ್ತು 423 ಗಳಡಿ ತಲಾ ರೂ. 1.00 ಲಕ್ಷಗಳಿಗೆ ಒಟ್ಟಾರೆ ರೂ. 4.00 ಲಕ್ಷ ಮೊತ್ತದಲ್ಲಿ ಜಿಲ್ಲೆಯ ಎಲ್ಲಾ ಜಿಲ್ಲಾ ಪಂಚಾಯತ್ ಸದಸ್ಯರಿಗೆ ಕನಿಷ್ಠ ಒಬ್ಬರು ಫಲಾನುಭವಿಗಳನ್ನು ಮೀಸಲಿರುವಂತೆ ಸಾಮಾನ್ಯ ಮತ್ತು ಪರಿಶಿಷ್ಟ ಜಾತಿ ಫಲಾನುಭವಿಗಳಿಗೆ ವಿದ್ಯುತ್‌ಚಾಲಿತ ಸುಧಾರಿತ ಗಾರೆ ಕಸುಬಿನ ಉಪಕರಣ ಹಾಗೂ ಪರಿಶಿಷ್ಟ ಪಂಗಡದ 12 ಜನ ಫಲಾನುಭವಿಗಳಿಗೆ ಸುಧಾರಿತ ಮರಗೆಲಸದ ವಿದ್ಯುತ್ ಚಾಲಿತ ಉಪಕರಣಗಳನ್ನು ವಿತರಿಸಲು ವೆಚ್ಚ ಒಟ್ಟು ರೂ. 4.00 ಲಕ್ಷಗಳನ್ನು ಭರಿಸಲಾಗಿದೆ. ಈ ಯೋಜನೆಯಲ್ಲಿ ಭೌತಿಕ ಶೇ.100% ರಷ್ಟು ಹಾಗೂ ಆರ್ಥಿಕ ಶೇ. 100% ರಷ್ಟು ಸಾಧನೆ ಮಾಡಲಾಗಿದೆ.

3. ವಿಚಾರಗೋಷ್ಠಿಗಳು, ಕ್ಷೇತ್ರೋತ್ಸವಗಳು ಮತ್ತು ವಸ್ತು ಪ್ರದರ್ಶನಗಳು, ಲೆಕ್ಕ ಶೀರ್ಷಿಕೆ: 2851–00–107–0–34:

ಈ ಯೋಜನೆಯಡಿ 2019–20 ನೇ ಸಾಲಿನಲ್ಲಿ ರೂ. 15.00 ಅನುದಾನ ಹಂಚಿಕೆಯಾಗಿದ್ದು, ರೂ. 15.00 ಲಕ್ಷ ಅನುದಾನ ಬಿಡುಗಡೆಯಾಗಿರುತ್ತದೆ. ಅದರಲ್ಲಿ ಮೈಸೂರಿನ ವಿಶ್ವವಿಖ್ಯಾತ ಮೈಸೂರು ದಸರಾ ಜಂಬೂ ಸವಾರಿ ಸಾಲು ಮೆರವಣಿಗೆಯಲ್ಲಿ ಜಿಲ್ಲೆಯನ್ನು ಪ್ರತಿಬಿಂಬಿಸುವ "ಪ್ರಕೃತಿ ಸಂರಕ್ಷಣೆ/ಪ್ರಕೃತಿ ವಿಕೋಪ ಜಾಗೃತಿ" ಸ್ಥಬ್ಬಚಿತ್ರವನ್ನು ನಿರ್ಮಾಣಕ್ಕಾಗಿ ರೂ. 6.00 ಲಕ್ಷಗಳ ವೆಚ್ಚ ಭರಿಸಲಾಗಿದೆ. ಹಾಗೂ ಮೈಸೂರು ದೊಡ್ಡಕೆರೆ ಮೈದಾನದಲ್ಲಿ ಜರಗುವ ವಸ್ತು ಪ್ರದರ್ಶನದಲ್ಲಿ ಜಿಲ್ಲೆಯನ್ನು ಪ್ರತಿನಿಧಿಸುವ ಮಳಿಗೆಯನ್ನು ತೆರೆದು ನಿರ್ವಾಹಿಸುವುದಕ್ಕಾಗಿ ರೂ. 6.00 ಲಕ್ಷ ಗಳ ವೆಚ್ಚವನ್ನು ಭರಿಸಲಾಗಿದೆ. ಹಾಗೂ ಜಿಲ್ಲೆಯ ಮಡಿಕೇರಿ, ಸೋಮವಾರಪೇಟೆ ತಾಲ್ಲೂಕುಗಳಲ್ಲಿ ಗ್ರಾಮೀಣ ಕೈಗಾರಿಕಾ ಉತ್ಪನ್ನಗಳ ವಸ್ತುಪ್ರದರ್ಶನ ವನ್ನು ಏರ್ಪಡಿಸಲಾಗಿದೆ. ವಸ್ತುಪ್ರದರ್ಶನವನ್ನು ಮೂರು ವಿವಿಧ ಕಡೆಗಳಲ್ಲಿ ಆಯೋಜಿಸಿ ಒಟ್ಟು ರೂ. 3.00 ಲಕ್ಷಗಳ ವೆಚ್ಚವನ್ನು ಭರಿಸಲಾಗಿದೆ. ಈ ಯೋಜನೆಯಲ್ಲಿ ಶೇ. 100% ರಷ್ಟು ಆರ್ಥಿಕ ಹಾಗೂ ಶೇ. 100% ರಷ್ಟು ಭೌತಿಕ ಪ್ರಗತಿ ಸಾಧಿಸಲಾಗಿದೆ.

ಪಶುಪಾಲನಾ ಇಲಾಖೆ

ಕೊಡಗು ಜಿಲ್ಲೆಯು ಪುಟ್ಟ ಜಿಲ್ಲೆಯಾಗಿದ್ದು,3 ತಾಲ್ಲೂಕುಗಳನ್ನೊಳಗೊಂಡಿದೆ. ಈ ಜಿಲ್ಲೆಯ ರೈತಾಪಿ ಜನರು ಈಗಲೂ ವ್ಯವಸಾಯಕ್ಕೆ ಪಶು ಸಂಪತ್ತನ್ನು ಅವಲಂಬಿಸಿದ್ದು, ರೈತರ ಆರ್ಥಿಕ ಅಭಿವೃದ್ಧಿಗೆ, ಆರೋಗ್ಯಾಭಿವೃದ್ಧಿಗೆ ಹಾಲು ಮತ್ತು ಹಾಲಿನ ಉತ್ಪನ್ನಗಳನ್ನು ಒದಗಿಸುವ ದಿಶೆಯಲ್ಲಿ ಜಾನುವಾರುಗಳ ಸಂರಕ್ಷಣೆ, ಚಿಕಿತ್ಸೆ ನೀಡುವುದು. ಸಾಂಕ್ರಾಮಿಕ ರೋಗ ತಗಲದಂತೆ ಚುಚ್ಚುಮದ್ದು ನೀಡಿ ಮುಂಜಾಗ್ರತೆ ವಹಿಸುವುದು. ಸ್ಥಳೀಯ ರಾಸುಗಳಿಗೆ ಹಾಗೂ ಮಿಶ್ರತಳಿ ರಾಸುಗಳಿಗೆ ಉತ್ತಮ ಜಾತಿಯ ಹೆಚ್ಚು ಹಾಲು ಕೊಡುವ ಜಾತಿಯ ತಳಿಯ ಘನೀಕೃತ ವೀರ್ಯವನ್ನು ಕೃತಕ ಗರ್ಭಧಾರಣೆಗೆ ಉಪಯೋಗಿಸಿ ಪಶು ಸಂಪತ್ತಿನ ನಿರ್ವಹಣೆ ಹಾಗೂ ಜಿಲ್ಲೆಯಾದ್ಯಂತ ಪಶು ಆರೋಗ್ಯ ಸೇವೆಯನ್ನು ಒದಗಿಸುವ ಇಲಾಖೆಯ ಮುಖ್ಯ ಉದ್ದೇಶಗಳಾಗಿವೆ. ಜಿಲ್ಲೆಯಲ್ಲಿ ಇಲಾಖೆಯ ಕಾರ್ಯಾಚಟುವಟಿಕೆಗಳು ವಿಶಾಲ ತಳಹದಿಯ ಮೇಲೆ ಈ ಕೆಳಗಿನಂತೆ ವಿಂಗಡಿಸಬಹುದಾಗಿದೆ.

1) ಜಾನುವಾರು ಆರೋಗ್ಯ ಮತ್ತು ಪಶುವೈದ್ಯ ಸೇವೆಗಳು.
2) ಜಾನುವಾರು ಅಭಿವೃದ್ಧಿ.
3) ಕುಕ್ಕುಟ ಅಭಿವೃದ್ಧಿ.
4) ವರಾಹ ಅಭಿವೃದ್ಧಿ.
5)ಮೇವು ಅಭಿವೃದ್ಧಿ.
6) ಸಾಮಾಜಿಕ ಆರ್ಥಿಕ ಕಾರ್ಯಕ್ರಮಗಳು.
7) ಜಾನುವಾರು ಗಣತಿ ನಡೆಸುವುದು.
8)ಜಾನುವಾರು ಉತ್ಪನ್ನಗಳ ಸಮೀಕ್ಷೆ ನಡೆಸುವುದು.
9)ತಾತ್ಕಾಲಿಕ ಬಂಜೆತನ ನಿವಾರಣೆ

1)ಜಾನುವಾರು ಆರೋಗ್ಯ ಮತ್ತು ಪಶುವೈದ್ಯ ಸೇವೆಗಳು:– ಈ ಕಾರ್ಯಕ್ರಮದಡಿಯಲ್ಲಿ ಇಲಾಖೆಯು ರೋಗ ಪೀಡಿತ ಪ್ರಾಣಿಗಳಿಗೆ ಚಿಕಿತ್ಸೆ ನೀಡಿ, ಶುಶ್ರೂಷೆ ಮಾಡುವುದಲ್ಲದೆ, ಜಾನುವಾರುಗಳಿಗೆ ಹಾಗೂ ಸಾಕು ಪ್ರಾಣಿಗಳಿಗೆ ಸಾಂಕ್ರಾಮಿಕ ಹಾಗೂ ಸಾಂಕ್ರಾಮಿಕವಲ್ಲದ ರೋಗಗಳು ಹರಡುವುದರ ವಿರುದ್ಧ ಲಸಿಕೆಗಳನ್ನು ನೀಡಿ ಪ್ರಾಣಿಗಳ ಜೀವ ಹಾನಿಯಿಂದ ರೈತರಿಗೆ ಉಂಟಾಗಬಹುದಾದ ನಷ್ಟವನ್ನು ತಪ್ಪಿಸುತ್ತದೆ. ಜಿಲ್ಲೆಯಲ್ಲಿ ಪಶು ವೈದ್ಯ ಆಸ್ಪತ್ರೆಗಳು–18, ಪಶು ಚಿಕಿತ್ಸಾಲಯಗಳು–22, ಜಿಲ್ಲಾ ಪಾಲಿಕ್ಲಿನಿಕ್–1, ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರ–31 ಹಾಗೂ ಜಿಲ್ಲೆಯಲ್ಲಿ 1 ಜಿಲ್ಲಾ ಕೋಳಿ ಸಾಕಾಣಿಕೆ ಮತ್ತು ತರಬೇತಿ ಕೇಂದ್ರ, 1– ಪ್ರಾದೇಶಿಕ ಕೋಳಿ ವಿಸ್ತರಣಾ ಕೇಂದ್ರ ಕಾರ್ಯನಿರ್ವಹಿಸುತ್ತದೆ.

2) ಜಾನುವಾರು ಅಭಿವೃದ್ಧಿ:– ಇಲಾಖೆಯ ಅತೀ ಮುಖ್ಯ ಚಟುವಟಿಕೆಯಾದ ಜಾನುವಾರು ಅಭಿವೃದ್ಧಿ ಕಾರ್ಯಕ್ರಮದಡಿಯಲ್ಲಿ ಜಿಲ್ಲೆಯ ಜಾನುವಾರುಗಳಿಗೆ ಉತ್ತಮ ತಳಿ, ಹೆಚ್ಚು ಹಾಲು ನೀಡುವ ವಿದೇಶಿ ಹಾಗೂ ಪೌರ ತಳಿಗಳಾದ ಜೆರ್ಸಿ, ಹೆಚ್ ಎಫ್, ಸೂರ್ತಿ, ಮುರ್ರಗಳಿಂದ ಸಂಗ್ರಹಿಸಲಾದ ಘನೀಕೃತ ನಳಿಕೆ ಮೂಲಕ ಕೃತಕ ಗರ್ಭಧಾರಣೆಯನ್ನು ಜಿಲ್ಲೆಯಾದ್ಯಂತ ನೀಡುವ ವ್ಯವಸ್ಥೆಯನ್ನು ಮಾಡುವುದರ ಮೂಲಕ ಮಿಶ್ರ ತಳಿ ಉತ್ತಮ ತಳಿಗಳ ಮೂಲಕ ಜಾನುವಾರುಗಳ ಅಭಿವೃದ್ಧಿಗೆ ಹೆಚ್ಚಿನ ಪ್ರಾಶಸ್ತ್ಯ ನೀಡಲಾಗುತ್ತಿದೆ.

3) ಕುಕ್ಕುಟ ಅಭಿವೃದ್ಧಿ:– 2019–20 ನೇ ಸಾಲಿನಲ್ಲಿ ಜಿಲ್ಲೆಯ ಕೂಡಿಗೆಯಲ್ಲಿ ಜಿಲ್ಲಾ ಕೋಳಿ ಸಾಕಾಣಿಕೆ ಕೇಂದ್ರ ಮತ್ತು ಪೊನ್ನಂಪೇಟೆಯಲ್ಲಿ ಕೋಳಿ ವಿಸ್ತರಣಾ ಕೇಂದ್ರಗಳಲ್ಲಿ 6000 ಉತ್ತಮ ಮಟ್ಟದ ಗಿರಿರಾಜ ಕೋಳಿಮರಿಗಳನ್ನು ರೈತರಿಗೆ ಒದಗಿಸಲಾಗಿದ್ದು ಕೋಳಿ ಸಾಕಾಣಿಕೆ ಬಗ್ಗೆ ಸಂಪೂರ್ಣವಾಗಿ ಪಾಲನೆಯ ಮಾಹಿತಿಯನ್ನು ಮತ್ತು ಮಾರ್ಗದರ್ಶನದ ತರಬೇತಿಯನ್ನು ನೀಡಲಾಗುತ್ತಿದೆ.

4) ವರಾಹ ಅಭಿವೃದ್ಧಿ:– ಜಿಲ್ಲೆಯ ಕೂಡಿಗೆಯಲ್ಲಿಒಂದು ಹಂದಿ ತಳಿ ಸಂವರ್ಧನಾ ಕೆಂದ್ರವು ಕಾರ್ಯ ನಿರ್ವಹಿಸುತ್ತಿದೆ. ಇಲ್ಲಿಂದ ಉತ್ತಮ ಗುಣಮಟ್ಟದ ಹಂದಿ ಮರಿಗಳನ್ನು ರೈತರಿಗೆ, ವಿದ್ಯಾವಂತ ನಿರುದ್ಯೋಗಿಗಳಿಗೆ, ವಿವಿದ ಸಾಮಾಜಿಕ ಆರ್ಥಿಕ ಕಾರ್ಯಕ್ರಮಗಳ ಫಲಾನಿಭವಿಗಳಿಗೆ, ಸ್ತ್ರೀ ಶಕ್ತಿ ಯೋಜನೆಗಳಿಗೆ ಹೀಗೆ ಅನೇಕ ರೀತಿಯಲ್ಲಿನ ಯೋಜನೆಗಳಿಗೆ ಉತ್ತಮ ತಳಿಯ ಹಂದಿ ಮರಿಗಳನ್ನು ವಿತರಿಸಲಾಗುತ್ತಿದೆ.

5) ಮೇವು ಅಭಿವೃದ್ಧಿ:– ಇಲಾಖಾ ವತಿಯಿಂದ ಉತ್ತಮ ತಳಿಯ ಮೇವು ಬೀಜಗಳನ್ನು ಮತ್ತು ಮೇವಿನ ಸಸಿಗಳನ್ನು ವಿತರಿಸಿ ಮೇವು ಬೆಳೆ ಬಗ್ಗೆ ಮಾರ್ಗದರ್ಶನ ನೀಡಲಾಗುತ್ತಿದೆ.

6) ಸಾಮಾಜಿಕ ಆರ್ಥಿಕ ಕಾರ್ಯಕ್ರಮ:– ಸರ್ಕಾರದ ಸಾಮಾಜಿಕ ಆರ್ಥಿಕ ಕಾರ್ಯಕ್ರಮದಡಿಯಲ್ಲಿ ಸಮಾಜದ ಕಡುಬಡವರು ತಮ್ಮ ಜೀವನವನ್ನು ಸಾಗಿಸಲು ಆರ್ಥಿಕ ಪರಿಸ್ಥಿತಿಯನ್ನು ಉತ್ತಮ ಪಡಿಸಿಕೊಳ್ಳಲು ಸಹಕಾರಿಯಾಗಿದ್ದು ಈ ಕೆಳಕಂಡಂತಿದೆ.

ಅ. ವಿಶೇಷ ಘಟಕಯೋಜನೆ/ಗಿರಿಜನ ಉಪ ಯೋಜನೆ:– ವಿಶೇಷ ಘಟಕ ಯೋಜನೆ ಹಾಗೂ ಗಿರಿಜನ ಉಪಯೋಜನೆಯಡಿ ಫಲಾನುಭವಿಗಳನ್ನು ನಿಯಮನುಸಾರ ಆಯ್ಕೆಮಾಡಿ ಇವರಿಗೆ ಹಂದಿ ಘಟಕ ,ಕುರಿ/ ಆಡು ಘಟಕ ಮತ್ತು ಹಸು ಘಟಕಗಳನ್ನು ಅನುಷ್ಠಾನಗೊಳಿಸಲು ಆರ್ಥಿಕ ಗುರಿ 7.56 ಲಕ್ಷ ಹಾಗೂ ಭೌತಿಕ ಗುರಿ 14 ಘಟಕ ಗುರಿ ನಿಗಧಿಯಾಗಿದ್ದು, ಘಟಕಗಳ ಅನುಷ್ಠಾನಕ್ಕಾಗಿ ವಾಣಿಜ್ಯ ಬ್ಯಾಂಕುಗಳಿಂದ ಸಾಲ ಪಡೆದು ತಾಲ್ಲೂಕು ಸಹಾಯಕ ನಿರ್ದೇಶಕರುಗಳ ಮೂಲಕ ಆರ್ಥಿಕ 6.21ಲಕ್ಷ ಹಾಗೂ 13 ಭೌತಿಕ ಗುರಿಗಳನ್ನು ಅನುಷ್ಠಾನಗೊಳಿಸಲಾಗಿದೆ.

ಆ. ಅಮೃತ ಯೋಜನೆ:–ಮಹಿಳೆಯವರಿಗಾಗಿ ಅಮೃತ ಯೋಜನೆಯಡಿ ಜಿಲ್ಲೆಗೆ ಆರ್ಥಿಕ ಗುರಿ 9.64 ಲಕ್ಷ ಹಾಗೂ 49 ಭೌತಿಕ ಗುರಿ ನಿಗಧಿಯಾಗಿದ್ದು ಬಡತನ ರೇಖೆಗಿಂತ ಕೆಳಗಿರುವ ಭೂ ರಹಿತ ಕೃಷಿ ಕಾರ್ಮಿಕರ ಮಹಿಳೆಯರು (ಅಲ್ಪಸಂಖ್ಯಾತರು 15% ವಿಕಲಚೇತನರು 5%) ವಿಧವೆಯರು, ದೇವದಾಸಿಯರು ಮತ್ತು ಸಂಕಷ್ಟಕ್ಕೊಳಗಾದ ಮಹಿಳೆಯರಿಗೆ ಘಟಕಗಳನ್ನು ಅನ್ಷ್ಠಾಗೊಳಿಸಲು ಆರ್ಥಿಕ ಗುರಿ 21.49ಲಕ್ಷ ಹಾಗೂ ಭೌತಿಕ 79 ಗುರಿ ನಿಗಧಿಯಾಗಿದ್ದು, ಘಟಕಗಳ ಅನುಷ್ಠಾನಕ್ಕಾಗಿ ವಾಣಿಜ್ಯ ಬ್ಯಾಂಕುಗಳಿಂದ ಸಾಲ ಪಡೆದು ತಾಲ್ಲೂಕು ಸಹಾಯಕ ನಿರ್ದೇಶಕರ ಮೂಲಕ ಆರ್ಥಿಕ 20.035 ಲಕ್ಷ ಹಾಗೂ 78 ಭೌತಿಕ ಗುರಿಗಳನ್ನು ಅನುಷ್ಠಾನಗೊಳಿಸಲಾಗಿದೆ.

ಇ. ಜಲ ಕೃಷಿ ಉತ್ಪಾದನಾ ಘಟಕ :–ಜಲ ಕೃಷಿ ಹಸಿರು ಮೇವು ಉತ್ಪಾದನಾ ಘಟಕ ಕಾರ್ಯಕ್ರದಡಿಯಲ್ಲಿ ಜಿಲ್ಲೆಗೆ ಆರ್ಥಿಕ ಗುರಿ 7.36 ಲಕ್ಷ ಹಾಗೂ 14 ಭೌತಿಕ ಗುರಿ ನಿಗಧಿಯಾಗಿದ್ದು ಘಟಕಗಳ ಅನುಷ್ಠಾನ ಕ್ಕಾಗಿ ತಾಲ್ಲೂಕು ಸಹಾಯಕ ನಿರ್ದೇಶಕರ ಮೂಲಕ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ಕ್ರವಹಿಸಲಾಗಿದೆ.

ಈ: ಕುಕ್ಕುಟ ಅಭಿವೃದ್ಧಿ ಕಾರ್ಯಕ್ರಮ:– ಕುಕ್ಕುಟ ಅಭಿವೃದ್ಧಿ ಕಾರ್ಯಕ್ರಮದಡಿ ಜಿಲ್ಲೆಗೆ ಆರ್ಥಿಕ ಗುರಿ 6.00 ಲಕ್ಷ ಹಾಗೂ ಭೌತಿಕ ಗುರಿ 6000 ಕೋಳಿಮರಿಗಳ ಸಾಕಣಿಕೆ ಮತ್ತು ವಿತರಣೆ ಗುರಿ ಇದ್ದು ಗಿರಿರಾಜ ಕೋಳಿ ಮರಿಗಳನ್ನು ಜಿಲ್ಲಾ ಕೋಳಿಸಾಕಾಣಿಕೆ ಮತ್ತು ತರಬೇತಿ ಕೇಂದ್ರ, ಕೂಡಿಗೆ ಹಾಗೂ ಕೋಳಿ ವಿಸ್ತರಣಾ ಕೇಂದ್ರ, ಪೊನ್ನಂಪೇಟೆಯಲ್ಲಿ ಆರು ವಾರಗಳ ತನಕ ಪಾಲನೆ ಮಾಡಿ ಪರಿಶಿಷ್ಟ ಜಾತಿ/ಪಂಗಡ ದವರಿಗೆ ಉಚಿತವಾಗಿ ಹಾಗೂ ಸಾಮಾನ್ಯ ವರ್ಗದವರಿಗೆ ಶೇಕಡ 90% ರ ಸಹಾಯ ಧನದಲ್ಲಿ ವಿತರಿಸಲಾಗಿದೆ.

ಉ. ಮೇವು ಕತ್ತರಿಸುವ ಯಂತ್ರ:– ಮೇವು ಕತ್ತರಿಸುವ ಯಂತ್ರವನ್ನು ವಿತರಿಸಲು ಶೇಕಡ 50%ರ ಸಹಾಯಧನದಲ್ಲಿ 13 ಫಲಾನುಭವಿಗಳಿಗೆ ರೂ: 1.28 ಲಕ್ಷ ಗಳನ್ನು ತಾಲ್ಲೂಕು ಸಹಾಯಕ ನಿರ್ದೇಶಕರುಗಳ ಮೂಲಕ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲಾಗಿದೆ.

ಊ. ಉಚಿತ ಜಾನುವಾರು ವಿಮೆ:– ಉಚಿತ ಜಾನುವಾರು ವಿಮಾ ಯೋಜನೆಯಡಿ ವಿಶೇಷ ಘಟಕ ಯೋಜನೆಯಲ್ಲಿ ಭೌತಿಕ.393 ಜಾನುವಾರುಗಳಿಗೆ ಆರ್ಥಿಕ ರೂ7.347 ಲಕ್ಷ ಹಾಗೂ ಗಿರಿಜನ ಉಪಯೋಜನೆ ಯಲ್ಲಿ ಭೌತಿಕ. 316 ಜಾನುವಾರುಗಳಿಗೆ ಆರ್ಥಿಕ ರೂ: 5.494 ಲಕ್ಷ ಮತ್ತು ಫಲನುಭವಿಯ ವಂತಿಕೆ ಯೋಜನೆಯಡಿ 11 ಜಾನುವಾರುಗಳಿಗೆ ರೂ: 0.04 ಲಕ್ಷ ಪ್ರಗತಿ ಸಾಧಿಸಲಾಗಿದೆ.

7. ಜಾನುವಾರುಗಣತಿ:– ಪ್ರತಿ 5 ವರ್ಷಗಳಿಗೊಮ್ಮೆ ಅಖಿಲ ಭಾರತದಾದ್ಯಂತ ಜಾನುವಾರು ಗಣತಿಯನ್ನು ಮಾಡಲಾಗುತ್ತಿದೆ.ಇದರಂತೆ 2012 ರಲ್ಲಿ 19 ನೆ ಜಾನುವಾರು ಗಣತಿ ಸಮೀಕ್ಷೆಯಂತೆ ಜಿಲ್ಲೆಯಲ್ಲಿ

88428 ದನಗಳು, 14476 ಎಮ್ಮೆ ಮತ್ತು ಕೋಣಗಳು, 1401 ಕುರಿಗಳು, 7785 ಆಡುಗಳು, 16948 ಹಂದಿಗಳು, 47131 ನಾಯಿಗಳು,201725 ಕೋಳಿಗಳು,723 ಮೊಲಗಳು ಕಂಡುಬಂದಿದೆ.

8) ಜಾನುವಾರು ಉತ್ಪನ್ನಗಳ ಸಮೀಕ್ಷೆ:– ಪಶು ಉತ್ಪನ್ನಗಳಾದ ಹಾಲು,ಮೊಟ್ಟೆ,ಮಾಂಸ,ಉಣ್ಣೆ ಇವುಗಳನ್ನು ವಾರ್ಷಿಕ ಅಂದಾಜನ್ನು ತಿಳಿಯಲು ಜಾನುವಾರು ಉತ್ಪನ್ನಗಳ ಸಮೀಕ್ಷೆ ನಡೆಸಲಾಗುತ್ತಿದೆ.ಜಿಲ್ಲೆಯ ವಿವಿದೆಡೆಯಲ್ಲಿ ಸರ್ಕಾರವು ಉತ್ತಮ ಗುಣಮಟ್ಟದ ಅಧಿಕೃತ ವಧಾಗಾರಗಳನ್ನು ಪುರಸಭಾ ವ್ಯಾಪ್ತಿಯಲ್ಲಿತೆರೆದು ಅವುಗಳಿಂದ ಆರೋಗ್ಯದಾಯಕವಾದ ಉತ್ತಮ ಮಾಂಸ ಮತ್ತು ಮಾಂಸದ ಉತ್ಪನ್ನಗಳನ್ನು ಜನರಿಗೆ ಲಭ್ಯವಾಗುವಂತೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳುವ ಯೋಜನೆ ರೂಪಿಸಲಾಗುತ್ತಿದೆ.

9) ತಾತ್ಕಾಲಿಕ ಬಂಜೆತನ ನಿವಾರಣೆ:– ಜಿಲ್ಲೆಯಾದ್ಯಾಂತ ಆಯ್ದ ಸ್ಥಳಗಳಲ್ಲಿ31 ಉಚಿತ ಪಶು ಆರೋಗ್ಯ ಶಿಬಿರಗಳನ್ನು ಏರ್ಪಡಿಸಿ ಜಾನುವಾರುಗಳಲ್ಲಿ ತಾತ್ಕಾಲಿಕ ಬಂಜೆತನಕ್ಕೆ ಕಾರಣಗಳನ್ನು ಗುರುತಿಸಿ ಚಿಕಿತ್ಸೆ ನೀಡಲಾಗಿದೆ.

ಕೊಡಗು ಜಿಲ್ಲೆಯಲ್ಲಿ ಇಲಾಖಾ ಪುನರ್ ರಚನೆಯ ನಂತರ ಮಂಜೂರಾದ ಸಿಬ್ಬಂದಿ ವಿವರಣಾ ಪಟ್ಟಿ

ಕ್ರ. ಸಂ.	ಪದನಾಮ	ಮಂಜೂರಾದ ಹುದ್ದೆ	ಭರ್ತಿಯಾದ ಹುದ್ದೆ	ಖಾಲಿ ಹುದ್ದೆ
1.	ಉಪ ನಿರ್ದೇಶಕರು	2	–	2
2.	ಮುಖ್ಯ ಪಶುವೈದ್ಯಾಧಿಕಾರಿ (ಆಡಳಿತ)	4	2	2
3	ಮುಖ್ಯ ಪಶುವೈದ್ಯಾಧಿಕಾರಿ	7	5	2
4.	ಮುಖ್ಯ ಪಶುವೈದ್ಯಾಧಿಕಾರಿ/ ಹಿರಿಯ ಪಶುವೈದ್ಯಾಧಿಕಾರಿ	15	5	10
5.	ಹಿರಿಯ ಪಶುವೈದ್ಯಾಧಿಕಾರಿ /ಪಶುವೈದ್ಯಾಧಿಕಾರಿ	22	11	11
6	ಆಡಳಿತ ಸಹಾಯಕರು	1	1	–
7.	ಅಧೀಕ್ಷಕರು	1	1	–
8	ಪ್ರಥಮದರ್ಜೆ ಸಹಾಯಕರು	3	3	–
9	ದ್ವಿತೀಯದರ್ಜೆ ಸಹಾಯಕರು	5	4	–
10	ಬೆರಳಚ್ಚುಗಾರರು	1	–	1
11.	ಜಾನುವಾರುಅಭಿವೃದ್ದಿಅಧಿಕಾರಿ	5	3	2
12	ಜಾನುವಾರಿಅಧಿಕಾರಿ	14	7	7
13	ಹಿರಿಯ ಪಶುವೈದ್ಯಕೀಯ ಪರೀಕ್ಷಕರು	38	17	20
14	ಪಶುವೈದ್ಯಕೀಯ ಪರೀಕ್ಷಕರು	22	12	10
15.	ಪಶುವೈದ್ಯಕೀಯ ಸಹಾಯಕರು	44	3	41
16	ಕ್ಷ– ಕಿರಣ ತ0ತ್ರಜ್ಞರು	1	–	1
17.	ವಾಹನ ಚಾಲಕರು	5	2	3
18	ಡಿ.ದರ್ಜೆ ನೌಕರರು	119	27	91
	ಒಟ್ಟು ಹುದ್ದೆಗಳು	306	103	203

2019–20ನೇ ಸಾಲಿನ ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮಗಳ ಪ್ರಗತಿ ವರದಿ

ಕ್ರ.ಸ	ವಿವರ	ವಾರ್ಷಿಕಗುರಿ	ಸಾಧನೆ	ಶೇಕಡ
1.	ಕೃತಕಗರ್ಭಧಾರಣೆ	18000	16415	91
2.	ಗರ್ಭ ಪರೀಕ್ಷೆ	19190	15526	81
3.	ಕೊಕ್ಕರೆರೋಗದ ವಿರುದ್ದ	150000	148136	99
4.	ಕಾಲುಬಾಯಿ ಜ್ವರದ ವಿರುದ್ದ ಲಸಿಕೆ	76294	70186	92
5	ಮೇವಿನ ಕಿರುಪೊಟ್ಟಣ ವಿತರಣೆ	4000	2688	67
6	ಮೇವು ಅಭಿವೃದ್ದಿಗೆ ಒಳಪಡಿಸುವ ಪ್ರದೇಶಗಳು(ಹೆಕ್ಟೇರುಗಳಲ್ಲಿ)	986	994	101
7	ಗಿರಿರಾಜ ಕೋಳಿಮರಿಗಳ ವಿತರಣೆ	7500	7100	95
8	ಎ) ಸ್ಟಾಕ್‌ರೂಟ್ ಸರ್ಚ್	42	42	100
	ಬಿ)ವಿಲೇಜ್ ಸರ್ಚ್	552	552	100
	ಸಿ)ಡೇ ಬುಕ್ ಸರ್ಚ್	144	144	100
9	ಬರಡು ರಾಸುಗಳ ಶಿಬಿರ	31	31	100
10	ಜಾನುವಾರುಪ್ರದರ್ಶನ	8	8	100
11	ಗ್ರಾಮ ಸಂದರ್ಶನ	194	201	104
12	ಕಿಸಾನ್ ಸಂಪರ್ಕ ಸಭೆ	72	73	101
13	ತಾಂತ್ರಿಕ ಪರಿಶೋಧನೆ	70	70	100
14	ವಿಸ್ತರಣಾ ಕಾರ್ಯಕ್ರಮದಲ್ಲಿ ನಡೆಸಿದ ಹಸು/ಕರುಗಳ ಪ್ರದರ್ಶನ	8	7	88
15	ಅರೆ ತಾಂತ್ರಿಕ ಪಶುವೈದ್ಯಕೀಯ ಸಿಬ್ಬಂದಿಯವರಿಗೆ ತರಬೇತಿ	15	14	88
16	ಸಾಕಲಾದ ಗಿರಿರಾಜ ಕೋಳಿ ಮರಿಗಳ ಸಂಖ್ಯೆ	6000	6000	100

2019–20 ನೇ ಸಾಲಿನ ಯೋಜನೆ ಮತ್ತು ಯೋಜನೇತರ ಕಾರ್ಯಕ್ರಮಗಳ ಪ್ರಗತಿ ವರದಿ

ಕ್ರ. ಸಂ.	ಲೆಕ್ಕ ಶೀರ್ಷಿಕೆ	ವಾರ್ಷಿಕ ಆರ್ಥಿಕ ಅನುದಾನ	ವೆಚ್ಚ	ಶೇಕಡ	ಭೌತಿಕ ಗುರಿ	ಸಾಧನೆ	ಶೇಕಡ
ಜಿಲ್ಲಾ ಪಂಚಾಯತ್ ಯೋಜನೆ							
1	2403–00–101–0–26 **ನಿರ್ದೇಶನ ಮತ್ತು ಆಡಳಿತ**	105.70	ವೇತನ –86.98 ಕ.ವೆಚ್ಚ– 14.61 101.61	96	41	13	32
2	2403–00–101–0–28 ಪಶು ಚಿಕಿತ್ಸಾಲಯ ಕಟ್ಟಡಗಳು	50.00	30.68	61	23	16	70
3	2403–00–101–0–27 ಔಷಧಿಗಳು,ರಾಸಾಯನಿಕ ಪದಾರ್ಥಗಳು ಮತ್ತು ಸಾಮಾಗ್ರಿಗಳು	56.00	55.99	100	18000	14735	82
4	2403–00–103–0–31 ಗಿರಿರಾಜ ಹಕ್ಕಿ ಸಾಕಾಣಿಕೆ	6.00	6.00	100	6000	6600	100
5	2403–00–101–0–30 ವಿಸ್ತರಣಾ ಘಟಕ ಬಲಪಡಿಸುವಿಕೆ	8.50	6.73	79	3	2	67

2019–20 ನೇ ಸಾಲಿನ ಯೋಜನೆ ಮತ್ತು ಯೋಜನೇತರ ಕಾರ್ಯಕ್ರಮಗಳ ಪ್ರಗತಿ ವರದಿ

ಕ್ರ. ಸಂ.	ಲೆಕ್ಕ ಶೀರ್ಷಿಕೆ	ವಾರ್ಷಿಕ ಅನುದಾನ	ವೆಚ್ಚ	ಶೇಕಡ	ಭೌತಿಕಗುರಿ	ಸಾಧನೆ	ಶೇಕಡ
ತಾಲ್ಲೂಕ್ ಪಂಚಾಯತ್ ಯೋಜನೇತರ ಕಾರ್ಯಕ್ರಮಗಳು.							
1	**2403–00–101–0–61** ಪ್ರಾಥಮಿಕ ಪಶು ಚಿಕಿತ್ಸಾಕೇಂದ್ರಗಳನ್ನುತೆರೆಯುವುದು ಮತ್ತು ಮೇಲ್ದರ್ಜೆಗೇರಿಸುವುದು.	657.41	ವೇತನ.**567.43** ಕ.ವೆಚ್ಚ– **24.95** **592.38**	90	271	89	33
2	**2403–00–101–0–64** ಗೊದ್ದುರಾಸುಚಿಕಿತ್ಸಾ ಶಿಬಿರ	7.80	7.80	100	31	31	100
3	**2403–00–101–0–63** ಜೀವತ್ಯಾಜ್ಯ ವಸ್ತುಗಳ ವಿಲೇವಾರಿ	4.00	4.00	100	74	74	100

2019–20ನೇ ಸಾಲಿನ ವಿಶೇಷ ಘಟಕ ಯೋಜನೆ/ಗಿರಿಜನ ಉಪಯೋಜನೆ/ಅಮೃತ ಯೋಜನೆಯಡಿಯಲ್ಲಿ (ರಾಜ್ಯವಲಯದಡಿ) ಸಾಧಿಸಿದ ಪ್ರಗತಿ ವಿವರ

ಕ್ರಸಂ	ಯೋಜನೆಯ ವಿವರಗಳಿಕ್ಕೆ ಶೀರ್ಷಿಕೆ	ಉಪಶೀರ್ಷಿಕೆ	ಬಿಡುಗಡೆಯಾದ ಅನುದಾನ		ವೆಚ್ಚವಾದ ಅನುದಾನ	
			ಆರ್ಥಿಕ	ಭೌತಿಕ	ಆರ್ಥಿಕ	ಭೌತಿಕ
	2019–20ನೇ ಸಾಲಿನ ವಿಶೇಷ ಘಟಕಯೋಜನೆ/ ಗಿರಿಜನ ಉಪಯೋಜನೆಯಡಿಯಲ್ಲಿ ಸಾಧಿಸಿದ ಪ್ರಗತಿ ವಿವರ(ರಾಜ್ಯವಲಯಕಾರ್ಯಕ್ರಮ)					
1	ಹಸು/ಹಂದಿ/ಆಡು/ಕುರಿ (ಎಸ್.ಸಿ.ಪಿ)2403–00–001–0–04	**422**	**6.21**	**13**	**4.86**	**12**
2	ಹಸು/ಹಂದಿ/ಕುರಿ/ಮೇಕೆ(ಟಿ.ಎಸ್.ಪಿ) 2403–00–001–0–04	**423**	**1.35**	**1**	**1.35**	**1**
2019–20ನೇ ಸಾಲಿನ ಅಮೃತ ಯೋಜನೆಯಡಿಯಲ್ಲಿ ಸಾಧಿಸಿದ ಪ್ರಗತಿ ವಿವರ						
1	ಹಸು/ಹಂದಿ/ಕುರಿ/ಮೇಕೆ (ಎಸ್.ಸಿ.ಪಿ) 2403–00–191–1–16	**422**	**0.945**	**4**	**0.945**	**4**
2	ಹಸು/ಹಂದಿ/ಕುರಿ/ಮೇಕೆ (ಟಿ. ಎಸ್.ಪಿ) 2403–00–191–1–16	**423**	**2.16**	**4**	**2.06**	**4**
3	ಹಸು/ಹಂದಿ/ಕುರಿ/ಮೇಕೆ (ಸಾಮಾನ್ಯ) 2403–00–191–1–16	**059**	**18.38**	**71**	**17.03**	**70**

2019–20ನೇ ಸಾಲಿನ ಜಲ ಕೃಷಿ ಯೋಜನೆಯಡಿಯಲ್ಲಿ ಸಾಧಿಸಿದ ಪ್ರಗತಿ ವಿವರ

ಕ್ರಸಂ	ಯೋಜನೆಯ ವಿವರಗಳಿಕ್ಕೆ ಶೀರ್ಷಿಕೆ	ಉಪಶೀರ್ಷಿಕೆ	ಬಿಡುಗಡೆಯಾದ ಅನುದಾನ		ವೆಚ್ಚವಾದ ಅನುದಾನ	
			ಆರ್ಥಿಕ	ಭೌತಿಕ	ಆರ್ಥಿಕ	ಭೌತಿಕ
1	ಹಸಿರು ಮೇವು ಉತ್ಪಾದನಾ ಘಟಕ(ಸಾಮಾನ್ಯ)2403–00–102–1–06	**059**	5.69	**11**	–	–
2	ಹಸಿರು ಮೇವು ಉತ್ಪಾದನಾ ಘಟಕ(ಎಸ್.ಇ.ಪಿ)2403–00–102–1–06	**422**	1.12	**2**	–	–
3	ಹಸಿರು ಮೇವು ಉತ್ಪಾದನಾ ಘಟಕ(ಟಿ.ಎಸ್.ಪಿ)2403–00–102–1–06	**423**	2.16	**1**	–	–

2019–20ನೇ ಸಾಲಿನ ಬಹುವಾರ್ಷಿಕ ಹಸಿರು ಮೇವು ಬೆಳೆಯುವ ಪ್ರಾತಕ್ಷತೆ ಯೋಜನೆಯಡಿಯಲ್ಲಿ ಸಾಧಿಸಿದ ಪ್ರಗತಿ ವಿವರ

ಕ್ರಸಂ	ಯೋಜನೆಯ ವಿವರಗಳಿಕ್ಕೆ ಶೀರ್ಷಿಕೆ	ಉಪಶೀರ್ಷಿಕೆ	ಬಿಡುಗಡೆಯಾದ ಅನುದಾನ		ವೆಚ್ಚವಾದ ಅನುದಾನ	
			ಆರ್ಥಿಕ	ಭೌತಿಕ	ಆರ್ಥಿಕ	ಭೌತಿಕ
1	ಹಸಿರು ಮೇವು ಬೆಳೆಯುವ ಪ್ರಾತಕ್ಷತೆ(ಸಾಮಾನ್ಯ)2403–00–102–1–06	059	1.20	**12**	**1.20**	12

2019–20 ನೇ ಸಾಲಿನ ಉಚಿತ ವಿಮಾ ಯೋಜನೆಯಡಿಯಲ್ಲಿ ಸಾಧಿಸಿದ ಪ್ರಗತಿ ವಿವರ

	ಯೋಜನೆಯ ವಿವರಲೆಕ್ಕ ಶೀರ್ಷಿಕೆ	ಉಪಶೀರ್ಷಿಕೆ	ಬಿಡುಗಡೆಯಾದಅನುದಾನ		ವೆಚ್ಚವಾದ ಅನುದಾನ	
			ಆರ್ಥಿಕ	ಭೌತಿಕ	ಆರ್ಥಿಕ	ಭೌತಿಕ
1	ವಿಶೇಷ ಘಟಕಯೋಜನೆ **2404–00–191–1–17**	**422**	11.03	**371**	**8.65**	512
2	ಗಿರಿಜನ ಉಪಯೋಜನೆ. **2404–00–191–1–17**	**423**	10.53	**351**	**8.58**	460

2019–20ನೇ ಸಾಲಿನ ಎನ್.ಎಲ್.ಎಮ್ ಯೋಜನೆಯಡಿಯಲ್ಲಿ ಸಾಧಿಸಿದ ಪ್ರಗತಿ ವಿವರ

ಕ್ರಸಂ	ಯೋಜನೆಯ ವಿವರ/ಲೆಕ್ಕ ಶೀರ್ಷಿಕೆ	ಉಪಶೀರ್ಷಿಕೆ	ಬಿಡುಗಡೆಯಾದ ಅನುದಾನ		ವೆಚ್ಚವಾದ ಅನುದಾನ	
			ಆರ್ಥಿಕ	ಭೌತಿಕ	ಆರ್ಥಿಕ	ಭೌತಿಕ
1	ಗ್ರಾಮೀಣ ಹಿತ್ತಲ ಕುರಿ/ಮೇಕೆ/ಹಂದಿ ಸಾಕಾಣಿಕೆ(ಎಸ್.ಇ.ಪಿ)2404–00–106–1–03	**422**	1.377	**3**	**1.377**	3
2	ಗ್ರಾಮೀಣ ಹಿತ್ತಲ ಕುರಿ/ಮೇಕೆ/ಹಂದಿ ಸಾಕಾಣಿಕೆ(ಎಟಿ.ಎಸ್.ಪಿ)2404–00–106–1–03	**423**	1.377	**3**	**1.377**	3

ರಾಷ್ಟ್ರೀಯ ಕೃಷಿ ಕಲ್ಯಾಣ ಅಭಿವೃದ್ಧಿ ಕಾರ್ಯಕ್ರಮದ(NAP) ಮಾರ್ಚ್2020ರ ಅಂತ್ಯದವರೆಗಿನ ಪ್ರಗತಿ ವಿವರ

ಕ್ರ.ಸಂ	ಕಾರ್ಯಕ್ರಮಗಳ ವಿವರ	(ಬಿಡುಗಡೆ) ನಿಗಧಿಯಾದ ಅನುದಾನ (ಲ.ಗಳಲ್ಲಿ)	ಇದರಲ್ಲಿ					
			ಸಾಮಾನ್ಯ ವರ್ಗದದಡಿ ನಿಗಧಿಪಡಿಸಿದ		ಎಸ್.ಸಿ.ಪಿ ಲೆಕ್ಕ ಶೀರ್ಷಿಕೆಯಡಿ ನಿಗಧಿ ಪಡಿಸಿದ		ಟಿ.ಎಸ್.ಪಿ ಲೆಕ್ಕ ಶೀರ್ಷಿಕೆಯಡಿ ನಿಗಧಿ ಪಡಿಸಿದ	
			ಗುರಿ	ಸಾಧನೆ	ಗುರಿ	ಸಾಧನೆ	ಗುರಿ	ಸಾಧನೆ
1	ಕೃತಕ ಗರ್ಭಧಾರಣೆ ಪರಿಕರಗಳ (Disposables) ಪೂರೈಕೆ ಮತ್ತು ವೀರ್ಯನಳಿಕೆಗಳ ಸಾಗಾಣಿಕಾ ವೆಚ್ಚವೂ ಒಳಗೊಂಡಂತೆ ವೀರ್ಯನಳಿಕೆಗಳ ಖರೀದಿಗಾಗಿ ಪ್ರತೀ ನಳಿಕೆಗೆ ರೂ.25–00ರಂತೆ 66,000 ನಳಿಕೆಗಳಿಗೆ	**16.50**	**11.79**	–	**3.22**	–	**1.49**	–
2	ರಾಜ್ಯ ಮಟ್ಟದ ಪ್ರಚಾರ ಕಾರ್ಯ ಮತ್ತು ಡೇಟಾಶೀಟ್‌ಗಳ ಮುದ್ರಣಕ್ಕಾಗಿ ನಿಗಧಿಯಾದ ಅನುದಾನದ ಪೈಕಿ ಡೇಟಾಶೀಟ್‌ಗಳ ಮುದ್ರಣಕ್ಕಾಗಿ	**0.30**	**0.21**	–	**0.06**	–	**0.03**	–
3	ಗೋಡೆ ಬರಹ ಕರಪತ್ರ ಪೋಸ್ಟರ್, ಮತ್ತು ಬ್ಯಾನರ್‌ಗಳನ್ನು ಬಳಸಿ ಗ್ರಾಮಮಟ್ಟದಲ್ಲಿ ಕಾರ್ಯಕ್ರಮಕ್ಕೆ ಅಗತ್ಯ ಪ್ರಚಾರ ನೀಡಲು ಪ್ರತಿ ಗ್ರಾಮಕ್ಕೆ ರೂ.1000 ದಂತೆ	**1.00**	**0.71**	–	**0.20**	–	**0.09**	–
4	ಕರಪತ್ರ ಪೋಸ್ಟರ್ ಮತ್ತು ಬ್ಯಾನರ್‌ಗಳನ್ನು ಬಳಸಿ ಜಿಲ್ಲಾ ಮಟ್ಟದಲ್ಲಿ ಕಾರ್ಯಕ್ರಮಕ್ಕೆ ಅಗತ್ಯ ಪ್ರಚಾರ ನೀಡಲು ಕೃತಕ ಗರ್ಭಧಾರಣೆ ಪರಿಕರಗಳ (Disposables) ಪೂರೈಸಲು ಮತ್ತು ವೀರ್ಯನಳಿಕೆಗಳ ಸಾಗಾಣಿಕೆ ಮತ್ತು ಶೇಖರಣೆಗಾಗಿ ಪ್ರತೀ ಜಿಲ್ಲೆಗೆ ರೂ 50,000 ದಂತೆ	**0.50**	**0.35**	–	**0.10**	–	**0.05**	–
5	ಜಿಲ್ಲಾ ಮಟ್ಟದಲ್ಲಿ ರಾಷ್ಟ್ರೀಯ ಕೃತಕ ಗರ್ಭದಾರಣೆ ಕಾರ್ಯಕ್ರಮದ ಪ್ರಗತಿ ವರದಿಗಳನ್ನು ನ್ಯಾಡ್ರಾಸ್ ಮತ್ತು ಇನಾಫ್ ತಂತ್ರಾಂಶದಲ್ಲಿ ದಾಖಲಿಸಲು ಹಾಗೂ ಜಿಲ್ಲಾ ಮಟ್ಟದಲ್ಲಿ ಪ್ರತೀ ದಿನ ಗ್ರಾಮ/ಗ್ರಾಮ ಗುಚ್ಚಗಳ ಪ್ರಗತಿ ಮಾಹಿತಿಯನ್ನು ಸಿದ್ದಪಡಿಸುವ ಕಾರ್ಯಕ್ಕಾಗಿ ಕೆಟಿಟಿಪಿ ನಿಯಮಾವಳಿಯಂತೆ ಉಪಯೋಗಿಸಲು	**0.80**	**0.57**	–	**0.16**	–	**0.07**	––
	ಒಟ್ಟು	**19.10**	**13.63**	–	**3.74**	–	**1.73**	–

2019–20ನೇ ಸಾಲಿನ ಕೊಡಗು ಜಿಲ್ಲೆಯ ರಾಷ್ಟ್ರೀಯ ಜಾನುವಾರು ಮಿಷನ್ ಅಡಿ ಜಾನುವಾರು ಮಾಲೀಕರ ವಂತಿಗೆಯೊಂದಿಗೆ ಜಾನುವಾರು ವಿಮಾ ಯೋಜನೆ ಪ್ರಗತಿ ವಿವರ ಮಾರ್ಚ್ 2020ರ ಅಂತ್ಯಕ್ಕೆ

ಕ್ರ.ಸಂ	ಕಾರ್ಯಕ್ರಮಗಳ ವಿವರ	ನಿಗಧಿ ಪಡಿಸಿದ ಗುರಿಗಳು		ಸಾಧಿಸಿದ ಪ್ರಗತಿ	
		ಆರ್ಥಿಕ(ರೂ.ಗಳಲ್ಲಿ)	ಭೌತಿಕ	ಆರ್ಥಿಕ(ರೂ.ಗಳಲ್ಲಿ)	ಭೌತಿಕ
1	ಜಾನುವಾರು ವಿಮಾ ಯೋಜನೆ (ಸಾಮಾನ್ಯ ವರ್ಗ)	**92194**	**221**	**33910**	**73**
2	ಜಾನುವಾರು ವಿಮಾ ಯೋಜನೆ (ಪರಿಶಿಷ್ಟ ಜಾತಿ)	53000	126	0	0
3	ಜಾನುವಾರು ವಿಮಾ ಯೋಜನೆ (ಪರಿಶಿಷ್ಟ ಪಂಗಡ)	101000	240	0	0

2019–20ನೇ ಸಾಲಿನ ಮಾರ್ಚ್ ಅಂತ್ಯಕ್ಕೆ ಪ್ರಗತಿ ವರದಿ

ಜಾನುವಾರು ಆಕಸ್ಮಿಕ ಮರಣ (Exgratia)

ಕ್ರಸಂ	ಲೆಕ್ಕ ಶೀರ್ಷಿಕೆ	ಕಾರ್ಯಕ್ರಮ	ನಿಗಧಿಪಡಿಸಿದ ಅನುದಾನ (ಆರ್ಥಿಕ ಲಕ್ಷಗಳಲ್ಲಿ)		ಬಿಡುಗಡೆ ಅನುದಾನ (ಆರ್ಥಿಕ ಲಕ್ಷಗಳಲ್ಲಿ)		ವೆಚ್ಚವಾದ ಅನುದಾನ (ಆರ್ಥಿಕ ಲಕ್ಷಗಳಲ್ಲಿ)		ಷರಾ
			ಆರ್ಥಿಕ	ಭೌತಿಕ	ಆರ್ಥಿಕ	ಭೌತಿಕ	ಆರ್ಥಿಕ	ಭೌತಿಕ	
1	**2403–00–106–0–03 (422)**	ಜಾನುವಾರು ಆಕಸ್ಮಿಕ ಮರಣ	**0.80**	**8**	**0.80**	**8**	**0.70**	**7**	
2	**2403–00–106–0–03 (423)**	ಜಾನುವಾರು ಆಕಸ್ಮಿಕ ಮರಣ	**0.90**	**9**	**0.90**	**9**	**0.80**	**8**	

ಪಶು ಪಾಲನಾ ಇಲಾಖೆ ಕೊಡಗು ಮಡಿಕೇರಿ ಜಾನುವಾರು ಗಣತಿ–2012(19)

ಕ್ರ. ಸಂ.	ತಾಲ್ಲೂಕು	ಸ್ಥಳೀಯ	ವಿದೇಶಿ ತಳಿ	ಮಿಶ್ರ ತಳಿ	ಎಮ್ಮೆ ಗಳು	ಒಟ್ಟು	ಕುರಿ ಗಳು	ಆಡು ಗಳು	ಹಂದಿ ಗಳು	ಮೊಲ ಗಳು	ನಾಯಿ ಗಳು	ಇತರೆ	ಒಟ್ಟು	ಕೋಳಿ ಗಳು
1	ಮಡಿಕೇರಿ	15207	–	6882	3443	25532	69	1274	7880	474	16231	4	51464	52406
2	ಸೋಮವಾರಪೇಟೆ	26097	–	14929	5394	46420	1092	2932	3479	183	14598	18	68723	75917
3	ವಿರಾಜಪೇಟೆ	14291	–	11022	5639	30952	240	3579	5589	66	16302	5	56733	73402
	ಒಟ್ಟು	55595	–	32833	14476	102904	1401	7785	16948	723	47131	27	176920	201725

ಕೊಡಗು ಜಿಲ್ಲೆಯ ಇಲಾಖಾ ಪುನರ್ ರಚನೆಯ ನಂತರ ಪಶುವೈದ್ಯ ಸಂಸ್ಥೆಗಳ ವಿವರ

ಕ್ರಸಂ	ತಾಲ್ಲೂಕು	ಉಪನಿರ್ದೇಶಕರ ಕಛೇರಿ	ಜಿಲ್ಲಾ ಪಾಲಿ ಕ್ಲೀನಿಕ್	ಜಿಲ್ಲಾ ಮಟ್ಟದ ಪಶುವೈದ್ಯ ಆಸ್ಪತ್ರೆ	ತಾಲ್ಲೂಕು ಮಟ್ಟದ ಪಶುವೈದ್ಯ ಆಸ್ಪತ್ರೆ	ಪಶುವೈದ್ಯ ಆಸ್ಪತ್ರೆ	ಪಶು ಚಿಕಿತ್ಸಾಲಯ	ಪ್ರಾಥಮಿಕ ಪಶುಚಿಕಿತ್ಸಾ ಕೇಂದ್ರ	ಜಿಲ್ಲಾ ಕೋಳಿ ಸಾಕಾಣಿಕೆ ತರಬೇತಿ ಕೇಂದ್ರ	ಪ್ರಾದೇಶಿಕ ಕೋಳಿ ವಿಸ್ತರಣಾ ಕೇಂದ್ರ
1	ಮಡಿಕೇರಿ	1	1	1	–	3	4	8	–	–
2	ವೀರಾಜಪೇಟೆ	–	–	–	1	7	9	14	–	1
3	ಸೋಮವಾರಪೇಟೆ	–	–	–	1	5	6	13	1	–
	ಒಟ್ಟು	1	1	1	2	15	22	35	1	1

ಮೀನುಗಾರಿಕೆ ಇಲಾಖೆ

ರಾಜ್ಯ ವಲಯ ಯೋಜನೆಗಳು :

1) ಮೀನು ಸಲಕರಣೆ ಕಿಟ್ಟುಗಳು :– ಈ ಯೋಜನೆಯಡಿ 2019–20 ನೇ ಸಾಲಿನಲ್ಲಿ ರೂ.4.00 ಲಕ್ಷ ಅನುದಾನದಲ್ಲಿ ಶೇ 100 ಸಹಾಯಧನದಲ್ಲಿ ಸಾಮಾನ್ಯ ವರ್ಗದ 40 ಫಲಾನುಭವಿಗಳಿಗೆ ಮೀನು ಸಲಕರಣೆ ಕಿಟ್ಟುಗಳನ್ನು ಉಚಿತವಾಗಿ ನೀಡಲಾಗಿದೆ

2) ತರಬೇತಿ ಮತ್ತು ವಿಸ್ತರಣೆ:– 2019–20 ನೇ ಸಾಲಿಗೆ ಈ ಯೋಜನೆಯಡಿ 0.20 ಲಕ್ಷ ಅನುದಾನ ಬಿಡುಗಡೆಯಾಗಿದ್ದು,

1) ಮೀನು ಕೃಷಿಕರ ದಿನಾಚರಣೆಯನ್ನು ಪ್ರತಿ ವರ್ಷ ಜುಲೈ ತಿಂಗಳನಲ್ಲಿ ಅಚರಿಸಲಾಗುತ್ತಿದ್ದು, 2019–20 ನೇ ಸಾಲಿನಲ್ಲಿ ರೂ.0.20. ಲಕ್ಷ ವೆಚ್ಚದಲ್ಲಿ ಹಾರಂಗಿ ಮೀನುಮರಿ ಉತ್ಪಾದನಾ ಪಲನ ಕೇಂದ್ರದಲ್ಲಿ ಆಚರಿಸಲಾಯಿತು.

3) ಮೀನುಮರಿ ಖರೀದಿಗೆ ಸಹಾಯಧನ :– ಈ ಯೋಜನೆಯನ್ನು 2019–20 ನೇ ಸಾಲಿಗೆ ಇಲಾಖೆಯಿಂದ ಖರೀದಿಸಲಾದ ಮೀನುಮರಿಗಳಿಗೆ 50% ಸಹಾಯಧನ ಪ್ರತಿ ಫಲಾನುಭವಿಗೆ ಅಥವಾ ಗರಿಷ್ಠ ರೂ.5000/– ನೀಡಲಾಗುವುದು.

ಈ ಸಾಲಿನಲ್ಲಿ ಈ ಯೋಜನೆಯಲ್ಲಿ ರೂ.0.52ಲಕ್ಷ ಬಿಡುಗಡೆಯಾಗಿದ್ದು ರೂ.0.51 ಲಕ್ಷ ವೆಚ್ಚವಾಗಿದೆ. 22 ಫಲಾನುಭವಿಗಳು ಸಹಾಯಧನ ಪಡೆದುಕೊಂಡಿರುತ್ತಾರೆ.

4) ಆರ್.ಕೆ.ವಿ.ವೈ ಯೋಜನೆ:– 1) ಈ ಯೋಜನೆಯಡಿ ಮೀನುಗಾರರಿಗೆ ಮೀನುಗಾರಿಕೆ ಸಲಕರಣೆ ಕಿಟ್ ಗಳನ್ನು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿದ ಫಲಾನುಭವಿಗಳಿಗೆ ಉಚಿತವಾಗಿ ವಿತರಣೆ ಮಾಡಲಾಗಿದೆ. ಈ ಯೋಜನೆಯಡಿ 2019–20 ನೇ ಸಾಲಿನಲ್ಲಿ ರೂ.2.00 ಲಕ್ಷ ಅನುದಾನದಲ್ಲಿ ಶೇ 100 ಸಹಾಯಧನದಲ್ಲಿ 20 ಫಲಾನುಭವಿಗಳಿಗೆ ಮೀನು ಸಲಕರಣೆ ಕಿಟ್ಟುಗಳನ್ನು ಉಚಿತವಾಗಿ ನೀಡಲಾಗಿದೆ.

5)ಮತ್ಸ್ಯಕೃಷಿ ಆಶಾಕಿರಣ :– 2019–20 ನೇ ಸಾಲಿನಲ್ಲಿ ಈ ಯೊಜನೆಯನ್ನು ಅನುಷ್ಠಾನಗೊಳಿಸ ಲಾಗುತ್ತಿದ್ದು,ಈ ಯೋಜನೆಯಡಿ ಮೀನು ಉತ್ಪಾದನೆ ಹಾಗೂ ಮೀನುಕೃಷಿಗೆ ಉತ್ತೇಜನ ನೀಡಲು, ಪ್ರತಿ ಹೆಕ್ಟರ್‌ಗೆ 4,000 ಬಲಿತ ಮೀನುಮರಿಗಳನ್ನು ಹಾಗೂ 2ಟನ್ ಕೃತಕ ಆಹಾರವನ್ನು ಖರೀದಿಸಲು ಘಟಕ ವೆಚ್ಚದ ಶೇ.50ರಷ್ಟು ಹಾಗೂ ಗರಿಷ್ಠ ರೂ.27,000 ನೀಡಲಾಗುವುದು.ಈ ಯೋಜನೆಯನ್ನು ಅನುಷ್ಠಾನಗೊಳಿಸಲಾಗಿದ್ದು, ರೂ.0.57ಲಕ್ಷ ಅನುದಾನ ಬಿಡುಗಡೆಯಾಗಿದ್ದು, ರೂ.0.57 ಲಕ್ಷ ವೆಚ್ಚ ಮಾಡಲಾಗಿದೆ. 6 ಫಲಾನುಭವಿಗಳು ಸಹಾಯಧನ ಪಡೆದುಕೊಂಡಿರುತ್ತಾರೆ.

6)ನೀಲಿ ಕ್ರಾಂತಿ ಯೋಜನೆಯ:– ಕೇಂಧ್ರ ಪುರಸ್ಕೃತ ಯೋಜನೆಯಡಿ ಕನಿಷ್ಠ ಅರ್ಧ ಎಕರೆ ಕೆರೆ ನಿರ್ಮಾಣ ಮಾಡಲು ಸಾಮಾನ್ಯ ವರ್ಗದವರಿಗೆ ಶೇಕಡ 40 ರಷ್ಟು ಹಾಗೂ ಪ.ಜಾ/ಪ.ಪಂ/ಮಹಿಳೆಯರಿಗೆ ಶೇಕಡ 60 ರಷ್ಟ ಸಹಾಯಧನವನ್ನು ಕೇಂದ್ರ ಹಾಗೂ ರಾಜ್ಯ ಸರ್ಕಾರದ ಸಹಭಾಗಿತ್ವದಲ್ಲಿ ನೀಡಲಾಗುತ್ತಿದೆ. 2019–20 ನೇ ಸಾಲಿನಲ್ಲಿ ರೂ.1.38 ಲಕ್ಷ ಅನುದಾನ ಬಿಡುಗಡೆಯಾಗಿದ್ದು, ರೂ.1.38 ಲಕ್ಷ ಅನುದಾನ ವೆಚ್ಚವಾಗಿದೆ. ಒಬ್ಬ ಫಲಾನುಭವಿಯು ಸಹಾಯಧನ ಪಡೆದುಕೊಂಡಿರುತ್ತಾರೆ.

2019–20 ನೇ ಸಾಲಿನಲ್ಲಿ ಕೇಂದ್ರ ಪುರಸ್ಕೃತ ನೀಲಿ ಕ್ರಾಂತಿ ಯೋಜನೆಯಡಿಯಲ್ಲಿ ಮೀನು ಮಾರಾಟಕ್ಕಾಗಿ ಮೂರು ಚಕ್ರವಾಹನ ಖರೀದಿಗೆ ಸಹಾಯಧನ ಯೋಜನೆಯಡಿ ರೂ.1,18 ಲಕ್ಷ ಅನುದಾನ ಬಿಡುಗಡೆಯಾಗಿದ್ದು, ರೂ.1.18 ಲಕ್ಷ ಅನುದಾನ ವೆಚ್ಚವಾಗಿದೆ. ಒಬ್ಬ ಫಲಾನುಭವಿಯು ಸಹಾಯಧನ ಪಡೆದುಕೊಂಡಿರುತ್ತಾರೆ.

7)ಗಿರಿಜನ ಉಪಯೋಜನೆಯಡಿ:– ಪರಿಶಿಷ್ಟ ಪಂಗಡ ಫಲಾನುಭವಿಗಳಿಗೆ ನಾಲ್ಕು ಚಕ್ರ ಸಂಚಾರಿ/ರಿಟೇಲ್ ಮೀನು ಖಾದ್ಯಗಳ ಕ್ಯಾಂಟೀನ್ ಸಾಪಿಸಲು ಸಹಾಯಧನ 2019–20 ನೇ ಸಾಲಿನಲ್ಲಿ

ರೂ.7.00 ಲಕ್ಷ ಅನುದಾನ ಬಿಡುಗಡೆಯಾಗಿದ್ದು, ರೂ.7.00 ಲಕ್ಷ ಅನುದಾನ ವೆಚ್ಚವಾಗಿದೆ. ಒಬ್ಬ ಫಲಾನುಭವಿಯು ಸಹಾಯಧನ ಪಡೆದುಕೊಂಡಿರುತ್ತಾರೆ.

ಜಿಲ್ಲಾ ಪಂಚಾಯಿತಿ ಕಾರ್ಯಕ್ರಮಗಳು

1.ಒಳನಾಡು ಮೀನುಗಾರಿಕೆ ಅಭಿವೃದ್ಧಿಗೆ ಸಹಾಯಧನ:– ಈ ಯೋಜನೆಯಡಿ ಜಿಲ್ಲೆಯ ಮೂರು ತಾಲ್ಲೂಕಿನ ಬೇಡಿಕೆ ಅನುಗುಣವಾಗಿ ಮೀನುಮರಿಗಳನ್ನು ವಿವಿಧ ಸರ್ಕಾರಿ ಸ್ವಾಮಿತ್ವದ ಕೇಂದ್ರಗಳಿಂದ ಖರೀದಿ ಮಾಡಿ ಮೀನು ಕೃಷಿಕರಿಗೆ ಸರಬರಾಜು ಮಾಡಲಾಗುವುದು. ಹಾಗೂ ಜಿಲ್ಲೆಯ ಮೀನುಮರಿ ಉತ್ಪಾದನಾ ಕೇಂದ್ರ ಹಾರಂಗಿಯಲ್ಲಿ ವಿವಿಧ ಮೀನು ತಳಿಗಳ ಉತ್ಪಾದನೆ ಹಾಗೂ ಸಾಕಾಣೆ ಮಾಡಿ,ಮೂರು ತಾಲ್ಲೂಕು ಗಳಿಗೆ ಸರಬರಾಜು ಮಾಡಲಾಗುವುದು 50% ಸಹಾಯಧನದಲ್ಲಿ ಹುಲ್ಲುಗೆಂಡೆ ಮೀನುಮರಿಗಳ ವಿತರಣೆ ಹಾಗೂ 100% ಸಹಾಯಧನದಲ್ಲಿ ಸಾಮಾನ್ಯಗೆಂಡೆ ಮೀನುಮರಿಗಳನ್ನು ವಿತರಿಸಲಾಗುವುದು.ವಿ.ಘ.ಯೋ ಮತ್ತು ಗಿ.ಉ.ಯೋ ಯಡಿ ಪರಿಶಿಷ್ಠ ಜಾತಿ ಮತ್ತು ಪರಿಶಿಷ್ಠ ಪಂಗಡಕ್ಕೆ ಸೇರಿದ ಫಲಾನುಭವಿಗಳಿಗೆ ಶೆಕಡ 100 ಸಹಾಯಧನದಲ್ಲಿ ಮೀನುಸಲಕರಣೆ ಕಿಟ್ಟುಗಳನ್ನು ವಿತರಣೆ ಮಾಡಲಾಗುವುದು.

2019–20 ನೇ ಸಾಲಿನಲ್ಲಿ ಈ ಯೋಜನೆಯಡಿ ರೂ.22.00 ಲಕ್ಷ ಅನುದಾನ ಬಿಡುಗಡೆಯಾಗಿದ್ದು ಇದರಲ್ಲಿ ರೂ.5.00 ಲಕ್ಷ ಕಾರ್ಯಕ್ರಮಕ್ಕೆ ನಿಗದಿಯಾಗಿದ್ದು, ರೂ.13.00 ಹಾರಂಗಿ ಕೇಂದ್ರದ ಅದಿಕಾರಿ/ಸಿಬ್ಬಂದಿಗಳ ವೇತನಕ್ಕಾಗಿ,ವಿಶೇಷ ಘಟಕ ಯೋಜನೆಯಡಿ ರೂ.3.00 ಲಕ್ಷ,,ಗಿರಿಜನ ಉಪಯೋಜನೆಯಡಿ ರೂ.1.00ಲಕ್ಷ ನಿಗದಿಯಾಗಿದ್ದು, ರೂ.21.90 ಲಕ್ಷ ವೆಚ್ಚ ಮಾಡಲಾಗಿದೆ.

2. ಮೀನುಮಾರುಕಟ್ಟೆ ನಿರ್ಮಾಣ ಮತ್ತು ಮೀನು ಮರಾಟಕ್ಕೆ ಸಹಾಯಧನ:– ಜಿಲ್ಲೆಯಲ್ಲಿ ಮೀನು ಮಾರಾಟಕ್ಕೆ ಹೆಚ್ಚು ಉತ್ತೇಜನ ನೀಡುವ ನಿಟ್ಟಿನಲ್ಲಿ ಜಿಲ್ಲೆಯ ಮೂರು ತಾಲ್ಲೂಕಿನಿಂದ ಅಯ್ದ 3 ಫಲಾನುಭವಿಗಳ ಗುಂಪಿಗೆ ನಾಲ್ಕು ಚಕ್ರವಾಹನ ಖರೀದಿಗೆರ ರೂ.0.35 ಸಹಾಯಧನ ತ್ರಿಚಕ್ರವಾಹನ ಖರೀದಿಗೆ ರೂ..0.30 ಲಕ್ಷ ಹಾಗೂ ದ್ವಿಚಕ್ರ ವಾಹನ ಖರೀದಿಗೆ ರೂ..0.10 ಲಕ್ಷ ಸಹಾಯಧನ ನೀಡಲಾಗುವುದು.

2019–20 ನೇ ಸಾಲಿನಲ್ಲಿ ಈ ಯೋಜನೆಯಡಿ ರೂ.5.00 ಲಕ್ಷ ಬಿಡುಗಡೆಯಾಗಿದ್ದು ರೂ2.55 ಲಕ್ಷ ವೆಚ್ಚವಾಗಿದೆ. ನಾಲ್ಕು ಚಕ್ರವಾಹನ ಖರೀದಿಗೆ 7 ಫಲಾನುಭವಿಗಳಿಗೆ ರೂ.35000/–ದಂತೆ ದ್ವಿಚಕ್ರವಾಹನ ಖರೀದಿಗಾಗಿ ರೂ.10,000 ದಂತೆ 1ಫಲಾನುಭವಿಗಳಿಗೆ ಒಟ್ಟು, ಈ ಯೋಜನೆಯಡಿ 8 ಆಯ್ದ ಫಲಾನುಭವಿಗಳಿಗೆ ಸಹಾಯಧನ ನೀಡಲಾಗಿದೆ.

3. ಪ್ರದರ್ಶನ ಮತ್ತು ತರಬೇತಿ :– ಈ ಯೋಜನೆಯಡಿ ರೈತರು ಹಾಗೂ ರೈತ ಮಹಿಳೆಯರು ಮೀನುಗಾರಿಕೆಯಲ್ಲಿ ಸಕ್ರಿಯವಾಗಿ ತೊಡಿಗಿಸಿಕೊಳ್ಳುವ ಉದೇಶದಿಂದ ಜಿಲ್ಲೆಯ ಮೂರು ತಾಲ್ಲೂಕಿನ ಅಯ್ದ ಸ್ವಸಹಾಯ ಗುಂಪುಗಳಿಗೆ ಒಂದು ದಿನ ತರಬೇತಿ ಹಾಗೂ ಉಚಿತ ಮೀನುಮರಿಗಳ ವಿತರಣೆ ಮಾಡಲಾಗುವುದು ಹಾಗೂ ಜಿಲ್ಲೆಯಲ್ಲಿ ನಡೆಸುವ ರಾಷ್ಟ್ರೀಯ ಹಬ್ಬಗಳ ಆಚರಣೆ ಕಾರ್ಯಕ್ರಮಗಳಲ್ಲಿ ಜನ ಸಾಮಾನ್ಯರಿಗೆ ಇಲಾಖೆಗೆ ಸಂಬಂಧಿಸಿದ ಯೋಜನೆಗಳ ಬಗ್ಗೆ ಸ್ತಬ್ದ ಚಿತ್ರಗಳ ಮೂಲಕ ಪರಿಚಯಿಸುವುದು.

2019–20 ನೇ ಸಾಲಿನಲ್ಲಿ ಈ ಯೋಜನೆಯಡಿ ರೂ.2.00ಲಕ್ಷ ಬಿಡುಗಡೆಯಾಗಿದ್ದು ರೂ.2.00 ಲಕ್ಷ ವೆಚ್ಚವಾಗಿದೆ. ಮೀನುಗಾರಿಕೆ ಬಗ್ಗೆ ಒಂದು ದಿನದ ತರಬೇತಿ ಕಾರ್ಯಕ್ರಮವನ್ನು, ಸೋಮವಾರಪೇಟೆ ತಾಲ್ಲೂಕಿನಲ್ಲಿ 3 ಹಾಗೂ ಮಡಿಕೇರಿ ತಾಲ್ಲೂಕಿನಲ್ಲಿ 2 ಒಟ್ಟು 7 ಹಮ್ಮಿಕೊಳ್ಳಲಾಗಿತ್ತು.

ರೇಷ್ಮೆ ಇಲಾಖೆ

ಕೊಡಗು ಜಿಲ್ಲೆಯ ಕೃಷಿಕರು, ವಿವಿಧ ವಾಣಿಜ್ಯ ಬೆಳೆಗಳನ್ನು ತಮ್ಮ ಬದುಕಿಗಾಗಿ ಅವಲಂಬಿಸಿದ್ದಾರೆ. ಕಾಫಿ, ಮೆಣಸು, ಏಲಕ್ಕಿ, ಶುಂಠಿ ಹಾಗೂ ತರಕಾರಿ ಕೃಷಿಯನ್ನು ಕೈಗೊಂಡಿರುವುದರ ಜೊತೆಗೆ ಪರ್ಯಾಯ ಬೆಳೆಯಾಗಿ "ರೇಷ್ಮೆ ಕೃಷಿ"ಗೂ ಪ್ರಾಧಾನ್ಯತೆಯನ್ನು ನೀಡುತ್ತಿದ್ದಾರೆ. ರೇಷ್ಮೆ ಅವಲಂಭಿತ ಇತರೆ ಸಾಂಪ್ರದಾಯಿಕ ಪ್ರದೇಶಗಳಂತೆಯೇ ಕೊಡಗಿನ ರೇಷ್ಮೆ ಕೃಷಿಕರು ವಾರ್ಷಿಕವಾಗಿ 5 ರಿಂದ 6 ಬೆಳೆಗಳನ್ನು ಪಡೆಯುತ್ತಿದ್ದಾರೆ. ಕೊಡಗಿನ ಹವಾಮಾನ ಹಾಗೂ ವಾತಾವರಣ ರೇಷ್ಮೆ ಗೂಡು ಉತ್ಪಾದನೆಯಲ್ಲಿ ಅಧಿಕ ಇಳುವರಿ ಪಡೆಯಲು ಪೂರಕವಾಗಿರುತ್ತದೆ. ಜಿಲ್ಲೆಯ ಫಲವತ್ತಾದ ಮಣ್ಣಿನಲ್ಲಿ ಸುಧಾರಿತ ಹೊಸ **'ವಿ–1'** ಹಿಪ್ಪುನೇರಳೆ ತಳಿಯನ್ನು ನಾಟಿ ಮಾಡಿ, ಸಮೃದ್ಧ ಹಾಗೂ ಉತೃಷ್ಟ ಗುಣಮಟ್ಟದ ಹಿಪ್ಪುನೇರಳೆ ಸೊಪ್ಪನ್ನು ಉತ್ಪಾದಿಸಲಾಗುತ್ತಿದೆ. ರೇಷ್ಮೆ ಹುಳು ಸಾಕಣೆ ಉದ್ದೇಶಕ್ಕಾಗಿ "ವಿ–1" ತಳಿ ಹಿಪ್ಪುನೇರಳೆ ಸೊಪ್ಪನ್ನು ಬಳಸುತ್ತಿರುವುದರಿಂದ, ಅತ್ಯುತ್ತಮ ಗುಣಮಟ್ಟದ ಬಿತ್ತನೆಗೆ ಯೋಗ್ಯವಾದ **'ದ್ವಿತಳಿ ರೇಷ್ಮೆ ಗೂಡು'**ಗಳನ್ನು ಉತ್ಪಾದಿಸಲು ಸಾಧ್ಯವಾಗುತ್ತಿದ್ದು, ಮಾರುಕಟ್ಟೆಗಳಲ್ಲಿ ಗರಿಷ್ಠ ದರ ದೊರೆಯುತ್ತಿದೆ.

2019–20 ನೇ ಸಾಲಿನಲ್ಲಿ, ಕೊಡಗು ಜಿಲ್ಲೆಯಲ್ಲಿ, ರೇಷ್ಮೆ ಕೃಷಿಕರ ಅಭಿವೃದ್ಧಿಗಾಗಿ ವಿವಿಧ ಯೋಜನೆಗಳಡಿ ರೂಪಿಸಲಾದ ಕಾರ್ಯಕ್ರಮಗಳು ಹಾಗೂ ಅನುಷ್ಠಾನದಲ್ಲಿ ಸಾಧಿಸಲಾದ ಪ್ರಗತಿ ಅಂಕಿ ಅಂಶಗಳು ಈ ಕೆಳಕಂಡಂತಿವೆ.

1. **ಜಿಲ್ಲಾ ವಲಯ ಕಾರ್ಯಕ್ರಮಗಳು:–**

ಜಿಲ್ಲಾ ವಲಯ ಯೋಜನೆಯಡಿ ರೇಷ್ಮೆ ಬೆಳೆಗಾರರಿಗೆ ಸಹಾಯ ಕಾರ್ಯಕ್ರಮಕ್ಕೆ ನಿಗದಿಪಡಿಸಲಾದ ಅನುದಾನ ಹಾಗೂ ಅನುಷ್ಠಾನ ವಿವರಗಳು:–

(ಆರ್ಥಿಕ ರೂ.ಲಕ್ಷಗಳಲ್ಲಿ)

ಕ್ರ.ಸಂ	ಕಾರ್ಯಕ್ರಮಗಳು	ವಾರ್ಷಿಕ ಗುರಿ		ವಾರ್ಷಿಕ ಸಾಧನೆ		ಶೇಕಡಾ ಸಾಧನೆ
		ಆರ್ಥಿಕ	ಭೌತಿಕ	ಆರ್ಥಿಕ	ಭೌತಿಕ	
1.	**ಜಿಲ್ಲಾ ವಲಯ ಯೋಜನೆ** **2851–00–104–0–30 (100) ರೇಷ್ಮೆ ಬೆಳೆಗಾರರಿಗೆ ಸಹಾಯ** ಎ) ಕ್ಷೇತ್ರೋತ್ಸವ ಆಚರಣೆ ಬಿ) ಹೊಸ ಹಿಪ್ಪುನೇರಳೆ ತೋಟ ಸ್ಥಾಪನೆ. ಸಿ) ಹಿಪ್ಪುನೇರಳೆ ನರ್ಸರಿ ಬೆಳೆಸುವುದು. ಡಿ) ಸೋಂಕು ನಿವಾರಕ ಸರಬರಾಜು.	1.75	ಎ).2 ಬಿ). 2 ಎಕರೆ ಸಿ) 64000 ಡಿ) 100	1.728	ಎ). – ಬಿ). 2.50 ಎಕರೆ ಸಿ) 64000 ಡಿ) 100	98.74%

ರಾಜ್ಯ ವಲಯ ಕಾರ್ಯಕ್ರಮಗಳು: (ಆರ್ಥಿಕ ರೂ. ಲಕ್ಷಗಳಲ್ಲಿ)

ಕ್ರ.ಸಂ	ಕಾರ್ಯಕ್ರಮಗಳು	ವಾರ್ಷಿಕ ಗುರಿ		ವಾರ್ಷಿಕ ಸಾಧನೆ		ಶೇಕಡಾ ಸಾಧನೆ
		ಆರ್ಥಿಕ	ಭೌತಿಕ	ಆರ್ಥಿಕ	ಭೌತಿಕ	
1.	**ರೇಷ್ಮೆ ಅಭಿವೃದ್ಧಿ ಯೋಜನೆ** 1)2851–00–107–1–36(106) ಬಿ) ಪ್ರತ್ಯೇಕ ಹುಳು ಸಾಕುವ ಮನೆ ನಿರ್ಮಾಣಕ್ಕೆ ಸಹಾಯಧನ	5.046	03	5.028	03	99.64
2	ಸಿ) 2851–00–107–1–48(106) ದ್ವಿತಳಿ ಬಿತ್ತನೆ ಗೂಡಿಗೆ ಪ್ರೋತ್ಸಾಹಧನ	1.165	1526 ಕೆಜಿ	1.1472	1576 ಕೆಜಿ 19 ಫಲಾನುಭವಿ	98.47

ಕೊಡಗು ಜಿಲ್ಲೆಯ 3 ತಾಲೂಕುಗಳಲ್ಲಿರುವ ರೇಷ್ಮೆ ಕೃಷಿ ಅಂಕಿ ಅಂಶಗಳು ಈ ಕೆಳಕಂಡಂತಿವೆ.

ಕ್ರ.ಸಂ	ತಾಲೂಕು.	ಒಟ್ಟು ರೇಷ್ಮೆ ವ್ಯವಸಾಯದ ಹಳ್ಳಿಗಳು.	ಒಟ್ಟು ರೇಷ್ಮೆ ಬೆಳೆಗಾರರ ಸಂಖ್ಯೆ.	ಒಟ್ಟು ಹಿಪ್ಪು ನೇರಳೆ ವಿಸ್ತೀರ್ಣ (ಹೆಕ್ಟೇರುಗಳಲ್ಲಿ).	ಒಟ್ಟು ಚಾಕಿ ಮಾಡಲಾದ ರೇಷ್ಮೆ ಮೊಟ್ಟೆಗಳ ಸಂಖ್ಯೆ	ಉತ್ಪಾದಿಸಲಾದ ಒಟ್ಟು ರೇಷ್ಮೆ ಗೂಡುಗಳ ಪ್ರಮಾಣ (ಮೆಟ್ರಿಕ್ ಟನ್‌ಗಳಲ್ಲಿ).
1	ಮಡಿಕೇರಿ	–	–	–	–	–
2	ಸೋಮವಾರಪೇಟೆ	14	27	15.20	6820	4.651
3	ವಿರಾಜಪೇಟೆ	–	–	–	––	–
4	**ಜಿಲ್ಲೆಯ ಒಟ್ಟು**	**14**	**24**	**15.20**	**6820**	**4.651**

ರೇಷ್ಮೆ ಇಲಾಖೆಯ ಸಾಂಸ್ಥಿಕ ಸ್ವರೂಪ:–

ಕೊಡಗು ಜಿಲ್ಲಾ ಪಂಚಾಯತ್ ವ್ಯಾಪ್ತಿಯ ಸಂಸ್ಥೆಗಳು:–

1. ರೇಷ್ಮೆ ಸಹಾಯಕ ನಿರ್ದೇಶಕರವರ ಕಛೇರಿ: ರೇಷ್ಮೆ ಸಹಾಯಕ ನಿರ್ದೇಶಕರು ಜಿಲ್ಲಾ ಮಟ್ಟದ ಅನುಷ್ಠಾನಾಧಿಕಾರಿಗಳಾಗಿದ್ದು, ಜಿಲ್ಲೆಯ 3 ತಾಲೂಕುಗಳ ರೇಷ್ಮೆ ಕೃಷಿ ಚಟುವಟಿಕೆಗಳ ಪರಿಣಾಮಕಾರಿ ಅನುಷ್ಠಾನಗಳನ್ನು ಕೈಗೊಳ್ಳಬೇಕಾಗಿದೆ. ಈ ಹುದ್ದೆಯು ಖಾಲಿ ಇರುತ್ತದೆ.

2. ಮಹಿಳಾ ಪ್ರಾತ್ಯಕ್ಷತಾ ಕ್ಷೇತ್ರ, ಕೂಡಿಗೆ: ಮಹಿಳಾಭಿವೃದ್ಧಿ ಯೋಜನೆಯಡಿ ವಿವಿಧ ಕಾರ್ಯಕ್ರಮಗಳ ಅನುಷ್ಠಾನದ ಉದ್ದೇಶದಿಂದ ನಿರ್ಮಿಸಲಾಗಿರುವ ಕೂಡಿಗೆಯ ಮಹಿಳಾ ಪ್ರಾತ್ಯಕ್ಷತಾ ಕ್ಷೇತ್ರದಲ್ಲಿ ಮಹಿಳೆಯರಿಗೆ ರೇಷ್ಮೆ ಕೃಷಿ ಸಂಬಂಧಿತ ಪ್ರಾಯೋಗಿಕ ತರಬೇತಿ ಕಾರ್ಯಕ್ರಮಗಳನ್ನು ನಡೆಸಲಾಗುತ್ತಿದೆ.

3.ತಾಂತ್ರಿಕ ಸೇವಾ ಕೇಂದ್ರ ಮಡಿಕೇರಿ:– ರೇಷ್ಮೆ ವಿಸ್ತರಣಾಧಿಕಾರಿಗಳು, ಮೇಲಾಧಿಕಾರಿಗಳಾಗಿದ್ದು, ರೇಷ್ಮೆ ಪ್ರದರ್ಶಕರುಗಳು ವಿಸ್ತರಣಾ ಕಾರ್ಯ ಕೈಗೊಳ್ಳುತ್ತಾರೆ. ಆದರೆ ಈ ಎಲ್ಲಾ ಹುದ್ದೆಗಳು ಖಾಲಿ ಇರುತ್ತದೆ.

4. ತಾಂತ್ರಿಕ ಸೇವಾ ಕೇಂದ್ರ ಸೋಮವಾರಪೇಟೆ: ರೇಷ್ಮೆ ವಿಸ್ತರಣಾಧಿಕಾರಿಗಳು ಮೇಲಾಧಿಕಾರಿ ಗಳಾಗಿದ್ದು, ರೇಷ್ಮೆ ಪ್ರದರ್ಶಕರುಗಳು ವಿಸ್ತರಣಾ ಕಾರ್ಯ ನಿರ್ವಹಿಸುತ್ತಾರೆ. ಆದರೆ ಈ ಎಲ್ಲಾ ಹುದ್ದೆಗಳು ಖಾಲಿ ಇರುತ್ತದೆ.

5. ತಾಂತ್ರಿಕ ಸೇವಾ ಕೇಂದ್ರ ಕೊಡ್ಲಿಪೇಟೆ: ಈ ಸಂಸ್ಥೆಯಲ್ಲಿ 2 ರೇಷ್ಮೆ ಪ್ರದರ್ಶಕರು ಹಾಗೂ 1 ರೇಷ್ಮೆ ನಿರೀಕ್ಷಕರು ವಿಸ್ತರಣಾ ಕಾರ್ಯ ನಿರ್ವಹಿಸಿಬೇಕಿದ್ದು ಈ ಎಲ್ಲಾ ಹುದ್ದೆಗಳೂ ಖಾಲಿ ಇರುತ್ತದೆ.

ರಾಜ್ಯ ವಲಯ ಸಂಸ್ಥೆಗಳು:

1. ಸರ್ಕಾರಿ ಪಿ3 ರೇಷ್ಮೆ ಕೃಷಿ ಕ್ಷೇತ್ರ, ಕೂಡಿಗೆ, ಸೋಮವಾರಪೇಟೆ ತಾಲೂಕು: ದ್ವಿತಳಿ ರೇಷ್ಮೆ ಮೊಟ್ಟೆಗಳನ್ನು ಚಾಕಿ ಮಾಡಿಸಿ ದ್ವಿತಳಿ ಬಿತ್ತನೆ ರೇಷ್ಮೆ ಗೂಡುಗಳನ್ನು ಉತ್ಪಾದಿಸಿ ರೇಷ್ಮೆ ಬಿತ್ತನೆ ಕೋಠಿಗಳಿಗೆ ಒದಗಿಸುವ ಕಾರ್ಯ ನಿರ್ವಹಿಸಲಾಗುತ್ತಿದೆ. ಒಬ್ಬ ರೇಷ್ಮೆ ನಿರೀಕ್ಷಕರು, ಕಾರ್ಯನಿರ್ವಹಿಸುತ್ತಿದ್ದಾರೆ.

2.ಸರ್ಕಾರಿ ಪಿ2 ರೇಷ್ಮೆ ಬಿತ್ತನೆ ಕೋಠಿ, ಕೂಡಿಗೆ ಸೋಮವಾರಪೇಟೆ ತಾಲೂಕು: ರೋಗ ರಹಿತ ದ್ವಿತಳಿ ರೇಷ್ಮೆ ಮೊಟ್ಟೆಗಳನ್ನು ಉತ್ಪಾದಿಸಿ, ಬೇಡಿಕೆಗನುಸಾರವಾಗಿ ಮಾರಾಟ ಮಾಡುವ ಕರ್ತವ್ಯ ನಿರ್ವಹಿಸಲಾಗುತ್ತಿದ್ದು, ರೇಷ್ಮೆ ನಿರೀಕ್ಷಕರು ಇದರ ಉಸ್ತವಾರಿ ಅಧಿಕಾರಿಯಾಗಿದ್ದು ಈ ಹುದ್ದೆ ಖಾಲಿ ಇರುತ್ತದೆ. ರೇಷ್ಮೆ ಮೊಟ್ಟೆ ಉತ್ಪಾದನಾ ಕಾರ್ಯವು ಸ್ಥಗಿತಗೊಂಡಿದೆ.

3.ಸರ್ಕಾರಿ ದ್ವಿತಳಿ ರೇಷ್ಮೆ ಗೂಡಿನ ಮಾರುಕಟ್ಟೆ, ಕುಶಾಲನಗರ, ಸೋಮವಾರಪೇಟೆ ತಾಲೂಕು: ಜಿಲ್ಲೆಯ ರೇಷ್ಮೆ ಗೂಡುಗಳ ವಿಲೇವಾರಿ ನಡೆಸಬೇಕಿದ್ದು, ರೇಷ್ಮೆ ಸಹಾಯಕ ನಿರ್ದೇಶಕರು ಈ ಸಂಸ್ಥೆಯ ಅಧಿಕಾರಿಗಳಾಗಿದ್ದಾರೆ. ಆದರೆ ಈ ಹುದ್ದೆ ಖಾಲಿ ಇರುತ್ತದೆ ಹಾಗೂ ರೇಷ್ಮೆ ಗೂಡಿನ ವಹಿವಾಟು ಸ್ಥಗಿತ ಗೊಂಡಿರುತ್ತದೆ.

ರೇಷ್ಮೆ ಇಲಾಖೆ, ರೇಷ್ಮೆ ನಿರ್ದೇಶನಾಲಯದ ಮಾರ್ಗಸೂಚಿಗಳಂತೆಯೇ ಸಮಗ್ರ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.

ಸಾಮಾಜಿಕ ಅರಣ್ಯ ವಿಭಾಗ

ಪ್ರಸ್ತಾವನೆ:–

ಮೂಲತಃ ಅರಣ್ಯ ಇಲಾಖೆಯ ಈ ಸಾಮಾಜಿಕ ಅರಣ್ಯ ವಿಭಾಗವು ಕೊಡಗು ಜಿಲ್ಲಾ ಪಂಚಾಯತ್ ಅವಿಭಾಜ್ಯವಾಗಿ ಕೆಲಸ ನಿರ್ವಹಿಸುತ್ತಿದ್ದು, ಆರ್ಥಿಕವಾಗಿ ಕೊಡಗು ಜಿಲ್ಲಾ ಪಂಚಾಯತ್‌ಗೆ ಅವಲಂಭಿತವಾಗಿರುತ್ತದೆ. ಆದರೆ ಆಡಳಿತ ವ್ಯವಸ್ಥೆಯು ಪೂರ್ಣತರದಲ್ಲಿ ಅರಣ್ಯ ಇಲಾಖಾ ಮುಖ್ಯಸ್ಥರಾದ ಮಾನ್ಯ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಅರಣ್ಯ ಪಡೆ ಮುಖ್ಯಸ್ಥರು), ಬೆಂಗಳೂರುರವರ ಅಧೀನದಲ್ಲಿರುತ್ತದೆ. ಸಾರ್ವಜನಿಕ, ರೈತಾಪಿ ವರ್ಗದವರಲ್ಲಿ ಅರಣ್ಯ ಸಂಪನ್ಮೂಲದ ಹಿತವಾದ ಬಳಕೆ, ಪ್ರಾಣಿ ಪಕ್ಷಿ ಸಂಕುಲಗಳ ಜೀವನದಲ್ಲಿ ಅರಣ್ಯದ ಪಾತ್ರ, ಅರಣ್ಯವನ್ನು ರಕ್ಷಿಸುವ ಬಗ್ಗೆ ಜಾಗೃತಿಯನ್ನು ಮೂಡಿಸಲು ಘನ ಸರ್ಕಾರಿ ಆದೇಶ ಸಂಖ್ಯೆ:ಎಹೆಚ್‌ಎಫ್‌ಇ:461ಎಫ್ ಇಜಿ.81 ದಿನಾಂಕ 13.02.1987ರಲ್ಲಿ ಈ ಸಾಮಾಜಿಕ ಅರಣ್ಯ ವಿಭಾಗವನ್ನು ಹೊಸದಾಗಿ ಸೃಷ್ಟಿಸಿರುವುದಾಗಿದೆ. ಅಂತೆಯೇ ವಿಭಾಗವು ಅಸ್ತಿತ್ವಕ್ಕೆ ಬಂದಾಗಿನಿಂದ ಪ್ರತೀ ವರ್ಷ ವಿವಿಧ ಯೋಜನೆಗಳಲ್ಲಿ ಕೊಡಗು ಜಿಲ್ಲಾ ಪಂಚಾಯತ್ ಕರಡು ಯೋಜನೆಗಳನುಸಾರವಾಗಿ ಲಿಂಕ್ ಡಾಕ್ಯುಮೆಂಟಿನಲ್ಲಿ ಹಂಚಿಕೆಯಾದ ಮಾನ್ಯ ಮುಖ್ಯ ಲೆಕ್ಕಾಧಿಕಾರಿ, ಕೊಡಗು ಜಿಲ್ಲಾ ಪಂಚಾಯತ್, ಮಡಿಕೇರಿಯವರು ಬಿಡುಗಡೆಗೊಳಿಸುವ ಅನುದಾನದಲ್ಲಿ ಮಡಿಕೇರಿ ಸಾಮಾಜಿಕ ಅರಣ್ಯ ವಲಯದ ಹೊದ್ದೂರು ವಾಟೆಕಾಡು, ಸೋಮವಾರಪೇಟೆ ಸಾಮಾಜಿಕ ಅರಣ್ಯ ವಲಯದ ಹುದುಗೂರು ಹಾಗೂ ವಿರಾಜಪೇಟೆ ಸಾಮಾಜಿಕ ಅರಣ್ಯ ವಲಯದ ಕದನೂರು ಇಲಾಖಾ ಸಸ್ಯಕ್ಷೇತ್ರಗಳಲ್ಲಿ ಚಾಲ್ತಿಯಲ್ಲಿರುವ ಸಾಮಾನ್ಯ ಎಸ್.ಎಸ್.ಆರ್. ದರಗಳ ಲೆಕ್ಕಾಚಾರಕ್ಕನ್ವಯ ಬೆಳೆಸುವ 5”x8”, 6”x9”, 8”x12”, 14”x20” ಗಾತ್ರದ ಸಸಿಗಳನ್ನು ಕೊಡಗು ಜಿಲ್ಲಾ ಪಂಚಾಯತ್ ಸಾಮಾನ್ಯ ಸಭೆಯ ಒಮ್ಮತದ ತೀರ್ಮಾನದಂತೆ ಷರತ್ತು ಬದ್ಧ ನಿರ್ಧಾರಿತ ದರದಲ್ಲಿ ಸಸಿಗಳನ್ನು ವಿತರಿಸುವ ಪರಿಪಾಠವು ಮುಂದುವರಿಯುತ್ತಾ ಬಂದಿರುತ್ತದೆ. ಕೊಡಗು ಜಿಲ್ಲೆಯು ಹೆಚ್ಚಾಗಿ ಗುಡ್ಡಗಾಡು ಬೆಟ್ಟಗಳಿಂದ ಆವೃತವಾಗಿದ್ದು, ವ್ಯವಸಾಯಕ್ಕೆ ಹೆಚ್ಚಿನ ಪ್ರಾಧಾನ್ಯತೆಯನ್ನು ನೀಡಲಾಗುತ್ತಿದೆ. ಜಿಲ್ಲೆಯ ಹವಾಮಾನವು ಕಾಫಿ ಕೃಷಿಗೆ ಅನುಕೂಲಕರವಾಗಿದ್ದು, ಕೃಷಿಕರು ತಮ್ಮ ಸ್ವಾಧೀನತಾ ಸ್ಥಳಗಳಲ್ಲಿ ಮುಖ್ಯವಾಗಿ ಕಾಫಿಯನ್ನು ಜೊತೆಗೆ ಉಪ ಬೆಳೆಗಳಾಗಿ ಏಲಕ್ಕಿ, ಕರಿಮೆಣಸು, ಕಿತ್ತಳೆ, ಇತ್ಯಾದಿಗಳನ್ನು ಬೆಳೆಸುತ್ತಾರೆ. ಕಾಫಿ ಕೃಷಿಗೆ ನೆರಳು ನಿಯಂತ್ರಣದ ಸಲುವಾಗಿ ಹಾಗೂ ಆರ್ಥಿಕ ಹಿತವನ್ನು ಮೂಲವಾಗಿರಿಸಿ ಸಿಲ್ವರ್ ಸಸಿಗಳನ್ನು ತೋಟಗಳಲ್ಲಿ ಹೆಚ್ಚಾಗಿ ಬೆಳೆಸುತ್ತಾರೆ. ಈ ಸಸಿಗಳ ಕಡಿತಲೆ, ಸಾಗಾಟದ ಅನುಮತಿಗೆ ಸರ್ಕಾರದಿಂದ ವಿನಾಯಿತಿ ಇರುವುದು ಸಹ ಕಾರಣವಾಗಿರುತ್ತದೆ. ಅಲ್ಲದೇ, ಇಲ್ಲಿಯ ರೈತರು ಭತ್ತದ ಬೆಳೆಗೂ ಅಷ್ಟೇ ಪ್ರಾಮುಖ್ಯತೆಯನ್ನು ನೀಡುತ್ತಾರೆ. ಕೊಡಗು ಜಿಲ್ಲೆಯಲ್ಲಿ ಮೂರು ತಾಲೂಕು ಪಂಚಾಯತ್‌ಗಳಿದ್ದು ಒಟ್ಟು 104 ಗ್ರಾಮ ಪಂಚಾಯತ್‌ಗಳನ್ನು ಒಳಗೊಂಡಿರುತ್ತದೆ. ಇದರಲ್ಲಿ ಮಡಿಕೇರಿ ತಾಲೂಕಿಗೆ 26, ಸೋಮವಾರಪೇಟೆ ತಾಲೂಕಿಗೆ 38 ಹಾಗೂ ವಿರಾಜಪೇಟೆ ತಾಲೂಕಿಗೆ 40 ಗ್ರಾಮ ಪಂಚಾಯತ್‌ಗಳು ಸೇರ್ಪಡೆಯಾಗಿರುತ್ತದೆ. ಹಾಲೀ ಪಂಚಾಯತ್ ಸಹಭಾಗಿತ್ವದ ಎಂ.ಜಿ.ಎನ್.ಅರ್.ಇ.ಜಿ.ಎ. ಯೋಜನೆಯಲ್ಲಿ ಅನುಮೋದಿತ ವಾರ್ಷಿಕ ಕ್ರಿಯಾಯೋಜನೆ ಅನುಸಾರ ಕೊಡಗಿನ ಜನತೆಯ ಬೇಡಿಕೆಯ ಸಿಲ್ವರ್ ಸಸಿಗಳನ್ನು ಬೆಳೆಸಿ ವಿತರಿಸುವುದು ವಾಡಿಕೆಯಲ್ಲಿರುತ್ತದೆ. ಔದ್ಯಮೀಕರಣ ಹಾಗೂ ನಗರೀಕರಣಗಳ ಉನ್ನತೀಕರಣದಿಂದಾಗಿ ವ್ಯತಿರಿಕ್ತ ಪರಿಣಾಮ ಬೀರುತ್ತಲಿರುವುದರಿಂದ ಭೂಮಿಯ ತಾಪಮಾನದಲ್ಲಿ ಹೆಚ್ಚಳ, ಹವಾಮಾನ ವೈಪ್ಯರೀತ್ಯ, ಅತಿವೃಷ್ಟಿ, ಅನಾವೃಷ್ಟಿ, ಜೀವ ವೈವಿಧ್ಯ ನಾಶ ಇತ್ಯಾದಿ ದುಷ್ಪರಿಣಾಮಗಳನ್ನು ಎದುರಿಸುತ್ತಿದ್ದು, ಪರಿಸರ ಸಂರಕ್ಷಣೆ ನೈಸರ್ಗಿಕ ಸಂಪನ್ಮೂಲಗಳ ಸದ್ಬಳಕೆ ಹಾಗೂ ಮಾಲಿನ್ಯ ನಿಯಂತ್ರಣ ಕಾರ್ಯಗಳನ್ನು ಸಮಾರೋಪಾದಿಯಲ್ಲಿ ಹಮ್ಮಿಕೊಂಡು ನಿಸರ್ಗಕ್ಕೆ ಧಕ್ಕೆಯಾಗದಂತೆ ಕ್ರಮ ತೆಗೆದುಕೊಳ್ಳುವುದು ಪ್ರತಿಯೊಂದು ಕ್ಷೇತ್ರದ ಜವಾಬ್ದಾರಿಯಾಗಿದ್ದು, ಅರಣ್ಯ ಇಲಾಖೆಯು ಇದರಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿರುತ್ತದೆ.

ಅರಣ್ಯ ನಿರ್ವಹಣೆ:

ಸಾಮಾಜಿಕ ಅರಣ್ಯ ವಿಭಾಗದಲ್ಲಿ ಪೈಸಾರಿ, ಸಿ ಮತ್ತು ಡಿ, ಗೋಮಾಳ, ಇತರೆ ಅರಣ್ಯೇತರ ಸ್ಥಳಗಳಲ್ಲಿ

ಅರಣ್ಯೀಕರಣಕ್ಕೆ ಅವಕಾಶವಿದ್ದು, ಕ್ಷೇತ್ರ ಸಿಬ್ಬಂದಿಗಳು ಯೋಜನೆ, ಅನುದಾನಗಳ ಅನುಸಾರ ನೆಡುತೋಪು ನಿರ್ಮಾಣ ಕೆಲಸವನ್ನು ಹಮ್ಮಿಕೊಳ್ಳಲಾಗುತ್ತದೆ. ನೆಡುತೋಪುಗಳ ಮೂರನೇ ವರ್ಷ ಪೋಷಣೆಯ ತರುವಾಯು ಪ್ರಾದೇಶಿಕ ವಿಭಾಗಗಳಿಗೆ ನೆಡುತೋಪುಗಳನ್ನು ಹಸ್ತಾಂತರಿಸಲಾಗುತ್ತದೆ.

ವಾಹನ ಸಂಪರ್ಕ ಸಾಧನಗಳು, ಕಟ್ಟಡ ರಸ್ತೆ ಮತ್ತು ಸೇತುವೆ ನಿರ್ವಹಣೆ ಇತ್ಯಾದಿ.

ಈ ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿಯವರಿಗೆ ಮಾನ್ಯ ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಕೇಂದ್ರ ಸ್ಥಾನ), ಬೆಂಗಳೂರು ಇವರ ಅಧಿಕೃತ ಜ್ಞಾಪನಾ ಪತ್ರ ಸಂಖ್ಯೆ: :HQ: CR.57:2009–10 ದಿನಾಂಕ 25.03.2010 ರಂದು ಘನ ಸರ್ಕಾರಿ ಆದೇಶ ಸಂಖ್ಯೆ: ಅಪಜೀ.71: ಎಫ್.ಎ.ಪಿ.: 2009 ದಿನಾಂಕ 30.12.2009ರ ಆದೇಶಕ್ಕನುಸಾರ ಒಂದು ಮಹೀಂದ್ರಾ ಬೊಲೆರೋ LX Bharath Stage IIನ್ನು 2406–01–101–2–20 12th Finance ಲೆಕ್ಕ ಶೀರ್ಷಿಕೆಯಲ್ಲಿ ನೀಡಿರುತ್ತಾರೆ.

ಈ ವಿಭಾಗ ಕಚೇರಿಯಲ್ಲಿ ಬಿ.ಎಸ್.ಎನ್.ಎಲ್. ದೂರವಾಣಿ ಸಂಖ್ಯೆ 228328 ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿಯವರ ಇಲಾಖಾ ವಸತಿ ಗೃಹದಲ್ಲಿ 298328 ದೂರವಾಣಿ ಸಂಖ್ಯೆಯನ್ನು ಹೊಂದಿರುತ್ತದೆ.

ಕೊಡಗು ಜಿಲ್ಲಾ ಪಂಚಾಯತ್ ಕಟ್ಟಡ ಲೆಕ್ಕ ಶೀರ್ಷಿಕೆ 2406–00–101–0–28ರ ಅನುದಾನದಲ್ಲಿ ಮಡಿಕೇರಿ ಕರ್ಣಂಗೇರಿಯ ಕೆ.ಹೆಚ್.ಬಿ.ಕಾಲೋನಿಯಲ್ಲಿ ಉಪ ಅರಣ್ಯ ಸಂರಕ್ಷಣಾಧಿಕಾರಿ, ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಮಡಿಕೇರಿ ವಲಯ ಅರಣ್ಯ ಅಧಿಕಾರಿ, ಅರಣ್ಯ ರಕ್ಷಕರ ಇಲಾಖಾ ವಸತಿ ಗೃಹಗಳು ಇರುತ್ತದೆ. 2019–20 ರ ಸಾಲಿನಲ್ಲಿ ರೂ.20.00 ಲಕ್ಷ ಅನುದಾನದಲ್ಲಿ ಉಪ ಅರಣ್ಯ ಸಂರಕ್ಷಣಾಧಿಕಾರಿಯವರ ವಸತಿ ಗೃಹ ದುರಸ್ಥಿ, ಸಹಾಯಕ ಅರಣ್ಯನ ಸಂರಕ್ಷಣಾಧಿಕಾರಿಯವರ ವಸತಿ ಗೃಹ ದುರಸ್ಥಿ, ವಿಭಾಗದ ಡಿ/ಸಿ ದರ್ಜೆ ನೌಕರರ ವಸತಿ ಗೃಹ ನಿರ್ಮಾಣ, ಮಡಿಕೇರಿ ಸಾಮಾಜಿಕ ಅರಣ್ಯ ವಲಯದ ಉಪ ವಲಯ ಅರಣ್ಯಾಧಿಕಾರಿಯವರ ವಸತಿ ಗೃಹ ದುರಸ್ಥಿ, ಮಡಿಕೇರಿ ಸಾಮಾಜಿಕ ಅರಣ್ಯ ವಿಭಾಗದ ಲಿಖಿತ ಸಹಾಯಕರ ವಸತಿ ಗೃಹ ದುರಸ್ಥಿ, ಸೋಮವಾರಪೇಟೆ ಸಾಮಾಜಿಕ ಅರಣ್ಯ ವಲಯದ ವಲಯ ಅರಣ್ಯಾಧಿಕಾರಿಯವರ ವಸತಿ ಗೃಹ ದುರಸ್ಥಿ, ವಿರಾಜಪೇಟೆ ಸಾಮಾಜಿಕ ಅರಣ್ಯ ವಲಯದ ವಲಯ ಅರಣ್ಯಾಧಿಕಾರಿಯವರ ವಸತಿ ಗೃಹ ದುರಸ್ಥಿ, ಮಡಿಕೇರಿ ಸಾಮಾಜಿಕ ಅರಣ್ಯ ವಲಯದ ವಲಯ ಅರಣ್ಯಾಧಿಕಾರಿಯವರ ವಸತಿ ಗೃಹ ದುರಸ್ಥಿಕಾರ್ಯ ನಿರ್ವಹಿಸಲಾಗಿದೆ. ಹಾಲೀ ಕಟ್ಟಡ ನಿರ್ವಹಣೆ ಕೆಲಸವನ್ನು ಕಾರ್ಯಪಾಲಕ ಅಭಿಯಂತರರು, ಪಿ.ಆರ್.ಇ.ಡಿ., ಕೊಡಗು ಜಿಲ್ಲಾ ಪಂಚಾಯತ್, ಮಡಿಕೇರಿಯವರು ನಿರ್ವಹಿಸಿದ್ದಾರೆ.

ಸಸ್ಯಕ್ಷೇತ್ರಗಳು:–

ಈ ಸಾಮಾಜಿಕ ಅರಣ್ಯ ವಿಭಾಗದ ಮಡಿಕೇರಿ ಸಾಮಾಜಿಕ ಅರಣ್ಯ ವಲಯದಲ್ಲಿ ಹೊದ್ದೂರು ವಾಟೆಕಾಡು, ಸೋಮವಾರಪೇಟೆ ಸಾಮಾಜಿಕ ಅರಣ್ಯ ವಲಯದಲ್ಲಿ ಹುದುಗೂರು, ಹಾಗೂ ವಿರಾಜಪೇಟೆ ಸಾಮಾಜಿಕ ಅರಣ್ಯ ವಲಯದಲ್ಲಿ ಕದನೂರು ಇಲಾಖಾ ಸಸ್ಯಕ್ಷೇತ್ರಗಳು ಇರುತ್ತದೆ.

- ಈ ವಿಭಾಗದ ವ್ಯಾಪ್ತಿಯಲ್ಲಿ 5X8 ಅಳತೆಯ 50,000, 6X9 ಅಳತೆಯ 2,00,000, 8X12 ಅಳತೆಯ 75,000, 10X16 ಅಳತೆಯ 6,000 ವಿವಿಧ ಜಾತಿಯ ಗಿಡಗಳನ್ನು ಬೆಳೆಸಲಾಗಿದ್ದು ಸದರಿ ಗಿಡಗಳನ್ನು ಸಾರ್ವಜನಿಕರಿಗೆ ಮತ್ತು ಸಂಘ ಸಂಸ್ಥೆಗಳಿಗೆ ವಿತರಿಸಲಾಗಿರುತ್ತದೆ.
- ಸಸ್ಯಕ್ಷೇತ್ರಗಳ ಅಭಿವೃದ್ಧಿ ಕೆಲಸಗಳಾದ ಪಾಲಿ ಹೌಸ್ ನಿರ್ಮಾಣ/ ಸಂಗ್ರಹ ಕೊಠಡಿ/ ವರ್ಕಿಂಗ್ ಶೇಡ್ ನಿರ್ಮಾಣ ಕಾಮಗಾರಿ ಕೆಲಸಗಳನ್ನು ಕೈಗೊಳ್ಳಲಾಗಿರುತ್ತದೆ.

2019–20ಸಾಲಿನಲ್ಲಿ ವಿವಿಧ ಯೋಜನೆಗಳಲ್ಲಿ ಪೂರೈಸಿದ ಪ್ರಗತಿ:–

ಈ ವಿಭಾಗದ ಅಧಿಕಾರಿ:ಸಿಬ್ಬಂದಿಗಳ ವೇತನ, ಕಚೇರಿ ವೆಚ್ಚಗಳನ್ನು 2406–00–101–0–26 ಸಾಮಾಜಿಕ ಅರಣ್ಯ ಯೋಜನೇತರ ಲೆಕ್ಕ ಶೀರ್ಷಿಕೆಯಡಿ ಹಾಗೂ ಇಲಾಖಾ ಸಸ್ಯಕ್ಷೇತ್ರಗಳಲ್ಲಿ ಸಸಿಗಳನ್ನು ಬೆಳೆಸಿ ಸಾರ್ವಜನಿಕರಿಗೆ ವಿತರಿಸಲು ಹೊಸದಾಗಿ 2406–00–101–0–27 ಸಾಮಾಜಿಕ ಅರಣ್ಯ ಯೋಜನೆ ಮತ್ತು ಹೊಸ ಕಟ್ಟಡಗಳ ನಿರ್ಮಾಣ ಹಾಗೂ ನಿರ್ವಹಣೆಗೆ 2406–00–101–0–28 ಕಟ್ಟಡ ಲೆಕ್ಕ ಶೀರ್ಷಿಕೆಗಳ

ಅನುದಾನವು ಬಳಕೆಯಲ್ಲಿದೆ. ಹಾಗೂ 2406–00–101–0–27 ಸಾಮಾಜಿಕ ಅರಣ್ಯ ಯೋಜನೆ ಲೆಕ್ಕ ಶೀರ್ಷಿಕೆಯಲ್ಲಿ ಕೊಡಗು ಜಿಲ್ಲಾ ಪಂಚಾಯತ್ ವತಿಯಿಂದ ಬಿಡುಗಡೆಯಾದ ರೂ.88.40 ಲಕ್ಷ ಅನುದಾನದಲ್ಲಿ ವಲಯಗಳ ಮೂರು ಇಲಾಖಾ ಸಸ್ಯಕ್ಷೇತ್ರಗಳಲ್ಲಿ 2018–19ರ ಸಾಲಿನಲ್ಲಿ ಸಾರ್ವಜನಿಕ ವಿತರಣೆಗೆ ಬೆಳೆಸಲಾದ ತಲಾ ಒಟ್ಟು 6.76 ಲಕ್ಷ ಸಸಿಗಳ ಪೋಷಣೆ ಬಾಪ್ತು 15.05/– ರೂ ಹಾಗೂ ರಸ್ತೆ ಬದಿ ನಡೆತೋಪು ಬೆಳೆಸುವ ಕಾಮಗಾರಿಯ ರೂ 3.06/– ಲಕ್ಷ, ಒಟ್ಟು ಬಾಪ್ತು ರೂ. 18.11/–ಲಕ್ಷ ಹಾಗೂ ಸದರಿ ಮೂರು ಇಲಾಖಾ ಸಸ್ಯಕ್ಷೇತ್ರಗಳಲ್ಲಿ 2019–20ರ ಸಾಲಿನಲ್ಲಿ ಎಲ್ಲಾ ವಲಯಗಳಿಂದ 5”X8" ಗಾತ್ರದ ಒಟ್ಟು 0.50 ಲಕ್ಷ ಸಸಿಗಳನ್ನು ಸಾರ್ವಜನಿಕ ವಿತರಣೆಗೆ ಬೆಳೆಸಲು ಒಟ್ಟು ರೂ. 2.41/– ಲಕ್ಷ ಹಾಗೂ 6”X9" ಗಾತ್ರದ ಒಟ್ಟು 2.00 ಲಕ್ಷ ಸಸಿಗಳಿಗೆ ಒಟ್ಟು 14.34/–ಲಕ್ಷ ಹಾಗೂ 8X12 ಗಾತ್ರದ ಒಟ್ಟು 0.75 ಲಕ್ಷ ಸಸಿಗಳಿಗೆ 13.23/– ಲಕ್ಷ ಮೊತ್ತವನ್ನು ವ್ಯಯಿಸಲಾಗಿರುತ್ತದೆ. ಹಾಗೂ ಮೂರು ವಲಯಗಳಲ್ಲಿ ವನಮಹೋತ್ಸವ ಕಾರ್ಯಕ್ರಮಕ್ಕಾಗಿ 10”X16" ಅಳತೆಯ ಒಟ್ಟು 0.06 ಸಾವಿರ ಸಸಿ ಬೆಳೆಸಲು 2.44/– ಲಕ್ಷ ಹಾಗೂ 14”X20" ಅಳತೆಯ ಸಸಿಗಳನ್ನು ಸೋಮವಾರಪೇಟೆ ವಲಯದ ಹಾರಂಗಿ, ಗುಡ್ಡೆ ಹೊಸೂರು, ಯಡವನಾಡು ರಸ್ತೆಬದಿ ಮುಂಗಡ ಕಾಮಗಾರಿಗಾಗಿ ಬೆಳೆಸಲಾಗಿದ್ದು ಅದಕ್ಕೆ 2.00/– ಲಕ್ಷ ವ್ಯಯಿಸಲಾಗಿದೆ. ಮೂರು ಸಾಮಾಜಿಕ ಅರಣ್ಯ ವಲಯ ನರ್ಸರಿಯಲ್ಲಿ ಶೇಡ್ ನೆಟ್ ಪೆಂಡಾಲ್/ ಪೆನ್‌ಸಿಂಗ್ ನಿರ್ಮಾಣ ಹಾಗೂ ಇತರೆ ಕಾಮಗಾರಿ ನಿರ್ವಹಣೆಗೆ ಒಟ್ಟು 15.91 ಲಕ್ಷ, ಸೋಮವಾರಪೇಟೆ ಹಾಗೂ ಮಡಿಕೇರಿ ಇಲಾಖಾ ಸಸ್ಯಕ್ಷೇತ್ರದಲ್ಲಿ ಪಾಲಿ ಹೌಸ್ ನಿರ್ಮಾಣ/ ಸಂಗ್ರಹ ಕೊಠಡಿ/ ವರ್ಕಿಂಗ್ ಶೇಡ್ ನಿರ್ಮಾಣ ಕಾಮಗಾರಿಗೆ 12.00 ಲಕ್ಷಗಳನ್ನು ವ್ಯಯಿಸಲಾಗಿದೆ. ಇಲಾಖಾ ನರ್ಸರಿಯಲ್ಲಿ /ವಸತಿ ಸಮುಮುಚ್ಚಯದಲ್ಲಿ ಅಕ್ಟೋಬರ್, ನವೆಂಬರ್, ಡಿಸೆಂಬರ್, ಜನವರಿ, ಫೆಬ್ರವರಿ, ಮಾರ್ಚ್ ತಿಂಗಳಲ್ಲಿ ಕಾವಲುಗಾರ ಕೆಲಸಕ್ಕೆ 3.90/– ಲಕ್ಷ ರೂ ವ್ಯಯಿಸಲಾಗಿದೆ.

ಕೃಷಿ ಇಲಾಖೆ

ಮಳೆ : ಕೊಡಗು ಜಿಲ್ಲೆಯ ವಾರ್ಷಿಕ ಸರಾಸರಿ ವಾಡಿಕೆ ಮಳೆ 2868.8 ಎಂ.ಎಂ ಇದ್ದು, 2019ರ ಅಂತ್ಯಕ್ಕೆ 2969.2 ಎಂ.ಎಂ ಮಳೆಯಾಗಿರುತ್ತದೆ. ಕಳೆದ 2018ನೇ ಸಾಲಿನಲ್ಲಿ 3689.8 ಎಂ.ಎಂ ಮಳೆಯಾಗಿರುತ್ತದೆ.

ಬಿತ್ತನೆ : 2019–20ನೇ ಮುಂಗಾರು ಹಂಗಾಮಿನಲ್ಲಿ ಭತ್ತ 30500 ಹೆಕ್ಟೇರ್, ಮುಸುಕಿನ ಜೋಳ 4000 ಒಟ್ಟು 34500 ಹೆಕ್ಟೇರ್ ಆಹಾರ ಬೆಳೆ ಬೆಳೆಯುವ ಗುರಿಗೆ ಕ್ರಮವಾಗಿ ಭತ್ತ 22122 ಹೆಕ್ಟೇರ್, ಮುಸುಕಿನ ಜೋಳ 3101 ಹೆಕ್ಟೇರ್‌ನಲ್ಲಿ ಬೆಳೆಯಲಾಗಿದ್ದು, ಶೇ. 73.11 ರಷ್ಟು ಪ್ರಗತಿಯಾಗಿರುತ್ತದೆ.

ಬಿತ್ತನೆ ಬೀಜ : 2019–20 ರ ಮುಂಗಾರು ಹಂಗಾಮಿನಲ್ಲಿ ಕೃಷಿ ಇಲಾಖೆಯಿಂದ ರೈತರಿಗೆ ರೈತ ಸಂಪರ್ಕ ಕೇಂದ್ರ ಮತ್ತು ಸಹಕಾರ ಸಂಘಗಳ ಮುಖಾಂತರ ರಿಯಾಯಿತಿ ದರದಲ್ಲಿ 3341 ಜನರೈತರಿಗೆ 2216.8 ಕ್ವಿಂಟಾಲ್ ಭತ್ತ ಮತ್ತು ಮುಸುಕಿನ ಜೋಳ ಬಿತ್ತನೆ ಬೀಜಗಳನ್ನು ವಿತರಿಸಿ, ರೂ. 24.51 ಲಕ್ಷ ಸಹಾಯಧನಕ್ಕಾಗಿ ವೆಚ್ಚ ಮಾಡಲಾಗಿದೆ.

ರಸಗೊಬ್ಬರ : 2019–20ನೇ ಸಾಲಿಗೆ 65412.00 ಮೆ.ಟನ್ ವಿವಿಧ ರಸಗೊಬ್ಬರಗಳ ಸರಬರಾಜು ಆಗಿ ವಿತರಣೆಯಾಗಿರುತ್ತದೆ.

ಆತ್ಮಯೋಜನೆ : ಕೃಷಿ, ತೋಟಗಾರಿಕೆ, ಪಶುಸಂಗೋಪನೆ, ಜಲಾನಯನ ಹಾಗೂ ರೇಷ್ಮೆ ಇಲಾಖೆಗಳ ಸಹಯೋಗದಲ್ಲಿ ಅನುಷ್ಠಾನಗೊಳಿಸಲಾಗುತ್ತಿದ್ದು, ರೂ. 73.82 ಲಕ್ಷ ವೆಚ್ಚ ಮಾಡಲಾಗಿದೆ.

ಮಣ್ಣಿನ ಸತ್ವ ಹೆಚ್ಚಿಸುವಿಕೆ : ಕೊಡಗು ಜಿಲ್ಲೆಯ ಮಣ್ಣು ಹುಳಿ ಮಣ್ಣಾಗಿದ್ದು ರಸಸಾರ ಮಟ್ಟ (PH) ಕಡಿಮೆ ಇದ್ದು, ಮಣ್ಣಿನ ಹುಳಿ ಅಂಶವನ್ನು ಹೋಗಲಾಡಿಸಿ ಮಣ್ಣನ್ನು ಕೃಷಿ ಯೋಗ್ಯವಾದ ಮಣ್ಣನ್ನಾಗಿಸಲು ಡೋಲೋಮೈಟ್ ಕೃಷಿ ಸುಣ್ಣ ಹಸಿರೆಲೆ ಗೊಬ್ಬರದ ಬೀಜ, ಲಘು ಪೋಷಕಾಂಶ, ಎರೆಹುಳು ಗೊಬ್ಬರಗಳನ್ನು 3673 ಹೆ. ಪ್ರದೇಶದ ರೈತರಿಗೆ ವಿತರಿಸಲಾಗಿದ್ದು, ರೂ. 23.55 ಲಕ್ಷ ವೆಚ್ಚ ಮಾಡಲಾಗಿದೆ.

ಕೃಷಿ ಯಂತ್ರೋಪಕರಣಗಳ ವಿತರಣೆ : ಕೃಷಿ ಕಾರ್ಮಿಕರ ಕೊರತೆ ನೀಗಿಸಲು 1 ಫಲಾನುಭವಿಗಳಿಗೆ ಸಣ್ಣ ಟ್ರ್ಯಾಕ್ಟರ್, 31 ಫಲಾನುಭವಿಗಳಿಗೆ ಪವರ್ ಟಿಲ್ಲರ್, 211 ಫಲಾನುಭವಿಗಳಿಗೆ ಡೀಸೆಲ್ ಪಂಪ್‌ಸೆಟ್, 178 ಫಲಾನುಭವಿಗಳಿಗೆ ನಾಟಿ ಮತ್ತು ಬಿತ್ತನೆಯಂತ್ರ, 1163 ಪವರ್ ಸ್ಪ್ರೇಯರ್, 449 ವೀಡ್ ಕಟ್ಟರ್ ಹಾಗೂ ಒಕ್ಕಣೆ ಮಾಡಲು ಅನುಕೂಲವಾಗುವಂತೆ 426 ಫಲಾನುಭವಿಗಳಿಗೆ ಟಾರ್ಪಾಲ್‌ಗಳನ್ನು ಸಹಾಯಧನದಲ್ಲಿ ವಿತರಿಸಲಾಗಿದೆ.

ಕೃಷಿ ಭಾಗ್ಯಯೋಜನೆ : ಕೃಷಿ ಬೆಳೆಗಳಿಗೆ ಸಂಧಿಗ್ಧ ಪರಿಸ್ಥಿತಿಯಲ್ಲಿ ನೀರನ್ನು ಒದಗಿಸಲು 1300 ಕೃಷಿ ಹೊಂಡಗಳನ್ನು ನಿರ್ಮಿಸಲು ಸಹಾಯಧನ ನೀಡಲಾಗಿರುತ್ತದೆ.

ಕರಾವಳಿ ಪ್ಯಾಕೇಜ್ : ಕರಾವಳಿ ಮತ್ತು ಮಲೆನಾಡು ಪ್ರದೇಶದಲ್ಲಿ ಭತ್ತ ಬೆಳೆಯ ಸುಧಾರಿತ ತಾಂತ್ರಿಕತೆಗಳ ಬಗ್ಗೆ ರೈತರಿಗೆ ಅರಿವು ಮೂಡಿಸಿ ಭತ್ತದ ಕೃಷಿ ಕೈಗೊಳ್ಳಲು/ಉತ್ತೇಜಿಸಲು ಸುಧಾರಿತ ಬೇಸಾಯ ಕ್ರಮಗಳನ್ನು (ನೇರ ಕೂರಿಗೆ ಬಿತ್ತನೆ/ ಡ್ರಂ ಸೀಡರ್‌ನಿಂದ ಬಿತ್ತನೆ/ಯಾಂತ್ರೀಕೃತ ನಾಟಿ) ಸ್ಥಳೀಯ ತಳಿಗಳೊಂದಿಗೆ ಅಳವಡಿಸಿ (ಉದಾ: ಕೆಪು ಅಕ್ಕಿ, ಕರಿ ಕಗ್ಗ, ಬಿಳಿ ಕಗ್ಗ ಇತ್ಯಾದಿ) ಉತ್ತಮ ಇಳುವರಿ ಮತ್ತು ಆದಾಯವನ್ನು ಪಡೆಯುವಂತೆ ಉತ್ತೇಜನ ನೀಡಲು ರೈತರ ಖಾತೆಗೆ ನೇರವಾಗಿ ಪ್ರೋತ್ಸಾಹಧನ ವರ್ಗಾಯಿಸುವುದು.

ಭತ್ತ ಬೆಳೆಗಾರರ ಸಾಮಾಜಿಕ, ಆರ್ಥಿಕ ಪರಿಸ್ಥಿತಿ ಸುಧಾರಿಸಲು ಮತ್ತು ಭತ್ತದ ಕ್ಷೇತ್ರ ಹಾಗೂ ಉತ್ಪಾದಕತೆಯನ್ನು ಹೆಚ್ಚಿಸುವ ನಿಟ್ಟಿನಲ್ಲಿ ಹಾಗೂ ಮಳೆಯಾಶ್ರಿತ ಭತ್ತದ ಬೆಳೆಗಾರರಿಗೆ ಉತ್ತೇಜನ ನೀಡಲು ರಾಜ್ಯ ಸರ್ಕಾರವು ಕರಾವಳಿ ಮತ್ತು ಮಲೆನಾಡು ರೈತರನ್ನು ಉತ್ತಮವಾಗಿ ಭತ್ತವನ್ನು ಬೆಳೆಯಲು ಪ್ರೇರೇಪಿಸಲು

ಹೆಕ್ಟೇರ್‌ಗೆ ರೂ. 7500/–ಗಳಂತೆ ಪ್ರೋತ್ಸಾಹಧನವನ್ನು "ಕರಾವಳಿ ಪ್ಯಾಕೇಜ್" ಎನ್ನುವ ಕಾರ್ಯಕ್ರಮದ ಮೂಲಕ ನೀಡಲು ಉದ್ದೇಶಿಸಲಾಗಿರುತ್ತದೆ.

2019–20ನೇ ಸಾಲಿನಲ್ಲಿ ಸದರಿ ಯೋಜನೆಯಡಿ 9.50 ಲಕ್ಷ ಸಹಾಯಧನಕ್ಕಾಗಿ ವೆಚ್ಚ ಮಾಡಲಾಗಿರುತ್ತದೆ.

ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆ : 2019–2020 ನೇ ಸಾಲಿನಲ್ಲಿ ಸಂಧಿಗ್ಧ ಪರಿಸ್ಥಿತಿಯಲ್ಲಿ ನೀರನ್ನು ಒದಗಿಸಲು ಹಾಗೂ ನೀರಿನ ಮಿತ ಬಳಕೆಗಾಗಿ, ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆಯಡಿ ಘಒಟ್ಟು 2749 ಸಂ. ತುಂತುರು ನೀರಾವರಿ ಘಟಕಗಳನ್ನು ಸಹಾಯಧನದಡಿ ವಿತರಿಸಲಾಗಿರುತ್ತದೆ.

ವಿವಿಧ ಯೋಜನೆಗಳ ಪ್ರಗತಿ : 2019–20ನೇ ಸಾಲಿನಲ್ಲಿ ತಾಲ್ಲೂಕು ಪಂಚಾಯತ್, ಜಿಲ್ಲಾವಲಯ, ರಾಜ್ಯ ವಲಯಗಳೆಂಬ ಹಾಗೂ ಕೇಂದ್ರ ವಲಯ/ಪುರಸ್ಕೃತ ನಾಲ್ಕು ಹಂತದ ಯೋಜನೆಗಳಿದ್ದು, ಎಲ್ಲಾ ಯೋಜನೆಗಳು ಸೇರಿ ರೂ. 1505.42 ಲಕ್ಷ ಗುರಿ ಇದ್ದು, ರೂ. 1765.15ಲಕ್ಷ ಬಿಡುಗಡೆಯಾಗಿದ್ದು, ರೂ. 1685.14ಲಕ್ಷ ಪ್ರಗತಿ ಸಾಧಿಸಲಾಗಿದ್ದು, ಶೇ. 95.47 ಪ್ರಗತಿ ಸಾಧಿಸಲಾಗಿದೆ.

ಕೃಷಿ ಇಲಾಖೆ ವತಿಯಿಂದ ಅನುಷ್ಠಾನಗೊಳಿಸುತ್ತಿರುವ ಜಿಲ್ಲಾ ಪಂಚಾಯತ್ ಯೋಜನೆಗಳ ವಿವರ :

1. ರೈತರಿಗೆ ಸಹಾಯ: ಈ ಯೋಜನೆಯಲ್ಲಿ ಬೆಳೆಗಳನ್ನು ಬಾಧಿಸುವ ಕೀಟ/ರೋಗಗಳ ನಿರ್ವಹಣೆಗಾಗಿ ಶೇ.50ರ ರಿಯಾಯಿತಿ ದರದಲ್ಲಿ ರೈತರಿಗೆ ಸಸ್ಯ ಸಂರಕ್ಷಣಾ ಔಷಧಿ ಹಾಗೂ ಕೈಚಾಲಿತ ಸಸ್ಯ ಸಂರಕ್ಷಣಾ ಉಪಕರಣಗಳನ್ನು ವಿತರಿಸಲಾಗುವುದು.
2. **ಕೃಷಿ ಜಾತ್ರೆ ಮತ್ತು ವಸ್ತು ಪ್ರದರ್ಶನ:** ರೈತ ಬಾಂಧವರಿಗೆ ಆಧುನಿಕ ಕೃಷಿ ತಾಂತ್ರಿಕತೆಯನ್ನು ಹಾಗೂ ಇಲಾಖಾ ಯೋಜನಾ ಕಾರ್ಯಕ್ರಮಗಳನ್ನು ಪರಿಚಯಿಸುವ ಉದ್ದೇಶದಿಂದ ಗ್ರಾಮಾಂತರ ಪ್ರದೇಶಗಳಲ್ಲಿ ನಡೆಯುವ ಜಾತ್ರೆ, ಮೇಳ ಇತ್ಯಾದಿಗಳಲ್ಲಿ ಇಲಾಖಾ ಕಾರ್ಯಕ್ರಮ ಹಾಗೂ ರೈತರಿಗೆ ದೊರೆಯುವ ಸವಲತ್ತುಗಳನ್ನು ಬಿಂಬಿಸುವ ವಸ್ತು ಪ್ರದರ್ಶನಗಳನ್ನು ಏರ್ಪಡಿಸಿ ಕೃಷಿ ಯಂತ್ರೋಪಕರಣಗಳ ಬಗ್ಗೆ ರೈತರಿಗೆ ಅರಿವು ಮೂಡಿಸಲು ವಸ್ತುಪ್ರದರ್ಶನಗಳನ್ನು ಏರ್ಪಡಿಸಲಾಗುವುದು.
3. **ವಿಶೇಷ ಘಟಕ ಯೋಜನೆ/ ಗಿರಿಜನ ಉಪ ಯೋಜನೆ:** ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ರೈತರ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸಲು ಪರಿಶಿಷ್ಟ ಜಾತಿ ರೈತರ ಕ್ಷೇಮಾಭಿವೃದ್ಧಿಗಾಗಿ ವಿಶೇಷ ಘಟಕ ಯೋಜನೆ ಹಾಗೂ ಪರಿಶಿಷ್ಟ ಪಂಗಡದ ರೈತರ ಏಳಿಗೆಗಾಗಿ ಗಿರಿಜನ ಉಪ ಯೋಜನೆ ಎಂಬ ಯೋಜನೆಗಳನ್ನು ರೂಪಿಸಲಾಗಿದ್ದು, ಶೇ.100ರ ಸಹಾಯಧನದಲ್ಲಿ ಕೃಷಿ ಪರಿಕರ (ಬಿತ್ತನೆ ಬೀಜ, ರಸಗೊಬ್ಬರ, ಸಸ್ಯ ಸಂರಕ್ಷಣಾ ಔಷಧಿ) ಪೂರೈಕೆ ಹಾಗೂ ಶೇ.90ರ ಸಹಾಯಧನದಲ್ಲಿ ಅಥವಾ ಗರಿಷ್ಠ ಮಿತಿಗೊಳಪಟ್ಟು ಧಾನ್ಯ ಸಂಗ್ರಹಣಾ ಕಣಜ, ಆಧುನಿಕ ಕೃಷಿ ಉಪಕರಣ, ಕೈಚಾಲಿತ ಸಸ್ಯ ಸಂರಕ್ಷಣಾ ಉಪಕರಣ, ಡೀಸೆಲ್/ಸೀಮೆಣ್ಣೆ ಪಂಪ್‌ಸೆಟ್, ಪವರ್ ಟಿಲ್ಲರ್‌ಗಳನ್ನು ವಿತರಿಸಲಾಗುವುದು.
4. **ಇತರೆ ಕೃಷಿ ಯೋಜನೆ:** ಈ ಯೋಜನೆಯಲ್ಲಿ ಕಾರ್ಮಿಕರ ಸಮಸ್ಯೆಯನ್ನು ನೀಗಿಸಿ ಕೃಷಿ ಚಟುವಟಿಕೆಗಳ ಶ್ರಮದಾಯಕ ದುಡಿಮೆಯನ್ನು ತಗ್ಗಿಸಿ ಸಕಾಲದಲ್ಲಿ ಕೃಷಿ ಚಟುವಟಿಕೆಗಳನ್ನು ಕೈಗೊಳ್ಳಲು ಹಾಗೂ ಕೃಷಿಯಲ್ಲಿ ಯಾಂತ್ರೀಕರಣವನ್ನು ಅಳವಡಿಸಿಕೊಳ್ಳಲು ರೈತರನ್ನು ಪ್ರೋತ್ಸಾಹಿಸುವ ಸಲುವಾಗಿ ಶೇ. 50ರ ಸಹಾಯಧನದಲ್ಲಿ ಕೃಷಿ ಯಂತ್ರೋಪಕರಣಗಳಾದ ಪವರ್‌ಟಿಲ್ಲರ್, ಡೀಸೆಲ್ ಪಂಪ್‌ಸೆಟ್, ಎಂಜಿನ್ ಚಾಲಿತ ಸಸ್ಯ ಸಂರಕ್ಷಣಾ ಉಪಕರಣ, ನಾಟಿಯಂತ್ರ, ಒಕ್ಕಣೆಯಂತ್ರ ಇತ್ಯಾದಿಗಳನ್ನು ಕೇಂದ್ರ ಕಛೇರಿಯಿಂದ ಅನುಮೋದಿಸಲ್ಪಟ್ಟ ಸಂಸ್ಥೆಗಳಿಂದ ಖರೀದಿಸಿ ವಿತರಿಸಲಾಗುವುದು. ರೈತರ ಕೃಷಿ ಉಪಕರಣಗಳನ್ನು ಸಹಾಯಧನದಲ್ಲಿ ಪಡೆಯಲು ನಿಗದಿತ ನಮೂನೆಯಲ್ಲಿ ಅವಶ್ಯ ದಾಖಲಾತಿಗಳೊಂದಿಗೆ ಅರ್ಜಿ ಸಲ್ಲಿಸ ಬೇಕಾಗಿದೆ. ರೈತರ ಪಾಲಿನ ಹಣವನ್ನು ರೈತರ ಬ್ಯಾಂಕ್‌ಖಾತೆಗೆ ಜಮೆ ಮಾಡಿ ರಶೀದಿಯನ್ನು ಅರ್ಜಿಯೊಂದಿಗೆ ಲಗತ್ತಿಸಬೇಕಾಗಿದೆ. ನಂತರ ಸಂಸ್ಥೆಯಿಂದ ಕೃಷಿ ಉಪಕರಣಗಳನ್ನು ರೈತರಿಗೆ ಸರಬರಾಜು

ಆದ ನಂತರ ರೈತರಿಂದ ಕೃಷಿ ಉಪಕರಣ ಸುಸ್ಥಿತಿಯಲ್ಲಿದ್ದು, ಉತ್ತಮವಾಗಿ ಕಾರ್ಯನಿರ್ವಹಿಸುತ್ತಿದೆ ಎಂಬ ದೃಢೀಕರಣವನ್ನು ಪಡೆದು ಅವರ ಬ್ಯಾಂಕ್‌ಖಾತೆಗೆ ಸಹಾಯಧನವನ್ನು ಜಮೆ ಮಾಡಲಾಗುವುದು.

5. **ಬೇಸಾಯ ಸಂಬಂಧಿತ ಚಟುವಟಿಕೆ (ಸಸ್ಯ ಚಿಕಿತ್ಸಾಲಯ):** ಈ ಯೋಜನೆಯಲ್ಲಿ ಸುಧಾರಿತ ಕೃಷಿ ತಂತ್ರಜ್ಞಾನದ ವರ್ಗಾವಣೆಯಲ್ಲಿ ಪ್ರಾತ್ಯಕ್ಷಿಕೆಗಳನ್ನು ರೈತರ ಜಮೀನಿನಲ್ಲಿ ಹತ್ತು ಗುಂಟೆ ಪ್ರದೇಶದ ಎರಡು ಪ್ರಾತ್ಯಕ್ಷಿಕೆಗಳನ್ನು ಪ್ರತಿ ರೈತ ಸಂಪರ್ಕ ಕೇಂದ್ರ ವ್ಯಾಪ್ತಿಯಲ್ಲಿ ಏರ್ಪಡಿಸಿ ಕೃಷಿ ತಂತ್ರಜ್ಞಾನ ಮತ್ತು ಪರಿಕರಗಳ ಬಳಕೆ ಕುರಿತ ತಾಂತ್ರಿಕ ಕೌಶಲ್ಯಗಳನ್ನು ರೈತರಿಗೆ ನೀಡಲಾಗುವುದು. ಸ್ವಂತ ಕಟ್ಟಡ ಹೊಂದಿಲ್ಲದ, ರೈತ ಸಂಪರ್ಕ ಕೇಂದ್ರದ ಬಾಡಿಗೆ ವೆಚ್ಚ ಹಾಗೂ ನಿರ್ವಹಣೆ ವೆಚ್ಚಗಳನ್ನು ಅಂದರೆ ರೈತ ಸಂಪರ್ಕ ಕೇಂದ್ರದ ಬಾಡಿಗೆ, ಸ್ವಚ್ಛತೆ, ನೀರಿನ ಶುಲ್ಕ, ವಿದ್ಯುತ್ ಶುಲ್ಕ, ದೂರವಾಣಿ ವೆಚ್ಚ, ದಿನಪತ್ರಿಕೆ ಹಾಗೂ ಲೇಖನ ಸಾಮಾಗ್ರಿಗಳ ವೆಚ್ಚಗಳನ್ನು ಹಾಗೂ ಜಿಲ್ಲಾ ಕೃಷಿ ತರಬೇತಿ ಕೇಂದ್ರದ ಕಛೇರಿ ವೆಚ್ಚವನ್ನು ಭರಿಸಲಾಗುವುದು.

6. **ಕೃಷಿ ಕಟ್ಟಡ ವೆಚ್ಚಗಳು:** ಈ ಯೋಜನೆಯಲ್ಲಿ ಇಲಾಖೆಯ ಸಹಾಯಕ ಕೃಷಿ ನಿರ್ದೇಶಕರ ಕಛೇರಿ ಕಟ್ಟಡ, ರೈತ ಸಂಪರ್ಕ ಕೇಂದ್ರ ಹಾಗೂ ವಸತಿ ಗೃಹಗಳ ದುರಸ್ತಿ ಕಾಮಗಾರಿಗಳ ವೆಚ್ಚವನ್ನು ಭರಿಸಲಾಗುವುದು.

7. **ಸಾವಯವ ಗೊಬ್ಬರ ಯೋಜನೆಗಳು:** ರಾಸಾಯನಿಕ ಕೃಷಿಯಿಂದಾಗಿ ಮಣ್ಣಿನ ಫಲವತ್ತತೆಯು ಕ್ಷೀಣಿಸುತ್ತಾ ಬಂದಿದ್ದು, ಮಣ್ಣಿನಲ್ಲಿ ಸಾವಯವ ಅಂಶವು ಕಡಿಮೆ ಆಗುತ್ತಾ ಬಂದು ಮಣ್ಣಿನ ಆರೋಗ್ಯ ಹದಗೆಟ್ಟಿರುತ್ತದೆ. ಇದರಿಂದ ಬೆಳೆಗಳ ಉತ್ಪಾದನೆ ಮತ್ತು ಉತ್ಪಾದಕತೆಯೂ ಕಡಿಮೆಯಾಗಿ ಆಹಾರದ ಗುಣಮಟ್ಟವು ಕ್ಷೀಣಿಸುತ್ತದೆ. ಆದುದರಿಂದ ರಾಸಾಯನಿಕ ರಹಿತ ಗುಣಮಟ್ಟದ ಆಹಾರ ಉತ್ಪಾದಿಸುವ ದೃಷ್ಟಿಯಿಂದ ಸಾವಯವ ಕೃಷಿಗೆ ಹೆಚ್ಚಿನ ಪ್ರೋತ್ಸಾಹ ನೀಡಲಾಗುತ್ತಿದೆ. ಅದಕ್ಕಾಗಿ ಶೇ. 50ರ ಸಹಾಯಧನದಲ್ಲಿ ಸಾವಯವ ಗೊಬ್ಬರಗಳಾದ ಕರ್ನಾಟಕ ಅಗ್ರಿಗೋಲ್ಡ್ ಹರಳು ಸಂಪದ್ಭರಿತ ಸಾವಯವ ಗೊಬ್ಬರ, ಎರೆಹುಳು ಗೊಬ್ಬರ, ಸಿಟ ಕಾಂಪೋಸ್ಟ್ ಗೊಬ್ಬರ, ಹಸಿರೆಲೆ ಗೊಬ್ಬರ ಬೀಜಗಳನ್ನು ವಿತರಿಸಲಾಗುತ್ತಿದೆ.

8. **ಕೃಷಿ ಕ್ಷೇತ್ರಗಳ ಅಭಿವೃದ್ಧಿ ಕಾರ್ಯಕ್ರಮ:** ಕೂಡಿಗೆಯಲ್ಲಿ ಸರ್ಕಾರಿ ಕೃಷಿ ಕ್ಷೇತ್ರ ಇದ್ದು, ಇಲ್ಲಿ ಬೀಜೋತ್ಪಾದನೆ ತೆಗೆದುಕೊಳ್ಳಲಾಗುತ್ತಿದ್ದು, ಕೃಷಿ ಕ್ಷೇತ್ರದ ಅಭಿವೃದ್ಧಿಗಾಗಿ ಕೃಷಿ ಯಂತ್ರೋಪಕರಣಗಳ ಖರೀದಿ ಹಾಗೂ ಕ್ಷೇತ್ರದ ಸಂರಕ್ಷಣೆ ಮಾಡುವ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಲಾಗುತ್ತಿದೆ.

ಕೃಷಿ ಮಾರಾಟ ಇಲಾಖೆ

ಕೃಷಿ ಮಾರಾಟ ಇಲಾಖೆಯು ರೈತರಿಗೆ ಅನುಕೂಲವಾಗುವಂತಹ ಮೂಲಭೂತ ಮಾರುಕಟ್ಟೆಯಲ್ಲಿನ ಮೂಲಭೂತ ಸೌಕರ್ಯಗಳ ಅಭಿವೃದ್ಧಿಗಾಗಿ ಹಲವು ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುತ್ತಿದೆ.

ಕೊಡಗು ಜಿಲ್ಲಾ ಪಂಚಾಯತ್, 2019–20ನೇ ಸಾಲಿನ ಜಿಲ್ಲಾ ವಲಯ ಯೋಜನೆ ಯಡಿಯಲ್ಲಿ ಕೃಷಿ ಮಾರಾಟ ಇಲಾಖೆಗೆ ರೂ. 20.00 ಲಕ್ಷಗಳ ಅನುದಾನವನ್ನು ಕೋರಲಾಗಿತ್ತು. ಅದರಂತೆ ಜಿಲ್ಲಾ ವ್ಯಾಪ್ತಿಯಲ್ಲಿರುವ ಮೂರು ತಾಲ್ಲೂಕುಗಳ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಮಾರುಕಟ್ಟೆ ಕ್ಷೇತ್ರ ವ್ಯಾಪ್ತಿಯಲ್ಲಿರುವ ಗ್ರಾಮೀಣ ಸಂತೆಗಳಲ್ಲಿ ಅಗತ್ಯ ಮೂಲಭೂತ ಸೌಕರ್ಯಗಳನ್ನು ಒದಗಿಸುವ ನಿಟ್ಟಿನಲ್ಲಿ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲಾಗಿರುತ್ತದೆ.

ಮುಂದುವರೆದು, 2019–20ನೇ ಸಾಲಿನಲ್ಲಿ ಲೆಕ್ಕಶೀರ್ಷಿಕೆ 3475–00–101—0–27 ರಡಿ 20.00 ಲಕ್ಷಗಳು ಬಿಡುಗಡೆಯಾಗಿದ್ದು, ಮೂರು ತಾಲ್ಲೂಕುಗಳಲ್ಲಿ ಗ್ರಾಮೀಣ ಸಂತೆ ಅಭಿವೃದ್ಧಿ ಕಾಮಗಾರಿಗಳಿಗೆ 19,97,000.00ಗಳು ಖರ್ಚಾಗಿರುತ್ತದೆ ಎಂಬ ಮಾಹಿತಿಯನ್ನು ಸಲ್ಲಿಸಿದೆ.

ತೋಟಗಾರಿಕೆ ಇಲಾಖೆ

ಕರ್ನಾಟಕ ರಾಜ್ಯದಲ್ಲಿ ಕೊಡಗು ಜಿಲ್ಲೆಯು ಭೌಗೋಳಿಕವಾಗಿ ವಿಸ್ತೀರ್ಣದಲ್ಲಿ ಹಾಗು ಜನಸಂಖ್ಯೆ ಆಧಾರದ ಮೇಲೆ ಸಣ್ಣ ಜಿಲ್ಲೆಯಾಗಿರುತ್ತದೆ. ಜಿಲ್ಲೆಯ ಒಟ್ಟು ಸಾಗುವಳಿ ಪ್ರದೇಶವಾದ 96373.29 ಹೆಕ್ಟೇರ್ ಪ್ರದೇಶದಲ್ಲಿ ವಾಣಿಜ್ಯ ಮತ್ತು ತೋಟಗಾರಿಕೆ ಬೆಳೆಗಳನ್ನು ಬೆಳೆಯಲಾಗುತ್ತಿದೆ. ಇದರಲ್ಲಿ ತೋಟಗಾರಿಕೆ ಬೆಳೆಗಳಾದ ಕಾಳುಮೆಣಸು, ಏಲಕ್ಕಿ, ಕಿತ್ತಳೆ, ಬಾಳೆ, ಅಡಿಕೆ ಕೊಕೋ, ಗೋಡಂಬಿ',ಶುಂಠಿ ಇತ್ಯಾದಿ ಬೆಳೆಗಳನ್ನು ಬೆಳೆಯಲಾಗುತ್ತಿದೆ. ಇತ್ತೀಚೆಗೆ ಜೇನು ಸಾಕಾಣಿಕೆ ಕೃಷಿಯು ತೋಟಗಾರಿಕೆ ಇಲಾಖೆಗೆ ವರ್ಗಾಯಿಸಿದ್ದು, ರೈತರಿಗೆ ಹೆಚ್ಚಿನ ಪ್ರೋತ್ಸಾಹ ನೀಡಲಾಗುತ್ತಿದೆ. ಜಿಲ್ಲೆಯಲ್ಲಿ ಜೇನುಕೃಷಿಕರ ಸಂಖ್ಯೆ 1479 ಇದ್ದು, ವಾರ್ಷಿಕ ಉತ್ಪಾದನೆ 155.00 ಟನ್‌ಗಳಾಗಿರುತ್ತದೆ.

ಭೌಗೋಳಿಕವಾಗಿ ಜಿಲ್ಲೆಯ ಹವಾಗುಣವು ತೋಟಗಾರಿಕೆ ಬೆಳೆಗಳನ್ನು ಬೆಳೆಯಲು ಹೆಚ್ಚು ಸೂಕ್ತವಾಗಿದ್ದು, ಹೆಚ್ಚಿನ ರೈತರು ತೋಟಗಾರಿಕೆ ಬೆಳೆಗಳನ್ನು ಬೆಳೆಯುತ್ತಿದ್ದಾರೆ. ಇತ್ತೀಚಿನ ವರ್ಷಗಳಲ್ಲಿ ರೈತರು ಸಂರಕ್ಷಿತ ಬೇಸಾಯದಲ್ಲಿ ಪುಷ್ಪ ಕೃಷಿ, ತಾಳೆ ಬೇಸಾಯ, ಜೇನುಸಾಕಾಣಿಕೆ, ಹೈಬ್ರಿಡ್ ತಳಿಯ ಕೊಕೋ ಬೇಸಾಯ ಇತ್ಯಾದಿಗಳಿಗೆ ಹೆಚ್ಚಿನ ಒಲವು ತೋರುತ್ತಿದ್ದಾರೆ. ಜಿಲ್ಲೆಯಲ್ಲಿ ಕರ್ನಾಟಕ ರಾಜ್ಯ ತೋಟಗಾರಿಕೆ ಅಭಿವೃದ್ಧಿ ಏಜೆನ್ಸಿ ಅಧೀನದಲ್ಲಿ ನಾಪೋಕ್ಲು, ಬಳಗುಂದ, ಕೂಡಿಗೆ, ಅರ್ವತ್ತೋಕ್ಲು, ಮಾದಾಪುರ, ಹಾರಂಗಿ, ಮದಲಾಪುರ, ಪೊನ್ನಂಪೇಟೆಗಳಲ್ಲಿ ತೋಟಗಾರಿಕೆ ಕ್ಷೇತ್ರಗಳಿದ್ದು, ಜಿಲ್ಲೆಯ ಬೇಡಿಕೆಗೆ ಅನುಗುಣವಾಗಿ ತೋಟಗಾರಿಕೆ ಬೆಳೆಗಳ ಸಸ್ಯೋತ್ಪಾದನೆ ಮಾಡಿ ರೈತರಿಗೆ ವಿತರಿಸಲಾಗುತ್ತಿದೆ. ಇಲಾಖಾ ವತಿಯಿಂದ ರಾಜಾಸೀಟು ಉದ್ಯಾನವನವನ್ನು ನಿರ್ವಹಿಸಲಾಗುತ್ತಿದ್ದು, ಹೆಚ್ಚಿನ ಸಂಖ್ಯೆಯಲ್ಲಿ ಪ್ರವಾಸಿಗರು ಭೇಟಿ ನೀಡುತ್ತಿದ್ದು, ಜಿಲ್ಲೆಯು ಪ್ರಮುಖ ಪ್ರವಾಸಿ ತಾಣವಾಗಿದೆ.

ಜಿಲ್ಲೆಯಲ್ಲಿ ತರಬೇತಿ ದೃಢಿಕರಣ ಪತ್ರ ನೀಡುವ ರಾಜ್ಯದ ಏಕೈಕ ಜೇನುಕೃಷಿ ತರಬೇತಿ ಕೇಂದ್ರ ಭಾಗಮಂಡಲದಲ್ಲಿದ್ದು, ರೈತರಿಗೆ ಜೇನುಕೃಷಿಯ ಬಗ್ಗೆ 3 ತಿಂಗಳ ತರಬೇತಿ ಕಾರ್ಯಕ್ರಮ ನೀಡಲಾಗುತ್ತಿದೆ. ಜಿಲ್ಲೆಯಲ್ಲಿ ಕೋರಂಗಾಲ, ಭಾಗಮಂಡಲ, ಗಾಳಿಬೀಡು, ಕರಿಕೆ ಕೋಪಟ್ಟಿ ಶಾಂತಳ್ಳಿ, ಮಾದಾಪುರ, ಜಕ್ಕನಹಳ್ಳಿ, ಬಿರುನಾಣಿ, ಕೆದಮುಳ್ಳೂರು ಸೋಮವಾರಪೇಟೆ ಮತ್ತು ಬಿ.ಶೆಟ್ಟಿಗೇರಿಗಳಲ್ಲಿ ಒಟ್ಟು 11 ಜೇನು ಮಧುವನ ಕೇಂದ್ರಗಳನ್ನು ಹೊಂದಿದ್ದು, ರೈತರಿಗೆ ಜೇನು ಕೃಷಿಯ ಬಗ್ಗೆ ಪ್ರಾತ್ಯಕ್ಷತೆ ಘಟಕಗಳನ್ನು ಏರ್ಪಡಿಸಲಾಗುತ್ತಿದೆ. ಜಿಲ್ಲೆಯಲ್ಲಿನ ನೈಸರ್ಗಿಕ ವಾತಾವರಣವು ವಾಣಿಜ್ಯ ಪ್ರಮಾಣದಲ್ಲಿ ಜೇನು ಸಾಕಾಣಿಕೆ, ಜೇನು ಉತ್ಪಾದನೆ ಕೈಗೊಳ್ಳಲು ಪೂರಕವಾಗಿರುತ್ತದೆ. ಗ್ರಾಮೀಣ ಜನರಿಗೆ ಜೇನು ಸಾಕಾಣಿಕೆ ಲಾಭದಾಯಕ ಉಪ ಕಸುಬಾಗಿರುತ್ತದೆ. ಇದರಿಂದ ಅವರ ಆರ್ಥಿಕ ಮಟ್ಟವು ವೃದ್ಧಿಸುತ್ತದೆ. 2019–20ನೇ ಸಾಲಿನಲ್ಲಿ ರಾಷ್ಟ್ರೀಯ ತೊಟಗಾರಿಕೆ ಮಿಷನ್ ಹಾಗೂ ಇನ್ನಿತರ ಯೋಜನೆಯಡಿ ಜೇನುಸಾಕಾಣಿಕೆಗೆ ಪೂರಕವಾಗಿ ಜೇನುಪೆಟ್ಟಿಗೆ, ಜೇನುಕುಟುಂಬ ಮತ್ತು ಜೇನು ಸಂಸ್ಕರಣೆ ಉಪಕರಣಗಳಿಗೆ ಜೇನುಕೃಷಿಕರಿಗೆ ಸಹಾಯಧನ ನೀಡಲಾಗಿರುತ್ತದೆ.

ಜಿಲ್ಲೆಯ ತೋಟಗಾರಿಕೆ ಬೆಳೆಗಳ ಸಮಗ್ರ ಅಭಿವೃದ್ಧಿಗಾಗಿ ಜಿಲ್ಲಾ ಪಂಚಾಯತ್, ತಾಲ್ಲೂಕು ಪಂಚಚಾಯತ್, ರಾಜ್ಯ ವಲಯ ಹಾಗೂ ಕೇಂದ್ರ ಪುರಸ್ಕೃತ ಯೋಜನೆಗಳಾದ ರಾಷ್ಟ್ರೀಯ ತೋಟಗಾರಿಕೆ ಮಿಷನ್, ಪ್ರಧಾನಮಂತ್ರಿ ಕೃಷಿ ಸಿಂಚಾಯ ಯೋಜನೆ, ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ ಇತ್ಯಾದಿಗಳನ್ನು ಅನುಷ್ಠಾನಗೊಳಿಸಲಾಗುತ್ತಿದ್ದು, ಇವುಗಳಡಿ ಜಿಲ್ಲೆಯ ಪ್ರಮುಖ ವಾಣಿಜ್ಯ ಬೆಳೆಗಳಾದ ಕಾಳುಮೆಣಸು, ಕಿತ್ತಳೆ, ಬಾಳೆ, ಕೊಕೋ, ಗೋಡಂಬಿ, ವಾಣಿಜ್ಯ ಪುಷ್ಪಗಳ ಸಮಗ್ರ ಅಭಿವೃದ್ಧಿ ಹಾಗೂ ಜೇನುಸಾಕಾಣಿಕೆಗೆ ಸಹಾಯಧನವನ್ನು ನೀಡಲಾಗುತ್ತಿದೆ. ಇದರಿಂದ ಇವುಗಳ ಪ್ರದೇಶ ವಿಸ್ತರಣೆಯಲ್ಲಿ ಏರಿಕೆಯಾಗಿರುವುದಲ್ಲದೇ ಹೆಚ್ಚಿನ ಇಳುವರಿ ಗಳಿಸಿ ರೈತರು ಆರ್ಥಿಕವಾಗಿ ಅಭಿವೃದ್ಧಿ ಹೊಂದಲು ಅನುವಾಗಿರುತ್ತದೆ.

ಪ್ರಸಕ್ತ ಸಾಲಿನಲ್ಲಿ ಜಿಲ್ಲೆಯಲ್ಲಿ ರಾಜ್ಯವಲಯ ಯೋಜನೆಯಾದ ಸಮಗ್ರ ತೋಟಗಾರಿಕೆ ಅಭಿವೃದ್ಧಿ ಯೋಜನೆ ಅಡಿ ಮಡಿಕೇರಿ ತಾಲ್ಲೂಕಿನ ಬೆಂಗೂರು,ಮೂರ್ನಾಡು ಮತ್ತು ನಾಪೋಕ್ಲು ಗ್ರಾಮದಲ್ಲಿ ಕಾಳುಮೆಣಸು ಬೆಳೆಗೆ ,ಸೋಮವಾರಪೇಟೆ ತಾಲ್ಲೂಕಿನ ಕಿತ್ತಳೆ ಬೆಳೆಗೆ ಮಸಗೋಡು,ಶಾಂತಳ್ಳಿ ಹಾಗೂ ಕಾಳುಮೆಣಸು ಬೆಳೆಗೆ ನಂದಿಗುಂದ ಮೂವತ್ತೋಕ್ಲು ಮತ್ತು ಪೊನ್ನಂಪೇಟೆ ತಾಲ್ಲೂಕಿನ ಕಿತ್ತಳೆ ಬೆಳೆಗೆ ಮೈತಾಡಿ

ಗ್ರಾಮ ಹಾಗೂ ಕಾಳುಮೆಣಸು ಬೆಳೆಗೆ ಕಿರುಗೂರು ಮತ್ತು ನಲ್ಲೂರು ಗ್ರಾಮದಲ್ಲಿ ಗುಚ್ಚಗಳನ್ನು ಆಯ್ಕೆ ಮಾಡಿ ಅಲ್ಲಿ ರೈತರ ಗುಂಪುಗಳನ್ನು ಮಾಡಿ ಸಸ್ಯ ಸಾಮಾಗ್ರಿಯಿಂದ ಮಾರುಕಟ್ಟೆವರೆಗೆ ಎಲ್ಲಾ ಪೂರಕ ಮಾಹಿತಿಗಳನ್ನು ನೀಡಿ ಯೋಜನೆ ಅನುಷ್ಠಾನಗೊಳಿಸಲಾಗಿದ್ದು. ಈ ಬಗ್ಗೆ ರೈತರು ಹೆಚ್ಚಿನ ತೃಪ್ತಿ ವ್ಯಕ್ತಪಡಿಸಿರುತ್ತಾರೆ. 2019–20ನೇ ಸಾಲಿನಲ್ಲಿ ಜಿಲ್ಲೆಯಲ್ಲಿ ವಿವಿಧ ಯೋಜನೆಗಳನ್ನು ಅನುಷ್ಠಾನ ಮಾಡಲಾಗಿದ್ದು ಅವುಗಳ ವಿವರ ಹಾಗೂ ಆರ್ಥಿಕ ಭೌತಿಕ ಸಾಧನೆ ವಿವರಗಳನ್ನು ಕೆಳಗೆ ವಿವರಿಸಿದೆ.

2019–20ನೇ ಸಾಲಿನ ವಿವಿಧ ಯೋಜನೆಗಳಡಿ ಸಾಧಿಸಲಾದ ಪ್ರಗತಿ ವಿವರ

(ರೂ.ಲಕ್ಷಗಳಲ್ಲಿ)

ಕ್ರ.ಸಂ.	ಯೋಜನೆ	2019–20ರ ಯೋಜನೆಯ ಪ್ರಗತಿ			ಭೌತಿಕ ಸಾಧನೆ (ಹೆ/ಸಂ)
		ಅನುದಾನ ನಿಗಧಿ	ಬಿಡುಗಡೆ	ಖರ್ಚು	
1	ಜಿಲ್ಲಾವಲಯ ಮತ್ತು ತಾಲ್ಲೂಕು ಪಂಚಾಯತ್ ಯೋಜನೆ	112.00	112.00	104.53829	36806
2	ರಾಜ್ಯವಲಯ ಯೋಜನೆ	495.2506	321.11	310.57037	12737.92
3	ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆ	242.44	185.4	185.10	5172.62
4	ಸೂಕ್ಷ್ಮ ನೀರಾವರಿ ಯೋಜನೆ	11.82	10.84	10.659630	30.61
	ಒಟ್ಟು	**861.5106**	**629.35**	**610.86829**	**54747.15**

ಕೊಡಗು ಜಿಲ್ಲೆಯ ಭೌಗೋಳಿಕ ವಿಸ್ತೀರ್ಣ 4,10,775 ಹೆಕ್ಟೆರ್ ಪ್ರದೇಶ ಹೊಂದಿದ್ದು, ಇದರಲ್ಲಿ 1,34,597 ಹೆಕ್ಟೆರ್ ಅರಣ್ಯ ಪ್ರದೇಶವಿರುತ್ತದೆ. ಸಾಗುವಳಿಗೆ ಲಭ್ಯವಿರುವ ಭೂಮಿ1,84,862 ಹೆಕ್ಟೇರ್ ನಲ್ಲಿ ಬಿತ್ತನೆಯಾಗಿದ್ದು (ಕೃಷಿ, ತೋಟಗಾರಿಕೆ, ಇತ್ಯಾದಿ)ಜಿಲ್ಲೆಯಲ್ಲಿ ಪ್ರಾಮುಖ್ಯವಾಗಿ ವಾಣಿಜ್ಯ ಬೆಳೆಗಲಾದ ಕಾಫಿ, ಏಲಕ್ಕಿ, ಕಾಳುಮೆಣಸು, ಅಡಿಕೆ, ತೆಂಗು, ಕೊಕೋ, ಗೇರು, ಕಿತ್ತಳೆ, ಬಾಳೆ, ಮತ್ತು ಭತ್ತ ಇತ್ಯಾದಿ ಬೆಳೆಗಳನ್ನು ಬೆಳೆಯಲಾಗುತ್ತಿದೆ. ಇದರಲ್ಲಿ ದ್ವಿದಳ ಧಾನ್ಯಗಳು 360.02 ಹೆಕ್ಟೆರ್ ಆಹಾರ ಧಾನ್ಯಗಳನ್ನು 39,512ಹೆಕ್ಟರ್, ಹಣ್ಣು ಬೆಳೆಗಳು 7716.45 ಹೆಕ್ಟರ್, ತರಕಾರಿ ಬೆಳೆ 751.68 ಹೆಕ್ಟೆರ್ ಪ್ರದೇಶದಲ್ಲಿ ಬೆಳೆಯಲಾಗುತ್ತಿದೆ.

ಜಿಲ್ಲೆಯ ತೋಟಗಾರಿಕೆ ಬೆಳೆಗಳು ವಿಸ್ತೀರ್ಣ ಮತ್ತು ಉತ್ಪಾದನೆ

ಕ್ರ.ಸಂ	ಬೆಳೆಗಳು	ವಿಸ್ತೀರ್ಣ (ಹೆಕ್ಟೇರ್‌ಗಳಲ್ಲಿ)	ಉತ್ಪಾದನೆ (ಮೆಟ್ರಿಕ್ ಟನ್)
1	ಹಣ್ಣಿನ ಬೆಳೆ	7716.45	170604.21
2	ತರಕಾರಿ ಬೆಳೆ	751.68	21188.318
3	ಸಾಂಬಾರು ಬೆಳೆ	72823.68	29495.80
4	ತೋಟದ ಬೆಳೆ	15068.92	16431.36
5	ಹೂವಿನ ಬೆಳೆ	5.29	43.32
6	ಸುಗಂಧಿತ ಸಸ್ಯಗಳು	7.27	62.85
	ಒಟ್ಟು	**96373.29**	**237825.858**

(ಹೂವಿನ ಉತ್ಪಾದಕತೆ ಲಕ್ಷ ಸಂಖ್ಯೆಗಳಲ್ಲಿ)

ವಾಣಿಜ್ಯ ಬೆಳೆಗಳಾದ ಕಾಫಿ. 147643.63 ಹೆ. ಪ್ರದೇಶದಲ್ಲಿ ಬೆಳೆಯಲಾಗುತ್ತಿದೆ. ಜಿಲ್ಲೆಯಲ್ಲಿ ತೋಟಗಾರಿಕೆ ಬೆಳೆಗಳಲ್ಲಿ ಪ್ರಮುಖವಾಗಿ ಕಾಳುಮೆಣಸು, ಏಲಕ್ಕಿ, ಕಿತ್ತಳೆ, ಬಾಳೆ, ಅಡಿಕೆ, ಗೋಡಂಬಿ, ತಾಳೆಬೆಳೆ, ಕೋಕೋ,ಶುಂಠಿ ಇತ್ಯಾದಿ ಬೆಳೆಗಳನ್ನು ಬೆಳೆಯಲಾಗುತ್ತಿದೆ.

ಜಿಲ್ಲೆಯ ಪ್ರಮುಖ ತೋಟಗಾರಿಕೆ ಬೆಳೆಗಳ ಸ್ಥಿತಿಗತಿ :

ಕಾಳುಮೆಣಸು :

ಕಾಳುಮೆಣಸು ನಮ್ಮ ಜಿಲ್ಲೆಯ ಮುಖ್ಯ ಸಾಂಬಾರು ಬೆಳೆಗಳಲ್ಲಿ ಒಂದಾಗಿದ್ದು, ಇದನ್ನು ಜಿಲ್ಲೆಯ ಕಾಫಿ ಬೆಳೆಯಲ್ಲಿ ಮಧ್ಯಂತರ ಬೆಳೆಯಾಗಿ ಬೆಳೆಯಲಾಗುತ್ತಿದ್ದು, ರೈತರಿಗೆ ಪೂರಕ ಬೆಳೆಯಾಗಿ ಅಧಿಕ ಆಧಾಯವನ್ನು ತಂದು ಕೊಡುತ್ತಿದೆ.

ಕೊಡಗು ಜಿಲ್ಲೆಯಲ್ಲಿ ಕಾಳುಮೆಣಸು ಬೆಳೆಯನ್ನು ಮುಖ್ಯವಾಗಿ **70757.04ಹೆ. ಪ್ರದೇಶಗಳಲ್ಲಿ** ಬೆಳೆಯಲಾಗುತ್ತಿದೆ.

ಕ್ರ.ಸಂ.	ತಾಲ್ಲೂಕು	ವಿಸ್ತೀರ್ಣ (ಹೆ.ಗಳಲ್ಲಿ)	ಉತ್ಪಾದನೆ (ಮೆ.ಟನ್‌ಗಳಲ್ಲಿ)	ಉತ್ಪಾದಕತೆ (ಮೆ.ಟನ್/ಹೆ.ಗೆ)
1	ಮಡಿಕೇರಿ	20094.21	4420.73	0.22
2	ಸೋಮವಾರಪೇಟೆ	10710.61	2356.33	0.22
3	ವಿರಾಜಪೇಟೆ	39952.22	8789.49	0.22
	ಒಟ್ಟು	**70757.04**	**15566.55**	**0.66**

ಕಾಳುಮೆಣಸು ಬೆಳೆಯನ್ನು ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆಯಡಿ 2005–06ರಿಂದ ಇಲಾಖಾ ನರ್ಸರಿಗಳಲ್ಲಿ ವಾರ್ಷಿಕ ಅಂದಾಜು 8.50 ಲಕ್ಷ ಗಿಡಗಳನ್ನು ಅಭಿವೃದ್ಧಿ ಪಡಿಸಿ ರೈತರಿಗೆ ಸಹಾಯಧನದ ರೂಪದಲ್ಲಿ ವಿತರಿಸಲಾಗುತ್ತಿದೆ. ಇದರಿಂದ ಇತ್ತೀಚೆಗೆ ಇದರ ವಿಸ್ತೀರ್ಣವು ಹೆಚ್ಚಾಗುತ್ತಾ ಬಂದಿದ್ದು, ರೈತರ ಅರ್ಥಿಕ ಮಟ್ಟವು ಸುಧಾರಿಸಿದೆ.

ಕೊಡಗಿನ ಕಿತ್ತಳೆ: ಕೊಡಗಿನ ಕಿತ್ತಳೆ ತನ್ನದೇ ಆದ ವಿಶಿಷ್ಟ ಬಣ್ಣ, ಆಕಾರ ಮತ್ತು ಸಾದಿಷ್ಟಕರ ರುಚಿಯನ್ನು ಹೊಂದಿರುವುದರಿಂದ ಇತರೇ ತಳಿಗಿಂತ ಇದು ವಿಬಿನ್ನವಾಗಿದೆ. ಈ ತಳಿಯ ತಿರುಳು ಸಿಹಿ ಮತ್ತು ಆಮ್ಲೀಯ ಅಂಶಗಳ ಸಮ್ಮಿಳನವಾಗಿದ್ದು, ಹಣ್ಣುಗಳ ಸಿಪ್ಪೆ ತೆಳುವಾಗಿ ತಿರುಳಿಗೆ ಅಂಟಿಕೊಂಡಿರುವುದು ಇದರ ಮತ್ತೊಂದು ವಿಶೇಷ ಗುಣ. ಕಿತ್ತಳೆಯನ್ನು ಬ್ರಿಟೀಷರು 1830–1840ರ ಅವಧಿಯಲ್ಲಿ ಸುಮಾರು 160 ವರ್ಷಗಳ ಹಿಂದೆ ಕೊಡಗಿನ ಪರ್ವತ ಪ್ರದೇಶಗಳಿಗೆ ಪರಿಚಯಿಸಿದರು. ಪ್ರಾರಂಭದಲ್ಲಿ ಈ ಬೆಳೆಯನ್ನು ಚಿಕ್ಕ ಪ್ರಮಾಣದಲ್ಲಿ ಬೆಳೆಯಲಾಗುತ್ತಿತ್ತು.

ರಾಜ್ಯದ ಅತಿ ಮುಖ್ಯ ಸಾಂಪ್ರದಾಯಿಕ ಕಿತ್ತಳೆ ತಳಿಯಾದ ಕೊಡಗಿನ ಕಿತ್ತಳೆಯ ಅವಸಾನವನ್ನು ತಡೆಗಟ್ಟಲು ತೋಟಗಾರಿಕೆ ಇಲಾಖೆ ಹಾಗೂ ಭಾರತೀಯ ತೋಟಗಾರಿಕೆ ಸಂಸ್ಥೆ, ಚೆಟ್ಟಳ್ಳಿ ಇವರ ಸಂಯುಕ್ತ ಆಶ್ರಯದಲ್ಲಿ 1990ರಿಂದಲೇ ಅನೇಕ ಸಂಶೋಧನೆ ಹಾಗೂ ಅಭಿವೃದ್ಧಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಯಿತು. ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆಯಡಿಯಲ್ಲಿ ಕೊಡಗಿನ ಕಿತ್ತಳೆ ಹಳೇ ತೋಟಗಳ ಪುನಶ್ಚೇತನ ಕಾರ್ಯಕ್ರಮ ಹಾಗೂ ರೋಗ ರಹಿತ ಗಿಡಗಳ ಕಸಿ/ಸಸಿ ಗಿಡಗಳನ್ನು ರೈತರಿಗೆ ಸಹಾಯಧನದ ಮೂಲಕ ಉಚಿತವಾಗಿ ವಿತರಿಸುವ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಇದರ ಫಲವಾಗಿ ಅವಸಾನದ ಅಂಚಿನಲ್ಲಿದ್ದ ಕೊಡಗಿನ ಕಿತ್ತಳೆ ಬೆಳೆಯು ಚೇತರಿಸಿಕೊಂಡಿದ್ದು, ಪುನಶ್ಚೇತನದ ಹಾದಿಯಲ್ಲಿದೆ.

ಕೊಡಗಿನ ಕಿತ್ತಳೆಯ ಅಂತರರಾಷ್ಟ್ರೀಯ ಖ್ಯಾತಿಯನ್ನು ಉಳಿಸಿಕೊಂಡು, ಕೊಡಗಿನ ಭೌಗೋಳಿಕ ಪರಿಸರದಲ್ಲಿ ಸಂಸರಕ್ಷಣೆ ಮಾಡಿ, ವಾಣಿಜ್ಯ ಬೆಳೆಯಾಗಿ ಅಭಿವೃದ್ಧಿ ಪಡಿಸುವ ದೃಷ್ಟಿಯಿಂದ ತೋಟಗಾರಿಕೆ ಇಲಾಖೆಯ ವತಿಯಿಂದ ಈ ತಳಿಯನ್ನು ಭೌಗೋಳಿಕ ಸೂಚ್ಯಾಂಕ ದಾಖಲಾತಿ ಕಾಯ್ದೆ (Geographical

Indications of Goods (Registration & Protection) Act 1999, ಅಡಿಯಲ್ಲಿ ನೊಂದಣಿ ಮಾಡಲಾಗಿದೆ. (Geographical Indication No 33, Certificate No 18 dated:31-3-2005). ಇದರಿಂದಾಗಿ ಪ್ರದೇಶದ ರೈತರು ತಳಿಯನ್ನು ರಕ್ಷಿಸಿ ಅಭಿವೃದ್ಧಿ ಪಡಿಸಿ ಈ ತಳಿಯ Brand development ಮಾಡಿ ರಾಷ್ಟ್ರ ಮತ್ತು ಅಂತರ ರಾಷ್ಟ್ರೀಯ ಮಾರುಕಟ್ಟೆಯಲ್ಲಿ ಮಾನ್ಯತೆ ಪಡೆಯಲು ಅನುವು ಮಾಡಿಕೊಡಲಾಗಿದೆ. ಕೊಡಗು ಜಿಲ್ಲೆಯಲ್ಲಿ ಕಿತ್ತಳೆಯನ್ನು ಸುಮಾರು 3230.96 ಹೆಕ್ಟೇರ್ ಪ್ರದೇಶದಲ್ಲಿ ಬೆಳೆಯಲಾಗುತ್ತಿದೆ.

ಅಡಿಕೆ : ಅಡಿಕೆ (Areca catechu) ನಮ್ಮ ರಾಜ್ಯದ ಮುಖ್ಯ ವಾಣಿಜ್ಯ ಬೆಳೆಗಳಲ್ಲಿ ಒಂದಾಗಿದ್ದು, ನಮ್ಮ ಧಾರ್ಮಿಕ, ಸಾಮಾಜಿಕ, ಮತ್ತು ಸಾಂಪ್ರದಾಯಿಕ ವಿಧಿ ವಿಧಾನಗಳಲ್ಲಿ ಮುಖ್ಯ ಪಾತ್ರವನ್ನು ವಹಿಸಿದೆ. ಇದನ್ನು ರಾಜ್ಯದಿಂದ ಕರಾವಳಿ, ಘಟ್ಟ ಪ್ರದೇಶ ಹಾಗೂ ಮೈದಾನ ಪ್ರದೇಶದಲ್ಲಿ ವ್ಯಾಪಕವಾಗಿ ಬೆಳೆಯಲಾಗುತ್ತಿದೆ. ಕೊಡಗು ಜಿಲ್ಲೆಯಲ್ಲಿ ಅಡಿಕೆಯನ್ನು ಮುಖ್ಯವಾಗಿ 12436.92ಹೆ. ಪ್ರದೇಶಗಳಲ್ಲಿ ಬೆಳೆಯಲಾಗುತ್ತಿದೆ.

ಕ್ರ.ಸಂ.	ತಾಲ್ಲೂಕು	ವಿಸ್ತೀರ್ಣ (ಹೆ.ಗಳಲ್ಲಿ)	ಉತ್ಪಾದನೆ (ಮೆ.ಟನ್‌ಗಳಲ್ಲಿ)	ಉತ್ಪಾದಕತೆ (ಮೆ.ಟನ್/ಹೆ.ಗೆ)
1	ಮಡಿಕೇರಿ	4191.38	5239.225	1.25
2	ಸೋಮವಾರಪೇಟೆ	402.34	502.925	1.25
3	ವಿರಾಜಪೇಟೆ	7843.02	9803.775	1.25
	ಒಟ್ಟು	**12436.74**	**15545.925**	**3.75**

ಇತರೇ ತೋಟಗಾರಿಕೆ ಬೆಳೆಗಳು:– ಜಿಲ್ಲೆಯಲ್ಲಿ ಇವುಗಳಲ್ಲದೆ ಬಾಳೆ ಬೆಳೆಯನ್ನು 4232.24 ಹೆಕ್ಟರ್ ಪ್ರದೇಶದಲ್ಲಿ ಬೆಳೆಯಲಾಗುತ್ತಿದ್ದು ನೇಂದ್ರನ್, ಏಲಕ್ಕಿ ಮತ್ತು ಜಿ 9 ತಳಿಗಳನ್ನು ಹೆಚ್ಚಾಗಿ ಬೆಳೆಯಲಾಗುತ್ತಿದೆ. ಅಲ್ಲದೇ ಸಮಗ್ರ ತೋಟಗಾರಿಕೆ ಅಭಿವೃದ್ಧಿ ಯೋಜನೆ ಅಡಿ ಮಡಿಕೇರಿ ತಾಲ್ಲೂಕಿನ ಪಾಲೂರು, ಸೋಮವಾರಪೇಟೆ ತಾಲ್ಲೂಕಿನ ಮಾದಪಟ್ಟಣ ಮತ್ತು ವಿರಾಜಪೇಟೆ ತಾಲ್ಲೂಕಿನ ಕೊಳತ್ತೂರು–ಬೈಗೂರು ಗ್ರಾಮಗಳಲ್ಲಿ ಗುಚ್ಚ ಮಾದರಿಯಲ್ಲಿ ನೇಂದ್ರನ್ ಮತ್ತು ಬಾಳೆ ತಾಕುಗಳನ್ನು ರೈತ ಗುಂಪುಗಳನ್ನು ರಚಿಸಿ ಪ್ರೋತ್ಸಾಹಿಸಲಾಗಿದೆ. ಇವುಗಳಲ್ಲದೇ ಮಡಿಕೇರಿ ತಾಲ್ಲೂಕಿನ ಸಂಪಾಜೆಯಲ್ಲಿ ಅಡಿಕೆಯಲ್ಲಿ, ಕೊಕೋ ಬೆಳೆಯನ್ನು ಅಂತರ ಬೆಳೆಯಾಗಿ ಇಲಾಖಾವತಿಯಿಂದ ಸಮಗ್ರ ತೋಟಗಾರಿಕೆ ಅಭಿವೃದ್ಧಿ ಯೋಜನೆಯಡಿ ಪ್ರೋತ್ಸಾಹಿಸಲಾಗಿದೆ ಮತ್ತು ಸೋಮವಾರಪೇಟೆ ತಾಲ್ಲೂಕಿನಲ್ಲಿ ಸೀಬೆ, ಕೆಸುವಿನಗೆಡ್ಡೆ ಹಾಗೂ ಮೆಣಸಿನಕಾಯಿ(Chilly) ಬೆಳೆಗಳನ್ನು ಬೆಳೆಯಲಾಗುತ್ತಿದೆ ಮತ್ತು ಶುಂಠಿ ಬೆಳೆಯನ್ನು ಸಹಾ ಗಣನೀಯ ಪ್ರಮಾಣದಲ್ಲಿ ಬೆಳೆಯಲಾಗುತ್ತಿದ್ದು ಇಲಾಖಾವತಿಯಿಂದ ಸದರಿ ಬೆಳೆಯಲ್ಲಿ ಬಳಸಬಹುದಾದ ಯುಕ್ತ ಸಸ್ಯ ಸಂರಕ್ಷಣಾ ಔಷಧಿಗಳ ಬಗ್ಗೆ ಜಾಗೃತಿ ಶಿಬಿರಗಳನ್ನು ಹಮ್ಮಿಕೊಳ್ಳಲಾಗಿದೆ.

ತಾಳೆ ಬೆಳೆಯನ್ನು ಬೆಳೆಯಲು ಜಿಲ್ಲೆಯಲ್ಲಿ ಉತ್ತಮ ವಾತಾವರಣವಿದ್ದು 80.62ಹೆಕ್ಟೇರ್ ಪ್ರದೇಶದಲ್ಲಿ ಪ್ರಮುಖವಾಗಿ ವಿರಾಜಪೇಟೆ ತಾಲ್ಲೂಕಿನಲ್ಲಿ ಬೆಳೆಯಲಾಗುತ್ತಿದೆ. ಸದರಿ ಬೆಳೆಯನ್ನು ಬೆಳೆಗಾರರಿಂದ ಖರೀದಿಸಲು ರುಚಿ ಸೋಯಾ ಇಂಡಸ್ಟ್ರೀಸ್ , ಮೈಸೂರು ಇವರೊಂದಿಗೆ ಮರು ಖರೀದಿ ಒಪ್ಪಂದ ಇದ್ದು ರಾಜ್ಯ ಮಟ್ಟದಲ್ಲಿ ಬೆಲೆ ನಿಗಧಿ ಸಮಿತಿಯ ಬೆಲೆ ನಿಗಧಿ ಆಧರಿಸಿ ರೈತರಿಂದ ನೇರವಾಗಿ ಖರೀದಿಸಲಾಗುತ್ತಿದೆ.

ಜೇನು ಕೃಷಿ:

- ಜಿಲ್ಲೆಯಲ್ಲಿರುವ ಜೇನುಕೃಷಿಕರ ಸಂಖ್ಯೆ–1479
- ಜಿಲ್ಲೆಯಲ್ಲಿರುವ ಜೇನು ಪೆಟ್ಟಿಗೆ/ಕುಟುಂಬಗಳ ಸಂಖ್ಯೆ 52500
- ಜಿಲ್ಲೆಯ ಒಟ್ಟು ಜೇನು ಉತ್ಪಾದನೆ 155.00ಮೆಟ್ರಿಕ್ ಟನ್

- ಜೇನು ತುಪ್ಪದ ಅಂದಾಜು 1 ಕೆ.ಜಿ.ಗೆ ರೂ.300/–ರಂತೆ ವಾರ್ಷಿಕ ಮೌಲ್ಯ 46500.00 ಲಕ್ಷ ರೂ.ಗಳು (ಒಂದು ಜೇನು ಪಟ್ಟಿಗೆಯಿಂದ 3 ಕೆ.ಜಿ. ಜೇನು ತುಪ್ಪವನ್ನು ಅಂದಾಜಿಸಲಾಗಿದೆ)
- ಜಿಲ್ಲೆಯ ರೈತರಿಗೆ ಜೇನುಪೆಟ್ಟಿಗೆ, ಜೇನುಕುಟುಂಬಗಳನ್ನು ವಿವಿಧ ಯೋಜನೆಗಳಲ್ಲಿ ಶೇ.40 ರಿಂದ ಶೇ75ರ ಸಹಾಯಧನದಲ್ಲಿ ಹಾಗೂ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಫಲಾನುಭವಿಗಳಿಗೆ ಶೇ.90 ಸಹಾಯಧನ ವಿತರಿಸಲಾಗಿದೆ.
- ಜಿಲ್ಲೆಯಲ್ಲಿ 11 ಸರ್ಕಾರಿ ಮಧುವನ ಕೇಂದ್ರಗಳಿದ್ದು, ಒಟ್ಟು 39.745 ಎಕರೆ ಪ್ರದೇಶವನ್ನು ಹೊಂದಿದೆ.
- ಭಾಗಮಂಡಲ ಜೇನು ತರಬೇತಿ ಕೇಂದ್ರವನ್ನು ನವೀಕರಿಸಿ ಜಿಲ್ಲೆಯ/ರಾಜ್ಯದ ಆಸಕ್ತ ಜೇನುಕೃಷಿಕರಿಗೆ ವಿವಿಧ ಹಂತಗಳಲ್ಲಿ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುವುದು.

ಜಿಲ್ಲೆಯಲ್ಲಿರುವ ಸರ್ಕಾರಿ ಮಧುವನ ಕೇಂದ್ರಗಳ ವಿವರಗಳು.

ಕ್ರ.ಸ	ತಾಲ್ಲೂಕು	ಕೇಂದ್ರದ ಹೆಸರು	ಮಧುವನ ಕೇಂದ್ರದ ಸ್ಥಳ	ಕಟ್ಟಡಗಳ ವಿವರ	ವಿಸ್ತೀರ್ಣ (ಏಕರೆಗಳಲ್ಲಿ)
1	ಮಡಿಕೇರಿ	ಭಾಗಮಂಡಲ	ಭಾಗಮಂಡಲ	7	6.37
2		ಕೋರಂಗಾಲ	ಕೋರಂಗಾಲ	1	3.60
3		ಗಾಳಿಬೀಡು	ಗಾಳಿಬೀಡು	1	6.00
4		ಕರಿಕೆ	ಕರಿಕೆ	ಇಲ್ಲ	1.40
5		ಕೋಪಟ್ಟಿ	ಕೋಪಟ್ಟಿ	1	0.20
6	ಸೋಮವಾರಪೇಟೆ	ಸೋಮವಾಪೇಟೆ	ಸೋಮವಾರಪೇಟೆ	1	0.04
7		ಜಕ್ಕನಹಳ್ಳಿ	ಜಕ್ಕನಹಳ್ಳಿ	1	5.00
8		ಶಾಂತಳ್ಳಿ	ಶಾಂತಳ್ಳಿ	1	5.00
9		ಮಾದಾಪುರ	ಮಾದಾಪುರ	1	.75
10	ವಿರಾಜಪೇಟೆ	ಬಿ.ಶೆಟ್ಟಿಗೇರಿ	ಬಿ.ಶೆಟ್ಟಿಗೇರಿ	1	5.00
11		ಕೆದಮುಳ್ಳೂರು	ಕೆದಮುಳ್ಳೂರು	1	5.00
12		ಬಿರುನಾಣಿ	ಬಿರುನಾಣಿ	1	1.00
	ಒಟ್ಟು			**17**	**39.36**

ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ

3054–ಸಿ.ಎಮ್.ಜಿ.ಎಸ್.ವೈ:–

ಕೊಡಗು ಜಿಲ್ಲೆಗೆ 2019–20ನೇ ಸಾಲಿನಲ್ಲಿ 650.00 ಲಕ್ಷಅನುದಾನ ಹಂಚಿಕೆಯಾಗಿದ್ದು, ಸದರಿ ಅನುದಾನದಲ್ಲಿ ಒಟ್ಟು 373 ಕಾಮಗಾರಿ ಕೈಗೊಂಡು ಎಲ್ಲಾ ಕಾಮಗಾರಿಗಳು ಪೂರ್ಣಗೊಂಡಿರುತ್ತದೆ, ರೂ: 634.84 ಲಕ್ಷ ವೆಚ್ಚ ಭರಿಸಲಾಗಿದೆ.

3054–ಟಾಸ್ಕ್ ಫೋರ್ಸ್:–

ಕೊಡಗು ಜಿಲ್ಲೆಗೆ 2019–20ನೇ ಸಾಲಿನಲ್ಲಿ 371.42 ಲಕ್ಷ ಅನುದಾನ ಹಂಚಿಕೆಯಾಗಿದ್ದು, ಸದರಿ ಅನುದಾನದಲ್ಲಿ ಒಟ್ಟು 119 ಕಾಮಗಾರಿ ಕೈಗೊಂಡು ಎಲ್ಲಾ ಕಾಮಗಾರಿಗಳು ಪೂರ್ಣಗೊಂಡಿರುತ್ತದೆ, ಪ್ರಸಕ್ತ ಸಾಲಿನಲ್ಲಿ ರೂ:200.00 ಲಕ್ಷ ಬಿಡುಗಡೆಗೊಂಡಿದ್ದು ರೂ. 200.00 ಲಕ್ಷ ವೆಚ್ಚ ಭರಿಸಲಾಗಿದೆ.

ಶಾಸನಬದ್ಧ / ಅನಿರ್ಭಂದಿತಅನುದಾನ:–

ಕೊಡಗು ಜಿಲ್ಲೆಗೆ 2019–20ನೇ ಸಾಲಿನಲ್ಲಿ 478.73 ಲಕ ಅನುದಾನ ಹಂಚಿಕೆಯಾಗಿದ್ದು, ಸದರಿ ಅನುದಾನದಲ್ಲಿ ಒಟ್ಟು 347 ಕಾಮಗಾರಿ ಕೈಗೊಂಡು ಎಲ್ಲಾ ಕಾಮಗಾರಿಗಳು ಪೂರ್ಣಗೊಂಡಿರುತ್ತದೆ, ರೂ. 455.31 ಲಕ್ಷ ವೆಚ್ಚ ಭರಿಸಲಾಗಿದೆ.

2702–ಸಣ್ಣ ನೀರಾವರಿ ಕೆರಗಳು:–

ಕೊಡಗು ಜಿಲ್ಲೆಗೆ 2019–20ನೇ ಸಾಲಿನಲ್ಲಿ 94.33 ಲಕ್ಷ ಅನುದಾನ ಹಂಚಿಕೆಯಾಗಿದ್ದು, ಸದರಿ ಅನುದಾನದಲ್ಲಿ ಒಟ್ಟು 38 ಕಾಮಗಾರಿ ಕೈಗೊಂಡು ಎಲ್ಲಾ ಕಾಮಗಾರಿಗಳು ಪೂರ್ಣಗೊಂಡಿರುತ್ತದೆ, ರೂ: 84.60 ಲಕ್ಷ ವೆಚ್ಚ ಭರಿಸಲಾಗಿದೆ.

2059–ಜಿಲ್ಲಾ ಪಂಚಾಯತ್ ಕಟ್ಟಡಗಳ ವಾರ್ಷಿಕ ನಿರ್ವಹಣೆ:–

ಕೊಡಗು ಜಿಲ್ಲೆಗೆ 2019–20ನೇ ಸಾಲಿನಲ್ಲಿ 84.53 ಲಕ್ಷ ಅನುದಾನ ಹಂಚಿಕೆಯಾಗಿದ್ದು, ಸದರಿ ಅನುದಾನದಲ್ಲಿ ಒಟ್ಟು 17 ಕಾಮಗಾರಿ ಕೈಗೊಂಡು ಎಲ್ಲಾ ಕಾಮಗಾರಿಗಳು ಪೂರ್ಣಗೊಂಡಿರುತ್ತದೆ, ರೂ: 76.21 ಲಕ್ಷ ವೆಚ್ಚ ಭರಿಸಲಾಗಿದೆ.

ರಸ್ತೆ ಹಾಗೂ ಕೆರೆ ಸುರಕ್ಷತೆ:–

ಕೊಡಗು ಜಿಲ್ಲೆಗೆ 2019–20ನೇ ಸಾಲಿನಲ್ಲಿ 70.40 ಲಕ್ಷ ಅನುದಾನ ಹಂಚಿಕೆಯಾಗಿದ್ದು, ಸದರಿ ಅನುದಾನದಲ್ಲಿ ಒಟ್ಟು 36 ಕಾಮಗಾರಿ ಕೈಗೊಂಡು ಎಲ್ಲಾ ಕಾಮಗಾರಿಗಳು ಪೂರ್ಣಗೊಂಡಿರುತ್ತದೆ, ಪ್ರಸಕ್ತ ಸಾಲಿನಲ್ಲಿ ರೂ: 42.00 ಲಕ್ಷ ಬಿಡುಗಡೆಗೊಂಡಿದ್ದು ರೂ: 42.00 ಲಕ್ಷ ವೆಚ್ಚ ಭರಿಸಲಾಗಿದೆ.

ಗ್ರಾಮ ವಿಕಾಸ ಯೋಜನೆ:–

ಕೊಡಗು ಜಿಲ್ಲೆಗೆ 2017–18ನೇ ಸಾಲಿನಲ್ಲಿ ಅನುಮೋದನೆಗೊಂಡು ಪ್ರಸಕ್ತ ಸಾಲಿನಲ್ಲಿ ಮುಂದುವರೆದ ಕಾಮಗಾರಿಯಾಗಿ ಅನುಷ್ಠಾನಗೊಳ್ಳುತ್ತಿರುವ ಗ್ರಾಮವಿಕಾಸ ಯೋಜನೆ ಕಾಮಗಾರಿಯು ರೂ: 1200.00 ಲಕ್ಷ ಅನುದಾನ ಹಂಚಿಕೆಯಾಗಿದ್ದು, ಸದರಿ ಅನುದಾನದಲ್ಲಿ ಒಟ್ಟು 12 ಕಾಮಗಾರಿ ಕೈಗೊಂಡು ಎರಡು ಕಾಮಗಾರಿಗಳು ಪೂರ್ಣಗೊಂಡಿರುತ್ತದೆ, ಉಳಿದ ಕಾಮಗಾರಿಗಳು ಪ್ರಗತಿಯಲ್ಲಿರುತ್ತದೆ, ಪ್ರಸ್ತುತ ಇಲ್ಲಿಯವರೆಗೆ ಒಟ್ಟು: ರೂ:485.15 ಲಕ್ಷ ಬಿಡುಗಡೆಗೊಂಡಿದ್ದು ರೂ:485.15 ಲಕ್ಷ ವೆಚ್ಚ ಭರಿಸಲಾಗಿದೆ.

ಜಲಾಮೃತಕೆರೆ :–

ಕೊಡಗು ಜಿಲ್ಲೆಗೆ 2019–20ನೇ ಸಾಲಿನಲ್ಲಿ 81.45 ಲಕ್ಷಅನುದಾನ ಹಂಚಿಕೆಯಾಗಿದ್ದು, ಸದರಿ ಅನುದಾನದಲ್ಲಿ ಒಟ್ಟು 17 ಕಾಮಗಾರಿ ಕೈಗೊಂಡು 10 ಕಾಮಗಾರಿಗಳು ಪೂರ್ಣಗೊಂಡಿರುತ್ತದೆ, ಉಳಿದ 7 ಕಾಮಗಾರಿಗಳು ಪ್ರಗತಿಯಲ್ಲಿರುತ್ತದೆ, ರೂ:81.45 ಲಕ್ಷ ಬಿಡುಗಡೆಗೊಂಡಿದ್ದು ಬಿಲ್ಲು ಪಾವತಿಸುವ ಹಂತದಲ್ಲಿದೆ.

ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಂಜಿನಿಯರಿಂಗ್ ವಿಭಾಗ

ಕೊಡಗು ಜಿಲ್ಲೆಗೆ 2019–20 ನೇ ಸಾಲಿನಲ್ಲಿ ರಾಷ್ಟ್ರೀಯ ಗ್ರಾಮೀಣ ಕುಡಿಯುವ ನೀರಿನ ಯೋಜನೆಯಡಿಯಲ್ಲಿ ಒಟ್ಟು ರೂ. 2543.00 ಲಕ್ಷಗಳಿಗೆ ಒಟ್ಟು 440 ಗ್ರಾಮೀಣ ಕುಡಿಯುವ ನೀರು ಕಾಮಗಾರಿಗಳು ಅನುಮೋದನೆಗೊಂಡಿರುತ್ತದೆ. ಇದರಲ್ಲಿ 42 ಮುಂದುವರೆದ ಕಾಮಗಾರಿಗಳಿದ್ದು, ಉಳಿದವು 398 ಹೊಸ ಕಾಮಗಾರಿಗಳಾಗಿರುತ್ತದೆ. ಇದರಲ್ಲಿ ನಲ್ಲಿನೀರು, ಕಿರುನೀರು ಯೋಜನೆ, ಮೇಲ್ತೊಟ್ಟಿ ಇತರೇ ಕಾಮಗಾರಿಗಳು ಒಳಗೊಂಡಿರುತ್ತದೆ. ಮುಂದುವರೆದ ಎಲ್ಲಾ 42 ಕಾಮಗಾರಿಗಳು ಭೌತಿಕವಾಗಿ ಮತ್ತು ಆರ್ಥಿಕವಾಗಿ ಪೂರ್ಣಗೊಳಿಸಲಾಗಿದೆ. 398 ಹೊಸ ಕಾಮಗಾರಿಗಳಲ್ಲಿ ಒಟ್ಟು 202 ಕಾಮಗಾರಿಗಳು ಭೌತಿಕವಾಗಿ ಮತ್ತು ಆರ್ಥಿಕವಾಗಿ ಪೂರ್ಣಗೊಂಡಿರುತ್ತದೆ. ಮತ್ತು ಉಳಿದ 196 ಕಾಮಗಾರಿಗಳು ವಿವಿಧ ಹಂತದಲ್ಲಿದ್ದು, 2020–21ನೇ ಸಾಲಿಗೆ ಮುಂದುವರೆದ ಕಾಮಗಾರಿಗಳಾಗಿರುತ್ತವೆ.

ಕುಡಿಯುವ ನೀರಿನ ಜಲಮೂಲಗಳ ಸಂರಕ್ಷಣೆ, ನೀರಿನ ಮಿತಬಳಕೆ ಮುಂತಾದವುಗಳ ಬಗ್ಗೆ ಗ್ರಾಮೀಣ ಜನರಿಗೆ ಅರಿವು ಮೂಡಿಸುವ ಸಲುವಾಗಿ, NRDWP-Support Activity ಯಡಿ ಜಿಲ್ಲೆಯಲ್ಲಿ IEC ಚಟುವಟಿಕೆಗಳಾದ ಬೀದಿ ನಾಟಕ, ಕಾರ್ಯಾಗಾರ, ಗೋಡೆಬರಹ, ಸ್ವ–ಸಹಾಯ ಸಂಘ, ಶಾಲಾ ಮಕ್ಕಳ ಜಾಥಾ, ಚರ್ಚಾ ಸ್ಪರ್ಧೆ, ಪ್ರಬಂಧ ಸ್ಪರ್ಧೆ ಹಾಗೂ HRD ಚಟುವಟಿಕೆಗಳಾದ ವಿಶೇಷ ಗ್ರಾಮ ಸಭೆ, ಗ್ರಾಮ ಪಂಚಾಯತ್ ಸದಸ್ಯರ, ಗ್ರಾಮೀಣ ನೀರು ಮತ್ತು ನೈರ್ಮಲ್ಯ ಸಮಿತಿ ಸದಸ್ಯರ ತರಬೇತಿ ಕಾರ್ಯಕ್ರಮ ಹಾಗೂ ಎನ್.ಜಿ.ಓ, ಆಶಾ ಕಾರ್ಯಕರ್ತೆಯರ, ಗಾರೆ ಕೆಲಸಗಾರರ ತರಬೇತಿ ಕಾರ್ಯಕ್ರಮಗಳನ್ನು ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಅನುಮೋದಿತ ಕ್ರಿಯಾಯೋಜನೆಯಂತೆ NGO ಮೂಲಕ ಅನುಷ್ಠಾನಗೊಳಿಸಲಾಗಿದೆ.

ಗ್ರಾಮೀಣ ಕುಡಿಯುವ ನೀರು ಕಲುಷಿತಗೊಂಡು ಜನರಿಗೆ ಕಾಲಾರಾ, ಜಠರ ಕಾಯಿಲೆ, ಹೆಪಟೈಟಿಸ್ ನಂತಹ ಕಾಯಿಲೆಗಳು ಹರಡದಂತೆ ಮುಂಜಾಗ್ರತಾ ಕ್ರಮವಾಗಿ ಹಾಲಿ ಇರುವ ಗ್ರಾಮೀಣ ಕುಡಿಯುವ ನೀರಿನ ಯೋಜನೆಗಳ ಜಲಮೂಲಗಳ ನೀರಿನ ಗುಣಮಟ್ಟವನ್ನು ಪರೀಕ್ಷಿಸಲು ಜಿಲ್ಲೆಯಲ್ಲಿ, 1–ಜಿಲ್ಲಾ ಮಟ್ಟದ ಪ್ರಯೋಗಾಲಯ ಸೋಮವಾರಪೇಟೆ ಉಪವಿಭಾಗದಲ್ಲಿ ಹಾಗೂ 1–ತಾಲ್ಲೂಕು ಮಟ್ಟದ ಪ್ರಯೋಗಾಲಯ ಪೊನ್ನಂಪೇಟೆ ಉಪವಿಭಾಗದಲ್ಲಿ ಕಾರ್ಯನಿರ್ವಹಿಸುತ್ತಿದೆ. CRC-BRC ಸಿಬ್ಬಂದಿಯವರಿಂದ ಹಾಲಿ ಇರುವ ಗ್ರಾಮೀಣ ಕುಡಿಯುವ ನೀರಿನ ಯೋಜನೆಗಳ ಜಲಮೂಲಗಳ ನೀರಿನ ಗುಣಮಟ್ಟವನ್ನು ಪರೀಕ್ಷಿಸಲಾಗುತ್ತಿದೆ.

ಟಾಸ್ಕ್ ಫೋರ್ಸ್: ಸದರಿ ಯೋಜನೆಯಡಿಯಲ್ಲಿ TFC– 24–12–2018 ರಲ್ಲಿ ರೂ.150.00 ಲಕ್ಷಗಳು ಹಾಗೂ TFC–08–03–19ರಲ್ಲಿ ರೂ. 75.00 ಲಕ್ಷದಂತೆ ಒಟ್ಟು ರೂ. 225.00 ಲಕ್ಷಗಳು ಬಿಡುಗಡೆಯಾಗಿರುತ್ತದೆ. ಇದರಲ್ಲಿ 181 ಕಾಮಗಾರಿಗಳನ್ನು ಕೈಗೊಂಡು ಎಲ್ಲಾ ಕಾಮಗಾರಿಗಳು ಪೂರ್ಣಗೊಂಡಿರುತ್ತವೆ. ಒಟ್ಟು ರೂ.217.96 ಲಕ್ಷಗಳ ವೆಚ್ಚ ಭರಿಸಲಾಗಿದೆ.

ಮಳೆಹಾನಿ : 2019ನೇ ಸಾಲಿನ ಮಳೆಯಿಂದ ಹಾನಿಗೊಳಗಾದ ಗ್ರಾಮೀಣ ಕುಡಿಯುವ ನೀರು ಯೋಜನೆಯ ದುರಸ್ಥಿ ಕಾಮಗಾರಿಗಳಿಗೆ ಮಳೆಹಾನಿ ದುರಸ್ಥಿಯಡಿಯಲ್ಲಿ ಮಾನ್ಯ ಜಿಲ್ಲಾಧಿಕಾರಿಗಳು, ಕೊಡಗು ಜಿಲ್ಲೆ. ಇವರಿಂದ ಒಟ್ಟು ರೂ.51.00 ಲಕ್ಷಗಳು ಹಂಚಿಕೆಯಾಗಿದ್ದು, ಇದರಲ್ಲಿ ಒಟ್ಟು 39 ದುರಸ್ಥಿ ಕಾಮಗಾರಿಗಳನ್ನು ಕೈಗೊಂಡು ಎಲ್ಲಾ ಕಾಮಗಾರಿಗಳು ಪೂರ್ಣಗೊಂಡಿರುತ್ತವೆ.

ಕೈಮಗ್ಗ ಮತ್ತು ಜವಳಿ ಇಲಾಖೆ

ಭಾರತ ದೇಶದಲ್ಲಿ ಕೃಷಿಯ ನಂತರ ನೇಕಾರಿಕೆಯು ಅತ್ಯಂತ ದೊಡ್ಡ ಕ್ಷೇತ್ರವಾಗಿದ್ದು, ಕೊಡಗು ಜಿಲ್ಲೆಯಲ್ಲಿ ನೇಕಾರರ ಸಾಂದ್ರತೆಯು ಅತ್ಯಂತ ಕಡಿಮೆ ಇದ್ದು ಸೋಮವಾರಪೇಟೆ ತಾಲೂಕಿನ ಶಿರಂಗಾಲ ಮತ್ತು ಕುಶಾಲನಗರದ ಕೆಲವು ಗ್ರಾಮಗಳಲ್ಲಿ ಸುಮಾರು 600 ರಿಂದ 700 ಮಂದಿ ನೇಕಾರರು ಇದ್ದಾರೆ. ಶಿರಂಗಾಲ ಗ್ರಾಮದಲ್ಲಿ "ಕಾವೇರಿ ಹ್ಯಾಂಡ್‌ಲೂಮ್ಸ್ ಶಾಖೆ, ಕೈಮಗ್ಗ ನಮೂನೆ ತಯಾರಿಕ ಘಟಕ" (ಹ್ಯಾಂಡ್‌ಲೂಮ್ ಪ್ಯಾಟ್ರನ್ ಮೇಕಿಂಗ್ ಸೆಂಟರ್) ಹಾಗೂ ಕುಶಾಲನಗರದಲ್ಲಿರುವ "ಕೈಮಗ್ಗ ನೇಕಾರರ ಹಾಗೂ ಸಿದ್ಧ ಉಡುಪು ಉತ್ಪಾದನೆ ಮತ್ತು ಮಾರಾಟ ಸಹಕಾರ ಸಂಘ, ನಿಯಮಿತ" ಸಂಘ ಮತ್ತು ಕೈಮಗ್ಗ ವಿದ್ಯುತ್ ಮಗ್ಗ ನೇಕಾರರ ಹಾಗೂ ಸಿದ್ಧ ಉಡುಪು ಉತ್ಪಾದನೆ ಮತ್ತು ಮಾರಾಟ ಸಹಕಾರ ಸಂಘ ನಿಯಮಿತ, ಪೊನ್ನಂಪೇಟೆ ಸಂಘವು ಪೂರ್ಣ ಪ್ರಮಾಣದಲ್ಲಿ ಕಾರ್ಯ ನಿರ್ವಹಿಸುತ್ತಿದೆ. ಇಲ್ಲಿ ಉತ್ತಮ ಗುಣಮಟ್ಟದ "ಬೆಡ್ ಶೀಟ್", "ಬೆಡ್‌ಸ್ಪ್ರೆಡ್" "ಟವೆಲ್", ಇತ್ಯಾದಿ ಕೈಮಗ್ಗದ ಬಟ್ಟೆಗಳನ್ನು ಉತ್ಪಾದಿಸಲಾಗುತ್ತಿದೆ. ಅಲ್ಲದೆ ಇಲಾಖೆಯ ಜಿಲ್ಲಾ ವಲಯ ಕಾರ್ಯಕ್ರಮದಡಿ ವಿದ್ಯುತ್ ಮಗ್ಗ, ಸಾಮಾನ್ಯ ಮಗ್ಗ, ಜಕಾರ್ಡ್ ಮಗ್ಗ, ವಾರ್ಪಿಂಗ್ ಮಿಷನ್, ವೈಂಡಿಂಗ್ ಮಿಷಿನ್, ಚರಕ ಸೆಟ್ ಇತ್ಯಾದಿಗಳನ್ನು ಅಳವಡಿಸುವುದರ ಮೂಲಕ ಉತ್ತಮ ಗುಣಮಟ್ಟದ ಬಟ್ಟೆಗಳನ್ನು ಉತ್ಪಾದನೆ ಮಾಡಲಾಗುತ್ತಿದೆ. ಅದಲ್ಲದೆ ನೇಕಾರರಿಗೆ ಹೆಚ್ಚು ಆದಾಯವು ಬರುತ್ತಿದೆ. ಶಿರಂಗಾಲ ನೇಯ್ಗೆ ಕೇಂದ್ರದ ನೇಕಾರರನ್ನು ಮತ್ತು ಕುಶಾಲನಗರದಲ್ಲಿರುವ ಕೈಮಗ್ಗ ನೇಕಾರ ಸಹಕಾರ ಸಂಘದ ನೇಕಾರರನ್ನು ಹಾಗೂ ಕೈಮಗ್ಗ ವಿದ್ಯುತ್ ಮಗ್ಗ ನೇಕಾರರ ಹಾಗೂ ಸಿದ್ಧ ಉಡುಪು ಉತ್ಪಾದನೆ ಮತ್ತು ಮಾರಾಟ ಸಹಕಾರ ಸಂಘ ನಿಯಮಿತ, ಪೊನ್ನಂಪೇಟೆ ನೇಕಾರರನ್ನು ಗಮನದಲ್ಲಿಟ್ಟುಕೊಂಡು ಜಿಲ್ಲಾ ವಲಯದಡಿ ಕೆಳಕಂಡ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಅನುಷ್ಠಾನಗೊಳಿಸಲಾಗಿದೆ.

ಜಿಲ್ಲಾ ವಲಯ ಯೋಜನೆಗಳು:–

ಕೈಮಗ್ಗ ಉದ್ದಿಮೆಗಳಿಗೆ ಸಹಾಯ:–

ಲೆಕ್ಕ ಶಿರ್ಷಿಕೆ: 2851–00–107–0–31

ಈ ಯೋಜನೆಯಡಿ 2019–20 ನೇ ಸಾಲಿಗೆ ರೂ. 6.00ಲಕ್ಷ ಅನುದಾನ ಹಂಚಿಕೆಯಾಗಿರುತ್ತದೆ. ಹಾಗೂ ಕೆಳಕಂಡ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಅನುಷ್ಠಾನಗೊಳಿಸಲಾಗಿದೆ.

1. ಜಿಲ್ಲಾ ಮಟ್ಟದ ಕೈಮಗ್ಗ ಉತ್ಪನ್ನಗಳ ವಸ್ತು ಪ್ರದರ್ಶನ ಮತ್ತು ಮಾರಾಟ ಮೇಳವನ್ನು ದಿನಾಂಕ: 24–01–2020 ರಿಂದ 30–01–2020 ರ ವರೆಗೆ ಮಡಿಕೇರಿಯಗಾಂಧಿ ಮೈದಾನದಲಿ ಏರ್ಪಡಿಸಲಾಗಿದೆ. ಇದಕ್ಕಾಗಿ ರೂ. 2,99,500/– ಲಕ್ಷಗಳನ್ನು ವೆಚ್ಚ ಮಾಡಲಾಗಿದೆ.
2. ಕೈಮಗ್ಗ ವಿದ್ಯುತ್ ಮಗ್ಗ ನೇಕಾರರ ಹಾಗೂ ಸಿದ್ಧ ಉಡುಪು ಉತ್ಪಾದನೆ ಮತ್ತು ಮಾರಾಟ ಸಹಕಾರ ಸಂಘ ನಿಯಮಿತ, ಪೊನ್ನಂಪೇಟೆ ಈ ಸಂಘಕ್ಕೆ ರೂ. 1,98,500/– ಲಕ್ಷಗಳ ಮೊತ್ತದಲ್ಲಿ ಒಂದು ನ್ಯುಮ್ಯಾಟಿಕ್ ಲೂಮ್ ಮತ್ತುರೂ. 98,500/– ಗಳಿಗೆ ಒಂದು ಸೆಕ್ಷನಲ್ ವಾರ್ಪಿಂಗ್ ಮಿಷನ್ ಸರಬರಾಜು ಮಾಡಿ ಅಳವಡಿಸಲಾಗಿದೆ.

ಒಟ್ಟಾರೆಯಾಗಿ ಆರ್ಥಿಕ ಗುರಿ ರೂ. 6.00 ಲಕ್ಷ ಗಳಿಗೆ ರೂ.5,96,500/– ಗಳ ವೆಚ್ಚ ಭರಿಸಿ ಶೇ. 99.41 ಆರ್ಥಿಕ ಸಾಧನೆ ಮಾಡಲಾಗಿದೆ. ಭೌತಿಕ ಗುರಿ 06 ಕ್ಕೆ 06 ಸಾಧನೆ ಮಾಡಲಾಗಿದೆ. ಒಟ್ಟಾರೆ ಶೇ.100 ಭೌತಿಕ ಸಾಧನೆ ಮಾಡಲಾಗಿದೆ.

ಗಣಿ ಮತ್ತು ಭೂ ವಿಜ್ಞಾನ ಇಲಾಖೆ

1.1) ಕೊಡಗು ಜಿಲ್ಲೆಯ ಬಗ್ಗೆ ಕಿರು ಪರಿಚಯ

ಕೊಡಗು ಜಿಲ್ಲೆಯು ಕರ್ನಾಟಕದ ದಕ್ಷಿಣ ಜಿಲ್ಲೆಗಳಲ್ಲೊಂದು. ಕೊಡಗು ಜಿಲ್ಲೆಯ ವಿಸ್ತೀರ್ಣವು 4104 ಚದರ ಕಿ.ಮೀ.ಗಳಷ್ಟಿದೆ. ಈ ಜಿಲ್ಲೆಯು ಮಡಿಕೇರಿ, ಸೋಮವಾರಪೇಟೆ ಹಾಗೂ ವಿರಾಜಪೇಟೆ ತಾಲ್ಲೂಕುಗಳನ್ನೊಳಗೊಂಡಿರುತ್ತದೆ ಹಾಗೂ ಇದರ ಕೇಂದ್ರ ಸ್ಥಾನ ಮಡಿಕೇರಿ. ಇಲ್ಲಿನ ವಾರ್ಷಿಕ ಸರಾಸರಿ ಮಳೆ 2903 ಮಿ. ಮೀಗಳಷ್ಟಿರುತ್ತದೆ.

ಜಿಲ್ಲೆಯು ಪಶ್ಚಿಮ ಘಟ್ಟಕ್ಕೆ ಸೇರಿದ್ದು ಗುಡ್ಡಗಾಡುಗಳಿಂದ ಕೂಡಿದ ಪ್ರದೇಶವಾಗಿರುತ್ತದೆ. ಜಿಲ್ಲೆಯಲ್ಲಿ ಮುಖ್ಯವಾಗಿ ಹರಿಯುವ ನದಿ ಕಾವೇರಿ ಹಾಗೂ ಅದರ ಉಪನದಿಗಳಾದ ಹೇಮಾವತಿ, ಬರಪೊಳೆ ಹಾಗೂ ಲಕ್ಷ್ಮಣತೀರ್ಥ, ಜಿಲ್ಲೆಯ ಅತಿ ಮುಖ್ಯವಾದ ಬೆಳೆ ಕಾಫಿಯಾಗಿದ್ದು ಇದರೊಂದಿಗೆ ಕಾಳು ಮೆಣಸು, ಏಲಕ್ಕಿ ಮತ್ತು ಕಿತ್ತಳೆ ಹಣ್ಣನ್ನು ಬೆಳೆಯಲಾಗುತ್ತದೆ. ಈ ಜಿಲ್ಲೆಯಲ್ಲಿ ಮುಖ್ಯವಾಗಿ ಕಂಡುಬರುವ ಶಿಲೆಗಳೆಂದರೆ ಗ್ರೆನೈಟ್ ಹಾಗೂ ಗ್ರೆನೈಟಿಕ್ ನೈಸ್, ಚಾರ್ನೊಕೈಟ್, ಡಾಲರೈಟ್ ಹಾಗೂ ಲ್ಯಾಟರೈಟ್ಸ್.

1.2) ಕಚೇರಿಯ ಪರಿಚಯ

ಮೇ 1978ನೇ ಸಾಲಿನಲ್ಲಿ ಅಂತರ್ಜಲಾನ್ವೇಷಣಾ ಕಚೇರಿ ಮಡಿಕೇರಿಯಲ್ಲಿ ಸ್ಥಾಪಿಸಲ್ಪಟ್ಟು, ಸರ್ಕಾರಿ ಆದೇಶ ಸಂಖ್ಯೆ ಸಿಐ 27 ಎಂ.ಜಿ.ಎಸ್ 88 ಬೆಂಗಳೂರು ದಿನಾಂಕ 05.07.1988ರ ಪ್ರಕಾರ ಯೋಜನೇತರ ಅಡಿಯಲ್ಲಿ ಮುಂದುವರೆದಿದೆ. ಹಾಗೂ ಕರ್ನಾಟಕ ಸರ್ಕಾರದ ಪತ್ರ ಸಂಖ್ಯೆ :ಸಿಐ 192 ಎಂ.ಜಿ.ಎಸ್ .2009 ದಿನಾಂಕ 11.01.2010 ರಂತೆ ಕೊಡಗು ಜಿಲ್ಲೆ ಮಡಿಕೇರಿಯಲ್ಲಿ ಸ್ಥಾಪಿಸಿರುವ ಅಂತರ್ಜಲ ವಿಭಾಗದ ಹಿರಿಯ ಭೂವಿಜ್ಞಾನಿಯ ಕಚೇರಿಯನ್ನು ಬಲಪಡಿಸಿ ಖನಿಜ ವಿಭಾಗದ ಕಾರ್ಯಗಳನ್ನು ನಿರ್ವಹಿಸುವ ಕುರಿತು ಸರ್ಕಾರವು ಅನುಮೋದನೆ ನೀಡಿರುವ ಪ್ರಕಾರ ದಿನಾಂಕ 18.02.2010 ರಿಂದ ಖನಿಜ ವಿಭಾಗದ ಕಾರ್ಯವನ್ನು ನಿರ್ವಹಿಸಲಾಗುತ್ತಿದೆ.

ಈ ಕಚೇರಿಯು ಪ್ರಾರಂಭವಾದಾಗಿನಿಂದ ದಿನಾಂಕ 31.03.1987 ರವರೆಗೆ ಮಾತ್ರ ಇಲಾಖೆಯ ಆಡಳಿತಕ್ಕೆ ಒಳಪಟ್ಟಿದ್ದು 1987 ರ ಏಪ್ರಿಲ್‌ನಿಂದ ಜಿಲ್ಲಾ ಪಂಚಾಯತ್ ಅಧೀನದಲ್ಲಿ ಕೆಲಸ ನಿರ್ವಹಿಸಿರುತ್ತದೆ. ಹಾಗೂ ಸರ್ಕಾರಿ ಆದೇಶ ಸಂಖ್ಯೆ: ಸಿಐ 175 ಎಂಎಂಎನ್ 2014 ಬೆಂಗಳೂರು ದಿನಾಂಕ 31.05.2014ರಂತೆ ಈ ಕಛೇರಿಯು ಸಂಪೂರ್ಣವಾಗಿ ರಾಜ್ಯ ವಲಯದ ಸ್ವಾಧೀನದಲ್ಲಿರುತ್ತದೆ.

ಅಂತರ್ಜಲ ಕಛೇರಿಯು ಈ ಇಲಾಖೆಯಿಂದ ಪ್ರತ್ಯೇಕಗೊಂಡು ದಿನಾಂಕ:08.05.2017 ರಿಂದ ಜಿಲ್ಲಾ ಅಂತರ್ಜಲ ಕಛೇರಿಯಾಗಿ ಕಾರ್ಯನಿರ್ವಹಿಸುತ್ತಿರುತ್ತದೆ.

2. ಆಡಳಿತ

2.1 ಕೊಡಗು ಜಿಲ್ಲಾ ಮಟ್ಟದ ಹಿರಿಯ ಭೂವಿಜ್ಞಾನಿಯವರ ಕಚೇರಿಯಲ್ಲಿ ದಿನಾಂಕ 31.03.2020 ರವರೆಗೆ

ಮಂಜೂರಾದ ಹಾಗೂ ಖಾಲಿ ಇರುವ ಹುದ್ದೆಗಳು ಈ ಕೆಳಕಂಡಂತಿದೆ.

ಕ್ರ. ಸಂ	ಪದನಾಮ	ಮಂಜೂರಾದ ಹುದ್ದೆಗಳು	ಖಾಲಿ ಹುದ್ದೆಗಳು	ಷರಾ
1	ಹಿರಿಯ ಭೂವಿಜ್ಞಾನಿ	01	–	ಶ್ರೀಮತಿ ಬಿ.ರೇಷ್ಮ, ಇವರು ಹಿರಿಯ ಭೂವಿಜ್ಞಾನಿಯಾಗಿ ದಿನಾಂಕ:03.09.2016ರಿಂದ ಕರ್ತವ್ಯ ನಿರ್ವಹಿಸುತ್ತಿರುತ್ತಾರೆ.
2.	ಭೂ ವಿಜ್ಞಾನಿ	04	01	1) ದಿನಾಂಕ 02.03.2019 ರಿಂದ ಶ್ರೀಮತಿ ಬಿ.ಆರ್ ಮಮತಾ, ಭೂವಿಜ್ಞಾನಿ, ಇವರು ಹಿರಿಯ ಭೂವಿ ಜ್ಞಾನಿಯವರ ಕಚೇರಿ ಗಣಿ ಮತ್ತು ಭೂವಿಜ್ಞಾನ ಇಲಾಖೆ, ಬಳ್ಳಾರಿ ಇಲ್ಲಿಂದ ನಿಯೋಜನೆಗೊಂಡು ಕರ್ತವ್ಯ ನಿರ್ವಹಿಸುತ್ತಿರುತ್ತಾರೆ. 2) ದಿನಾಂಕ:13.01.2020 ರಿಂದ 27.02.2020 ರವರೆಗೆ ಶ್ರೀಮತಿ ಆರ್ ಪದ್ಮಶ್ರೀ ಇವರು ಉಪನಿರ್ದೇಶಕರ ಕಛೇರಿ, ಗಭೂಇ, ಮಂಗಳೂರು ಕಛೇರಿಯಿಂದ ನಿಯೋಜನೆಗೊಂಡು ಕರ್ತವ್ಯ ನಿರ್ವಹಿಸಿರುತ್ತಾರೆ. 3) ಶ್ರೀ ರಾಹುಲ್ ಎಂ.ಎಸ್ ಇವರು ಭೂವಿಜ್ಞಾನಿಯಾಗಿ ಹೊಸದಾಗಿ ನೇಮಕಾತಿ ಹೊಂದಿ ದಿನಾಂಕ:13.05.2019 ರಿಂದ ಕರ್ತವ್ಯ ನಿರ್ವಹಿಸುತ್ತಿರುತ್ತಾರೆ. 4) ಕುಮಾರಿ ರೋಜಾ ಹೆಚ್.ಡಿ ಇವರು ಭೂವಿಜ್ಞಾನಿಯಾಗಿ ಹೊಸದಾಗಿ ನೇಮಕಾತಿ ಹೊಂದಿ ದಿನಾಂಕ:13.05.2019 ರಿಂದ ಕರ್ತವ್ಯ ನಿರ್ವಹಿಸುತ್ತಿರುತ್ತಾರೆ. 5) ಶ್ರೀ ಲಾಯಲ್ ಗ್ಲ್ಯಾಡ್‌ಸನ್ ಮಿರಾಂದ ಇವರು ಭೂವಿಜ್ಞಾನಿಯಾಗಿ ಹೊಸದಾಗಿ ನೇಮಕಾತಿ ಹೊಂದಿ ದಿನಾಂಕ:29.05.2019 ರಿಂದ ಕರ್ತವ್ಯ ನಿರ್ವಹಿಸುತ್ತಿರುತ್ತಾರೆ.
3.	ಅಧೀಕ್ಷಕರು	01	0	ಶ್ರೀ ಕೆ.ನಂಜುಂಡಯ್ಯ ಇವರು ದಿನಾಂಕ:01.08.2016 ರಿಂದ ಕರ್ತವ್ಯ ನಿರ್ವಹಿಸುತ್ತಿರುತ್ತಾರೆ.
4	ಕಿರಿಯ ಅಭಿಯಂತರರು	01	01	ಪ್ರಸ್ತುತ ಸದರಿ ಹುದ್ದೆ ಖಾಲಿ ಇದ್ದು, ಕಛೇರಿ ಕೆಲಸದ ಅವಶ್ಯಕತೆಗೆ ಅನುಗುಣವಾಗಿ ಜಂಟಿ ನಿರ್ದೇಶಕರ ಕಛೇರಿ, ಗಣಿ ಮತ್ತು ಭೂವಿಜ್ಞಾನ ಇಲಾಖೆ, ಮೈಸೂರು ಇಲ್ಲಿಂದ ಕರೆಸಿಕೊಳ್ಳಲಾಗುತ್ತಿರುತ್ತದೆ.
5	ಪ್ರಥಮ ದರ್ಜೆ ಸಹಾಯಕರು	02	0	1. ಶ್ರೀ ಯಂಕಪ್ಪ, ಇವರು ದಿನಾಂಕ:05.09.2019 ರಿಂದ ಕರ್ತವ್ಯ ನಿರ್ವಹಿಸುತ್ತಿರುತ್ತಾರೆ. 2. ಶ್ರೀ ಸಂತೋಷ್ ಕುಮಾರ್ ದಿನಾಂಕ:01.08.2016 ರಿಂದ ಕರ್ತವ್ಯ ನಿರ್ವಹಿಸುತ್ತಿದ್ದು, ದಿನಾಂಕ:05.10.2019 ರಂದು ಉಡುಪಿ ಕಛೇರಿಗೆ ನಿಯೋಜನೆ ಮೇರೆಗೆ ವರ್ಗಾವಣೆಯಾಗಿರುತ್ತಾರೆ.
6	ದ್ವಿತೀಯ ದರ್ಜೆ ಸಹಾಯಕರು	03	02	ಶ್ರೀ ಅಭೀಷೇಕ್ ಎ.ಆರ್ ಇವರು ಹೊಸದಾಗಿ ನೇಮಕಗೊಂಡು ದಿನಾಂಕ:13.06.2019 ರಿಂದ ಕರ್ತವ್ಯ ನಿರ್ವಹಿಸುತ್ತಿರುತ್ತಾರೆ.
7	ಬೆರಳಚ್ಚುಗಾರರು	01	01	ಹೊರಗುತ್ತಿಗೆ ಆಧಾರದ ಮೇರೆಗೆ ಕಾರ್ಯ ನಿರ್ವಹಿಸುತ್ತಿರುತ್ತಾರೆ.
8	ವಾಹನ ಚಾಲಕರು	01	01	ಹೊರಗುತ್ತಿಗೆ ಆಧಾರದ ಮೇರೆಗೆ ಕಾರ್ಯ ನಿರ್ವಹಿಸುತ್ತಿರುತ್ತಾರೆ.
9	ಡಿ ಗುಂಪು ನೌಕರರು	07	05	1. ಶ್ರೀ ಶಿವರುದ್ರಪ್ಪ ಇವರು ದಿನಾಂಕ: 10.12.1992 ರಿಂದ ಕರ್ತವ್ಯ ನಿರ್ವಹಿಸುತ್ತಿರುತ್ತಾರೆ. 2. ಶ್ರೀ ಐ.ಎ ಕಿಶೋರ್ ಇವರು ದಿನಾಂಕ:24.05.2012 ರಿಂದ ಕರ್ತವ್ಯ ನಿರ್ವಹಿಸುತ್ತಿರುತ್ತಾರೆ. 3. ಹೊರಗುತ್ತಿಗೆ ಆಧಾರದ ಮೇರೆಗೆ ಕರ್ತವ್ಯ ನಿರ್ವಹಿಸುತ್ತಿರುತ್ತಾರೆ.

2.2 ವರ್ಗಾವಣೆಗಳು:

2019–20 ನೇ ಸಾಲಿನಲ್ಲಿ ವರ್ಗಾವಣೆಯಾದ ಅಧಿಕಾರಿ/ಸಿಬ್ಬಂದಿಯವರ ವಿವರ:

ಕ್ರ.ಸಂ	ಅಧಿಕಾರಿ ಮತ್ತು ಸಿಬ್ಬಂದಿ ಹೆಸರು	ವರ್ಗಾವಣೆಯಾದ ವಿವರ
1.	ಶ್ರೀಮತಿ ಆರ್ ಪದ್ಮಶ್ರೀ ಭೂವಿಜ್ಞಾನಿ	ದಿನಾಕ:27.02.2020 ರಂದು ಸದರಿಯವರು ಉಪ ನಿರ್ದೇಶಕರ ಕಛೇರಿ, ಗಭೂಇ, ಮಂಗಳೂರು ಕಛೇರಿಗೆ ವರ್ಗಾವಣೆಗೊಂಡಿರುತ್ತಾರೆ.

2.3 ರಜೆಯ ವಿವರ

2019–20ನೇ ಸಾಲಿನ ಅಧಿಕಾರಿ ಸಿಬ್ಬಂದಿಯವರ ರಜೆಯ ವಿವರ

ಕ್ರ.ಸಂ	ಅಧಿಕಾರಿ ಮತ್ತು ಸಿಬ್ಬಂದಿ ಖಾತೆ	ರಜೆ
01	ಶ್ರೀಮತಿ ರೇಷ್ಮ ಬಿ, ಹಿರಿಯ ಭೂವಿಜ್ಞಾನಿ	• 13.05.2019 ರಿಂದ 18.05.2019 ರ 06 ದಿನಗಳ ಪರಿವರ್ತಿತ ರಜೆ • 07.12.2019 ರ ಒಂದು ದಿನದ ಪರಿವರ್ತಿತ ರಜೆ • 02.01.2020 ರಿಂದ 10.01.2020ರ 09 ದಿನಗಳ ಪರಿವರ್ತಿತ ರಜೆ • 20.03.2020 ರಿಂದ 24.03.2020 ರ 05 ದಿನಗಳ ಪರಿವರ್ತಿತ ರಜೆ
02	ಶ್ರೀಮತಿ ಬಿ.ಆರ್ ಮಮತ, ಭೂವಿಜ್ಞಾನಿ	• 28.10.2019 ರಿಂದ 31.10.2019 ರ 04 ದಿನಗಳ ಪರಿವರ್ತಿತ ರಜೆ • 30.12.2019 ರಿಂದ 31.12.2019 ರ 02 ದಿನಗಳ ಪರಿವರ್ತಿತ ರಜೆ
03	ಶ್ರೀ ಐ.ಎ ಕಿಶೋರ್, ಡಿ–ಗುಂಪು	• ದಿನಾಂಕ:25.04.2019 ರಿಂದ 27.04.2019 ರ 04 ದಿನಗಳ ಪರಿವರ್ತಿತ ರಜೆ • ದಿನಾಂಕ:05.03.2020 ರಿಂದ 07.05.2020 ರವರೆಗೆ 03 ದಿನಗಳ ಗಳಿಕೆ ರಜೆ.

2.4 ತರಬೇತಿ ವಿವರ:

ಕ್ರ.ಸಂ	ಅಧಿಕಾರಿ ಮತ್ತು ಸಿಬ್ಬಂದಿಗಳು	ತರಬೇತಿ ವಿವರ
1	ಶ್ರೀಮತಿ ರೇಷ್ಮ.ಬಿ, ಹಿರಿಯ ಭೂವಿಜ್ಞಾನಿ	• ಆಡಳಿತ ತರಬೇತಿ ಸಂಸ್ಥೆ, ಮೈಸೂರು ಇಲ್ಲಿ ದಿನಾಂಕ:15.10.2019 ರಂದು E-Office ತರಬೇತಿ ಕಾರ್ಯಕ್ರಮಕ್ಕೆ ಹಾಜರಾಗಿರುತ್ತಾರೆ.
2	ಶ್ರೀಮತಿ ಬಿ.ಆರ್ ಮಮತ, ಭೂವಿಜ್ಞಾನಿ	• ಕೇಂದ್ರ ಕಛೇರಿ ಬೆಂಗಳೂರು ಇಲ್ಲಿ ದಿನಾಂಕ:19.10.2019 ರಂದು ಸೇವಾ ಸಿಂಧು ನಾಗರಿಕ ಸೇವೆಯ ತರಬೇತಿ ಕಾರ್ಯಕ್ರಮಕ್ಕೆ ಹಾಜರಾಗಿರುತ್ತಾರೆ.
3	ಶ್ರೀ ರಾಹುಲ್ ಎಂ.ಎಸ್, ಭೂವಿಜ್ಞಾನಿ	• ಆಡಳಿತ ತರಬೇತಿ ಸಂಸ್ಥೆ, ಮೈಸೂರು ಇಲ್ಲಿ ದಿನಾಂಕ:15.10.2019 ರಂದು E-Office ತರಬೇತಿ ಕಾರ್ಯಕ್ರಮಕ್ಕೆ ಹಾಜರಾಗಿರುತ್ತಾರೆ.

4	ಕುಮಾರಿ ರೋಜಾ ಹೆಚ್.ಡಿ	• ಆಡಳಿತ ತರಬೇತಿ ಸಂಸ್ಥೆ ಮೈಸೂರು ಇಲ್ಲಿ ದಿನಾಂಕ: 19.08.2019 ರಿಂದ 21.08.2019 ರವರೆಗೆ ಘಟನೆ ಪ್ರತಿಕ್ರಿಯೆ ವ್ಯವಸ್ಥೆ (Incident Response System) ತರಬೇತಿ ಕಾರ್ಯಕ್ರಮಕ್ಕೆ ಹಾಜರಾಗಿರುತ್ತಾರೆ. • ಜಿಲ್ಲಾ ತರಬೇತಿ ಸಂಸ್ಥೆ ಮಡಿಕೇರಿ ಇಲ್ಲಿ ದಿನಾಂಕ:11.11.2019 ರಂದು E-Office ತರಬೇತಿ ಕಾರ್ಯಕ್ರಮಕ್ಕೆ ಹಾಜರಾಗಿರುತ್ತಾರೆ.
5	ಶ್ರೀ ಯಂಕಪ್ಪ ಪ್ರಥಮ ದರ್ಜೆ ಸಹಾಯಕರು	• ಜಿಲ್ಲಾ ತರಬೇತಿ ಸಂಸ್ಥೆ ಮಡಿಕೇರಿ ಇಲ್ಲಿ ದಿನಾಂಕ:09.12.2019 ಮತ್ತು 10.12.2019 ರವರೆಗೆ ಖಜಾನೆ–2 ತರಬೇತಿ ಕಾರ್ಯಕ್ರಮಕ್ಕೆ ಹಾಜರಾಗಿರುತ್ತಾರೆ. • ಜಿಲ್ಲಾ ತರಬೇತಿ ಸಂಸ್ಥೆ ಮಡಿಕೇರಿ ಇಲ್ಲಿ ದಿನಾಂಕ:17.12.2019 ರಿಂದ 18.12.2019 ರವರೆಗೆ ಇ–ಕಛೇರಿ ತರಬೇತಿ ಕಾರ್ಯಕ್ರಮಕ್ಕೆ ಹಾಜರಾಗಿರುತ್ತಾರೆ. • ಜಿಲ್ಲಾ ತರಬೇತಿ ಸಂಸ್ಥೆ ಮಡಿಕೇರಿ ಇಲ್ಲಿ ದಿನಾಂಕ:09.03.2020 ಮತ್ತು 10.03.2020 ರಂದು ಇ–ಪ್ರೋಕ್ಯೂರ್‌ಮೆಂಟ್ ತರಬೇತಿ ಕಾರ್ಯಕ್ರಮಕ್ಕೆ ಹಾಜರಾಗಿರುತ್ತಾರೆ.
6	ಶ್ರೀ ಎ.ಆರ್ ಅಭಿಷೇಕ್, ದ್ವಿತೀಯ ದರ್ಜೆ ಸಹಾಯಕ	• ಜಿಲ್ಲಾ ತರಬೇತಿ ಸಂಸ್ಥೆ ಮಡಿಕೇರಿ ಇಲ್ಲಿ ದಿನಾಂಕ:20.08.2019 ಮತ್ತು 21.08.2019 ರಂದು ಮಾನಸಿಕ ಒತ್ತಡ ನಿರ್ವಹಣೆ ತರಬೇತಿ ಕಾರ್ಯಕ್ರಮಕ್ಕೆ ಹಾಜರಾಗಿರುತ್ತಾರೆ. • ಜಿಲ್ಲಾ ತರಬೇತಿ ಸಂಸ್ಥೆ ಮಡಿಕೇರಿ ಇಲ್ಲಿ ದಿನಾಂಕ:06.09.2020 ಮತ್ತು 07.09.2020 ಕಛೇರಿ ಕಾರ್ಯವಿಧಾನ ತರಬೇತಿ ಕಾರ್ಯಕ್ರಮಕ್ಕೆ ಹಾಜರಾಗಿರುತ್ತಾರೆ. • ಜಿಲ್ಲಾ ತರಬೇತಿ ಸಂಸ್ಥೆ ಮಡಿಕೇರಿ ಇಲ್ಲಿ ದಿನಾಂಕ:24.09.2019 ರಿಂದ 25.09.2019 ರವರೆಗೆ ನ್ಯಾಯಾಲಯ ಪ್ರಕರಣ ಇತ್ಯರ್ಥಪಡಿಸುವ ಹಾಗೂ ಕಂಡಿಕೆವಾರು ಷರಾ ಬರೆಯುವ ಕ್ರಮದ ತರಬೇತಿ ಕಾರ್ಯಕ್ರಮಕ್ಕೆ ಹಾಜರಾಗಿರುತ್ತಾರೆ. • ಜಿಲ್ಲಾ ತರಬೇತಿ ಸಂಸ್ಥೆ ಮಡಿಕೇರಿ ಇಲ್ಲಿ ದಿನಾಂಕ:11.11.2019 ರಂದು E-Office ತರಬೇತಿ ಕಾರ್ಯಕ್ರಮಕ್ಕೆ ಹಾಜರಾಗಿರುತ್ತಾರೆ. • ಜಿಲ್ಲಾ ತರಬೇತಿ ಸಂಸ್ಥೆ ಮಡಿಕೇರಿ ಇಲ್ಲಿ ದಿನಾಂಕ:09.03.2020 ಮತ್ತು 10.03.2020 ರಂದು ಇ–ಪ್ರೋಕ್ಯೂರ್‌ಮೆಂಟ್ ತರಬೇತಿ ಕಾರ್ಯಕ್ರಮಕ್ಕೆ ಹಾಜರಾಗಿರುತ್ತಾರೆ.

2.5 ಅನುದಾನ :

ಅನುದಾನ ಖನಿಜಾಡಳಿತ ಯೋಜನೆ **ಲೆಕ್ಕ ಶೀರ್ಷಿಕೆ : 2853–02–001–0–01**

ಕ್ರ.ಸಂ	ವಿವರ	ಅನುದಾನ ರೂ.ಗಳಲ್ಲಿ	ಖರ್ಚು
1.	ಅಧಿಕಾರಿ ವೇತನ	–	17,54,300
2.	ಸಿಬ್ಬಂದಿ ವೇತನ	–	23,91,001
3.	ತುಟ್ಟಿ ಭತ್ಯೆ	–	4,15,129
4.	ಇತರೆ ಭತ್ಯೆ	–	3,39,901
5.	ವೈದ್ಯಕೀಯ ಭತ್ಯೆ	–	12,493
6.	ವೈದ್ಯಕೀಯ ವೆಚ್ಚದ ಮರುಪಾವತಿ	–	–
7.	ಪ್ರಯಾಣ ಭತ್ಯೆ	–	–
8.	ಸಾಮಾನ್ಯ ವೆಚ್ಚಗಳು	60,000	59,986
9.	ಕಟ್ಟಡ ವೆಚ್ಚ	1,02,000	101165
10	ಸಾರಿಗೆ ವೆಚ್ಚ	3,26,466	3,23,670
	ಒಟ್ಟು	**4,88,466**	**53,97,645**

2.6 ಕನ್ನಡ ಅನುಷ್ಠಾನ

ಈ ಕಚೇರಿಗೆ 2019–20 ನೇ ಸಾಲಿನಲ್ಲಿ ಸ್ವಿಕೃತಿಗೊಂಡ ಪತ್ರಗಳ ಸಂಖ್ಯೆ 3090 ಆಗಿದ್ದು, ಇವುಗಳಲ್ಲಿ 2744 ಪತ್ರಗಳು ಕನ್ನಡ ಭಾಷೆಯದಾಗಿರುತ್ತವೆ ಹಾಗೂ 346 ಪತ್ರಗಳು ಆಂಗ್ಲ ಭಾಷೆಯಲ್ಲಿರುತ್ತವೆ. ಕಚೇರಿಯಿಂದ ರವಾನಿಸಿದ ಪತ್ರಗಳ ಸಂಖ್ಯೆ 1739 ಆಗಿದ್ದು, ಇವುಗಳಲ್ಲಿ 1731 ಕನ್ನಡ ಭಾಷೆ ಮತ್ತು 09 ಆಂಗ್ಲ ಭಾಷೆಯದಾಗಿರುತ್ತವೆ.

3. ಖನಿಜ ವಿಭಾಗ:

3.1 ವಾರ್ಷಿಕ ಪ್ರಗತಿ

2019–20ನೇ ಸಾಲಿನಲ್ಲಿ ಆರ್ಥಿಕ ವರ್ಷದಲ್ಲಿ ಸಾಧಿಸಿದ ವಾರ್ಷಿಕ ಪ್ರಗತಿ ಈ ಕೆಳಕಂಡಂತಿದೆ.

1) ಕೇಂದ್ರ ಕಛೇರಿಯಿಂದ ನಿಗಧಿಪಡಿಸಿದ ವಾರ್ಷಿಕ ಗುರಿಯ ಮೊತ್ತ ರೂ. 1300,00,000/–
2) ಒಟ್ಟು ಸಂಗ್ರಹವಾಗಿರುವ ಮೊತ್ತ ರೂ.8,00,56,928/–
3) ಒಟ್ಟು ಸ್ವೀಕೃತವಾದ ಕಲ್ಲುಗಣಿ ಅರ್ಜಿಗಳ ಸಂಖ್ಯೆ 03 (3ಬಿ)
4) 2019–20 ರಲ್ಲಿ ಮಂಜೂರಾದ ಕಲ್ಲುಗಣಿ ಗುತ್ತಿಗೆಗಳ ಸಂಖ್ಯೆ 02

01.04.2019 ರಿಂದ 31.03.2020 ರವರೆಗೆ ಸಂಗ್ರಹವಾದ ರಾಜಸ್ವದ ವಿವರ:

ಕ್ರ.ಸಂ	ವಿವರಗಳು	ಮೊತ್ತ
1	ಅಲಂಕಾರಿಕ ಶಿಲೆಗಳು	2,37,073
2	ಇತರೆ ಉಪಖನಿಜಗಳು	1,10,88,840
3	ಕಲ್ಲು APP ಮೊತ್ತ	9,83,900
4	ಅರ್ಧಾಂಶ ರಾಜಧನ	0
5	ಮುಂಗಡ ರಾಜಧನ	0
6	ಮರಳು ಪರವಾನಿಗೆ	5,72,880
7	ಮರಳು APP ಮೊತ್ತ	53,47,305
8	SR ದರದಂತೆ ಮರಳು ಮಾರಾಟದಿಂದ	1,25,515
9	ವಶಪಡಿಸಿಕೊಂಡ ಮರಳಿನ ರಾಜಧನ	1,25,358
10	ಕಾಮಗಾರಿಗಳಿಂದ	1,29,82,111

11	ಅರ್ಜಿ/ಕರಾರು/ಮೋಜಣಿ/ಕ್ರಷರ್/ಸರ್ವೆ/ನ್ಯೂಸ್ ಪೇಪರ್‌ಶುಲ್ಕ	16,250
12	ಪರಿಸರ ಸಂರಕ್ಷಣಾ ಶುಲ್ಕ	51,150
13	ಡಿಸಿಬಿ ಬಾಕಿ	31,60,403
14	ಆರ್.ಆರ್.ಸಿ	0
15	ದಂಡ	25,88,881
16	ಚೆಕ್ ಪೋಸ್ಟ್	0
17	ಖಜಾನೆಯಲ್ಲಿ ಪಾವತಿ	4,22,47,272
18	ಪ್ರೊಸೆಸಿಂಗ್ ಫೀ	57,100
19	ಕ್ವಾರಿ ಪ್ಲಾನ್ ಶುಲ್ಕ	10,000
20	SSP ಶುಲ್ಕ	4,62,890
	ಒಟ್ಟು	**8,00,56,928/-**

2019–20ನೇ ಸಾಲಿನಲ್ಲಿ ಒಟ್ಟು ವಾರ್ಷಿಕ ಗುರಿ ರೂ. 1,300,00,000/– ನೀಡಿದ್ದು, ಶೇ.62 ಗಳಷ್ಟು ಪ್ರಗತಿ ಸಾಧಿಸಲಾಗಿರುತ್ತದೆ.

3.2 ಸಾಮಾನ್ಯ ಮರಳು:

ಪ್ರಸ್ತುತ ಜಿಲ್ಲೆಯಲ್ಲಿ 17 ಮರಳು ಬ್ಲಾಕ್‌ಗಳಿಗೆ ಗುತ್ತಿಗೆ ಮಂಜೂರಾತಿ ನೀಡಲಾಗಿದ್ದು, ಸದರಿ ಮರಳು ಬ್ಲಾಕ್‌ಗಳಲ್ಲಿ ಮಳೆಗಾಲವನ್ನು ಹೊರತುಪಡಿಸಿ ಮರಳು ಗಣಿಗಾರಿಕೆ/ಸಾಗಾಣಿಕೆ ಕಾರ್ಯ ನಿರ್ವಹಿಸಲು ಅನುಮತಿ ನೀಡಲಾಗಿರುತ್ತದೆ.

3.7 ಕಾರ್ಯನಿರ್ವಹಣೆ:

ಕ್ರ.ಸಂ	ಹೆಸರು ಮತ್ತು ಹುದ್ದೆ	ಕಛೇರಿಯ ಕೆಲಸದ ವಿವರ
01	ಶ್ರೀ ಬಿ.ರೇಷ್ಮ ಹಿರಿಯ ಭೂವಿಜ್ಞಾನಿ	ಇಲಾಖೆಗೆ ಸಂಬಂಧಿಸಿದ ಮೇಲುಸ್ತುವಾರಿ ನೋಡಿಕೊಳ್ಳುವುದು, ಜಿಲ್ಲಾಧಿಕಾರಿ ಕಛೇರಿ ಹಾಗೂ ಇತರೆ ಇಲಾಖೆಗಳಲ್ಲಿ ನಡೆಯುವ ಸಭೆಗಳಿಗೆ ಹಾಜರಾಗುವುದು.
02	ಶ್ರೀಮತಿ ಬಿ.ಆರ್ ಮಮತ	ಸೋಮವಾರಪೇಟೆ ತಾಲ್ಲೂಕಿನಾದ್ಯಂತ ಚಾಲ್ತಿಯಲ್ಲಿರುವ ಉಪಖನಿಜಗಳ ಗಣಿ ಗುತ್ತಿಗೆ ಪ್ರದೇಶಗಳ ತಪಾಸಣೆ ನಡೆಸಿ ವರದಿ ನೀಡುವುದು. ಮತ್ತು ತಾಲ್ಲೂಕಿನಾದ್ಯಂತ ಅಕ್ರಮ ಉಪಖನಿಜಗಳ ಗಣಿಗಾರಿಕೆ/ ಸಾಗಾಣಿಕೆ/ಸಂಗ್ರಹಣೆಯನ್ನು ತಡೆಗಟ್ಟುವುದು.
03	ಶ್ರೀ ರಾಹುಲ್ ಎಂ.ಎಸ್, ಭೂವಿಜ್ಞಾನಿ	ಸೋಮವಾರಪೇಟೆ ತಾಲ್ಲೂಕಿನಾದ್ಯಂತ ಚಾಲ್ತಿಯಲ್ಲಿರುವ ಉಪಖನಿಜಗಳ ಗಣಿ ಗುತ್ತಿಗೆ ಪ್ರದೇಶಗಳ ತಪಾಸಣೆ ನಡೆಸಿ ವರದಿ ನೀಡುವುದು. ಮತ್ತು ತಾಲ್ಲೂಕಿನಾದ್ಯಂತ ಅಕ್ರಮ ಉಪಖನಿಜಗಳ ಗಣಿಗಾರಿಕೆ/ ಸಾಗಾಣಿಕೆ/ಸಂಗ್ರಹಣೆಯನ್ನು ತಡೆಗಟ್ಟುವುದು.
04	ಕುಮಾರಿ ರೋಜಾ ಹೆಚ್.ಡಿ, ಭೂವಿಜ್ಞಾನಿ	ಮಡಿಕೇರಿ ತಾಲ್ಲೂಕಿನಾದ್ಯಂತ ತಾಲ್ಲೂಕಿನಾದ್ಯಂತ ಚಾಲ್ತಿಯಲ್ಲಿರುವ ಉಪಖನಿಜಗಳ ಗಣಿ ಗುತ್ತಿಗೆ ಪ್ರದೇಶಗಳ ತಪಾಸಣೆ ನಡೆಸಿ ವರದಿ ನೀಡುವುದು. ಮತ್ತು ತಾಲ್ಲೂಕಿನಾದ್ಯಂತ ಅಕ್ರಮ ಉಪಖನಿಜಗಳ ಗಣಿಗಾರಿಕೆ/ ಸಾಗಾಣಿಕೆ/ಸಂಗ್ರಹಣೆಯನ್ನು ತಡೆಗಟ್ಟುವುದು.
05	ಶ್ರೀ ಲೋಯಲ್ ಗ್ಲಾಡ್‌ಸನ್ ಮಿರಂದಾ, ಭೂವಿಜ್ಞಾನಿ	ವಿರಾಜಪೇಟೆ ತಾಲ್ಲೂಕಿನಾದ್ಯಂತ ಚಾಲ್ತಿಯಲ್ಲಿರುವ ಉಪಖನಿಜಗಳ ಗಣಿ ಗುತ್ತಿಗೆ ಪ್ರದೇಶಗಳ ತಪಾಸಣೆ ನಡೆಸಿ ವರದಿ ನೀಡುವುದು. ಮತ್ತು ತಾಲ್ಲೂಕಿನಾದ್ಯಂತ ಅಕ್ರಮ ಉಪಖನಿಜಗಳ ಗಣಿಗಾರಿಕೆ/ ಸಾಗಾಣಿಕೆ/ಸಂಗ್ರಹಣೆಯನ್ನು ತಡೆಗಟ್ಟುವುದು.
06	ಶ್ರೀ ಕೆ.ನಂಜುಂಡಯ್ಯ, ಅಧೀಕ್ಷಕರು	ಆಡಳಿತ ವಿಭಾಗದ ಉಸ್ತುವಾರಿ, ನಗದು ಶಾಖೆ, ನಗದು ಪುಸ್ತಕ ನಿರ್ವಹಣೆ, ಎಲ್ಲಾ ಅಧಿಕಾರಿ/ಸಿಬ್ಬಂದಿಗಳ ಸೇವಾ ಪುಸ್ತಕ ನಿರ್ವಹಣೆ, ವೈಯಕ್ತಿಕ ಕಡತಗಳ ನಿರ್ವಹಣೆ. ನ್ಯಾಯಾಲಯಗಳ ಪ್ರಕರಣಗಳ

		ನಿರ್ವಹಣೆ ಹಾಗೂ ಮಾಸಿಕ ವರದಿ ತಯಾರಿಕೆಯಲ್ಲಿ ನೆರವಾಗುವುದು. ಮಾಹಿತಿ ಹಕ್ಕು ಅರ್ಜಿಗಳ ವಿಲೆವಾರಿ. ಭದ್ರತಾ ಠೇವಣಿ ಮರುಪಾವತಿ ಬಿಲ್ಲುಗಳನ್ನು ತಯಾರಿಸುವುದು. ಕೇಂದ್ರ ಕಛೇರಿ ಪತ್ರಗಳಿಗೆ ಉತ್ತರಿಸುವುದು. ಅಪೆಂಡಿಕ್ಸ್-ಬಿ ತಯಾರಿಸುವುದು. ನಿವೃತ್ತಿ ವೇತನ ತಯಾರಿಸುವುದು. ಹೊರ ಗುತ್ತಿಗೆ ಆಧಾರದಲ್ಲಿ ಕಾರ್ಯನಿರ್ವಹಿಸುವ ನೌಕರರ ವೈಯಕ್ತಿಕ ಕಡತ ನಿರ್ವಹಿಸುವುದು. ಆಡಳಿತ, ನಗದು ಹಾಗೂ ಉಗ್ರಾಣ ವಿಭಾಗದ ಎಲ್ಲಾ ವಹಿಗಳನ್ನು ನಿರ್ವಹಿಸುವುದು. ಕಲ್ಲುಗಣಿ ಗುತ್ತಿಗೆ ಶಾಖೆ, ಅಲಂಕಾರಿಕ ಶಿಲಾ ಗಣಿ ಗುತ್ತಿಗೆ ಹಾಗೂ ಸಾಮಾನ್ಯ ಮರಳು ಶಾಖೆಗಳ ಉಸ್ತುವಾರಿ ನೋಡಿಕೊಳ್ಳುವುದು. ಹಿರಿಯ ಭೂವಿಜ್ಞಾನಿಗಳ ಆದೇಶಾನುಸಾರ ಇತರೆ ಕೆಲಸ ನಿರ್ವಹಿಸುವುದು.
07	ಶ್ರೀ ಯಂಕಪ್ಪ, ಪ್ರಥಮ ದರ್ಜೆ ಸಹಾಯಕ	ದಾಸ್ತಾನು ಶಾಖೆಯ ಕಾರ್ಯ ನಿರ್ವಹಣೆ, ರವಾನೆ ಶಾಖೆಯ ಕಾರ್ಯ ನಿರ್ವಹಣೆ, ಸ್ಟಾಂಪ್ ವಹಿ ನಿರ್ವಹಣೆ, ಆಡಳಿತ ಶಾಖೆಗೆ ಸಂಬಂಧಿಸಿದ ವಿಷಯಗಳ ಬಗ್ಗೆ ಕೇಂದ್ರ ಕಛೇರಿಗೆ ಮಾಹಿತಿ ನೀಡಲು ಅಧೀಕ್ಷಕರಿಗೆ ಸಹಕರಿಸುವುದು. ಹಿರಿಯ ಭೂವಿಜ್ಞಾನಿಯವರ ಆದೇಶಾನುಸಾರ ಇತರೆ ಕೆಲಸ ನಿರ್ವಹಿಸುವುದು.
08	ಶ್ರೀ ಸಂತೋಷ್ ಕುಮಾರ್, ಪ್ರಥಮ ದರ್ಜೆ ಸಹಾಯಕ	ಕಛೇರಿಯಲ್ಲಿ ಎಲ್ಲಾ ತರಹದ ಅಂದರೆ ವೇತನ, ಡಿ.ಸಿ, ಎ.ಸಿ, ಇಂದನ, ವಿದ್ಯುತ್‌ಚ್ಛಕ್ತಿ, ಬಾಡಿಗೆ, ಅಂಚೆ ಚೀಟಿ, ವಾಹನ ದುರಸ್ತಿ ಇತ್ಯಾದಿ ಬಿಲ್ಲುಗಳನ್ನು ತಯಾರಿಸಿ ಚೆಕ್ಕುಗಳನ್ನು ಪಡೆದು ವಿತರಿಸುವುದು. ಲ್ಯಾಗ್ ಪುಸ್ತಕಗಳ ಪರಿಶೀಲನೆ ನಡೆಸುವುದು, ಜಿಲ್ಲಾ ಖಜಾನೆಯಿಂದ ರಾಜಸ್ವ ಸಂಗ್ರಹಣೆ ಹಾಗೂ ನಮೂನೆ 62ಬಿ ಯ ಷೆಡ್ಯೂಲ್‌ಗಳನ್ನು ಪಡೆದು ಸಮನ್ವಯಗೊಳಿಸಿ ಕೇಂದ್ರ ಕಛೇರಿಗೆ ಕಳುಹಿಸುವುದು. ಪ್ರಯಾಣ ಭತ್ಯೆ ಬಿಲ್ಲುಗಳನ್ನು ತಯಾರಿಸಿ ಅನುಮೋದನೆಗೆ ಕಳುಹಿಸುವುದು. ಡಿ.ಸಿ.ಬಿ ತಯಾರಿಕೆ, ಆಡಳಿತ ಶಾಖೆಗೆ ಸಂಬಂಧಿಸಿದ ವಿಷಯಗಳ ಬಗ್ಗೆ ಕೇಂದ್ರ ಕಛೇರಿಗೆ ಮಾಹಿತಿ ನೀಡುವುದು. ಮಾಸಿಕ ಪ್ರಗತಿ ವರದಿ ತಯಾರಿಸುವುದು. ಕಲ್ಲುಗಣಿ ಗುತ್ತಿಗೆಗಳ ಮಂಜೂರಾತಿಗಾಗಿ ಅಧಿಸೂಚನೆ ಹಾಗೂ ಕರಾರು ಪುಸ್ತಕ ತಯಾರಿಸುವುದು. ಈ-ಪರವಾನಿಗೆ ಕಡತಗಳನ್ನು ನಿರ್ವಹಿಸುವುದು. ಕಲ್ಲುಗಣಿ ಗುತ್ತಿಗೆ ಶಾಖೆ , ಅಲಂಕಾರಿಕ ಶಿಲಾ ಗಣಿ ಗುತ್ತಿಗೆ ಹಾಗೂ ಸಾಮಾನ್ಯ ಮರಳು ಶಾಖೆಗಳ ಕಡತಗಳನ್ನು ನೋಡಿಕೊಳ್ಳುವುದು. ಸ್ಟಾಂಪ್ ನಿರ್ವಹಣೆ, ಸ್ವೀಕತಿ ಮತ್ತು ರವಾನೆ ಶಾಖೆಯ ಕಾರ್ಯನಿರ್ವಹಣೆ ಹಿರಿಯ ಭೂವಿಜ್ಞಾನಿಗಳ ಆದೇಶಾನುಸಾರ ಇತರೆ ಕೆಲಸ ನಿರ್ವಹಿಸುವುದು.
09	ಶ್ರೀ ಅಭಿಷೇಕ್ ಎ.ಆರ್ ದ್ವಿತೀಯ ದರ್ಜೆ ಸಹಾಯಕ	ನಗದು ಶಾಖೆ ನಿರ್ವಹಣೆ, ಮಾಹಿತಿ ಹಕ್ಕು ಅರ್ಜಿಗಳ ವಿಲೇವಾರಿಗೆ ಸಹಕರಿಸುವುದು. HRMS ಮುಖಾಂತರ ವೇತನ ಹಾಗೂ ಖಜಾನೆ-2ರ ಮುಖಾಂತರ ಡಿ.ಸಿ ಬಿಲ್ಲು, ಪ್ರಯಾಣ ಭತ್ಯೆ ಬಿಲ್ಲುಗಳನ್ನು ತಯಾರಿಸಿ ಅನುಮೋದನೆಗೆ ಕಳುಹಿಸುವುದು. ಲೆಕ್ಕ ಶೀರ್ಷಿಕೆ 0853 ಹಾಗೂ 0853 ಗೆ ನಮೂನೆ 62ಬಿ ಯ ಷೆಡ್ಯೂಲ್‌ಗಳನ್ನು ಪಡೆಯುವುದು, ಡಿ.ಸಿ.ಬಿ ತಯಾರಿಕೆ, ಆಡಳಿತ ಶಾಖೆಗೆ ಸಂಬಂಧಿಸಿದ ವಿಷಯಗಳ ಬಗ್ಗೆ ಕೇಂದ್ರ ಕಛೇರಿಗೆ ಮಾಹಿತಿ ನೀಡುವುದು. ಮಾಸಿಕ ಪ್ರಗತಿ ವರದಿ ತಯಾರಿಸುವುದು.. ಈ-ಪರವಾನಿಗೆ, ಕಲ್ಲುಗಣಿ ಗುತ್ತಿಗೆ ಶಾಖೆ, ಅಲಂಕಾರಿಕ ಶಿಲಾ ಗಣಿ ಗುತ್ತಿಗೆ ಹಾಗೂ ಸಾಮಾನ್ಯ ಮರಳು ಶಾಖೆಗಳ ನಿರ್ವಹಣೆಗೆ ಸಹಕರಿಸುವುದು. ಸ್ಟಾಂಪ್ ನಿರ್ವಹಣೆ, ಸ್ವೀಕತಿ ಮತ್ತು ರವಾನೆ ಶಾಖೆಯ ಕಾರ್ಯನಿರ್ವಹಣೆ, ಹಿರಿಯ ಭೂವಿಜ್ಞಾನಿಗಳ ಆದೇಶಾನುಸಾರ ಇತರೆ ಕೆಲಸ ನಿರ್ವಹಿಸುವುದು.

3.8 ಗ್ರಂಥಾಲಯ :

2019-20 ನೇ ಸಾಲಿನಲ್ಲಿ ಈ ಕಛೇರಿಯ ಗ್ರಂಥಾಲಯಕ್ಕೆ 08 ಪುಸ್ತಕಗಳು ಸ್ವೀಕೃತವಾಗಿರುತ್ತದೆ.

ಸಹಕಾರ ಇಲಾಖೆ

ಕೊಡಗು ಜಿಲ್ಲೆಗೆ ಸಹಕಾರ ಇಲಾಖೆಗೆ ಜಿಲ್ಲಾ ಪಂಚಾಯತ್ ಮತ್ತು ತಾಲ್ಲೂಕು ಪಂಚಾಯತ್ ಕಾರ್ಯಕ್ರಮಗಳಡಿಯಲ್ಲಿ ಈ ಕೆಳಕಂಡಂತೆ ಅಯವ್ಯಯ ಅನುದಾನವನ್ನು ಒದಗಿಸಿರುತ್ತದೆ

(ರೂ. ಲಕ್ಷಗಳಲ್ಲಿ)

ಕ್ರ. ಸಂ	ಯೋಜನೆಗಳ ಹೆಸರು	2019–20ನೇ ಸಾಲಿಗೆ ನಿಗದಿಪಡಿಸಿದ ಗುರಿ	ಗುರಿಗೆ ಎದುರಾಗಿ ಹಣ ಬಿಡುಗಡೆ ಯಾಗಿರುವುದು	ಸಾಧನೆ	ಶೇಕಡಾವಾರ ಸಾಧನೆ
1	ಜಿಲ್ಲಾ ಪಂಚಾಯತ್ ಯೋಜನೆ	9.00	9.00	9.00	ಶೇ 100%
2	ತಾಲ್ಲೂಕು ಪಂಚಾಯತ್ ಯೋಜನೆ	3.75	3.75	3.75	ಶೇ 100%

ಜಿಲ್ಲಾ ಪಂಚಾಯತ್ ಮತ್ತು ತಾಲ್ಲೂಕು ಪಂಚಾಯತ್‌ಗಳಿಂದ ಗುರಿಗೆ ಎದುರಾಗಿ ಬಿಡುಗಡೆಯಾಗಿರುವ ಹಣಕ್ಕೆ ಶೇಕಡ 100 ರಷ್ಟು ಪ್ರಗತಿ ಸಾಧಿಸಲಾಗಿದೆ.

1. ಜಿಲ್ಲಾ ಪಂಚಾಯತ್ ಯೋಜನೆ : ಜಿಲ್ಲಾ ಪಂಚಾಯತ್ ಯೋಜನೆಗಳಡಿಯಲ್ಲಿ ಈ ಕೆಳಕಂಡ ಕಾರ್ಯಕ್ರಮಗಳಿಗೆ ನಿಗಧಿಯಾಗಿರುವ ಗುರಿಗೆ ಜಿಲ್ಲಾ ಪಂಚಾಯತ್ ನಿಂದ ಬಿಡುಗಡೆಯಾಗಿರುವ ಹಣಕ್ಕೆ ಎದುರಾಗಿ ಶೇಕಡ 100 ರಷ್ಟು ಪ್ರಗತಿ ಸಾಧಿಸಲಾಗಿದೆ.

1. "ವಿವಿಧ ವರ್ಗದ ಸಹಕಾರ ಸಂಘಗಳಿಗೆ ಸಹಾಯ (ಎನ್.ಸಿ.ಡಿ.ಸಿ.ಯೋಜನೆ)"

ಈ ಕಾರ್ಯಕ್ರಮಕ್ಕೆ ಲೆಕ್ಕ ಶೀರ್ಷಿಕೆ 2425–00–101–0–28 ರಲ್ಲಿ ಆರ್ಥಿಕ ಗುರಿ ರೂ 4.50 ಲಕ್ಷ ಮತ್ತು ಭೌತಿಕ ಗುರಿ 9 ನಿಗಧಿಯಾಗಿದ್ದು, ವಾರ್ಷಿಕ ಕ್ರಿಯಾ ಯೋಜನೆಯಂತೆ ಮಡಿಕೇರಿ ತಾಲ್ಲೂಕಿಗೆ ರೂ 1.50 ಲಕ್ಷ ಸೋಮವಾರಪೇಟೆ ತಾಲ್ಲೂಕಿಗೆ ರೂ 1.50 ಲಕ್ಷ ಹಾಗೂ ವಿರಾಜಪೇಟೆ ತಾಲ್ಲೂಕಿಗೆ ರೂ 1.50 ಲಕ್ಷಗಳಂತೆ ಹಂಚಿದ್ದು, ಒಟ್ಟು ರೂ. 4.50 ಲಕ್ಷ ಸಹಾಯಧನ ಬಿಡುಗಡೆಯಾಗಿರುತ್ತದೆ.

ಮಡಿಕೇರಿ ತಾಲ್ಲೂಕಿನ 1] ನಾಪೋಕ್ಲು ಮಹಿಳಾ ಸಹಕಾರ ಸಂಘ ನಿ., ನಾಪೋಕ್ಲು ಈ ಸಂಘಕ್ಕೆ ರೂ 0.50 ಲಕ್ಷ 2] ಕೊಡಗು ಅಲ್ಪಸಂಖ್ಯಾತರ ಮಹಿಳಾ ಸಹಕಾರ ಸಂಘ ನಿ., ಮಡಿಕೇರಿ ಈ ಸಂಘಕ್ಕೆ ರೂ 0.50 ಲಕ್ಷ ಸಹಾಯಧನ 3] ಕಗ್ಗೋಡ್ಲು ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘ ನಿ., ಕಗ್ಗೋಡ್ಲು ಈ ಸಂಘಕ್ಕೆ ರೂ 0.50 ಲಕ್ಷ ಸಹಾಯಧನ ಮಂಜೂರು ಮಾಡಲಾಗಿದೆ.

ಸೋಮವಾರಪೇಟೆ ತಾಲ್ಲೂಕಿನ 1] ಕೂಡಿಗೆಕೊಪ್ಪಲು ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘ ನಿ., ಕೂಡಿಗೆಕೊಪ್ಪಲು ಈ ಸಂಘಕ್ಕೆ ರೂ 0.50 ಲಕ್ಷ, ಮತ್ತು 2] ನಂದೀಪುರ ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘ ನಿ., ನಂದೀಪುರ ಈ ಸಂಘಕ್ಕೆ ರೂ 0.50 ಲಕ್ಷ 3] ಕುಸುಬೂರು ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘ ನಿ., ಕುಸುಬೂರು ಈ ಸಂಘಕ್ಕೆ ರೂ 0.50 ಲಕ್ಷ ಸಹಾಯಧನ ಮಂಜೂರುಮಾಡಲಾಗಿದೆ.

ವಿರಾಜಪೇಟೆ ತಾಲ್ಲೂಕಿನ 1]ಬಾಡಗರಕೇರಿ ಮಹಿಳಾ ಸಹಕಾರ ಸಂಘ ನಿ., ಬಾಡಗರಕೇರಿ ಈ ಸಂಘಕ್ಕೆ ರೂ 0.50 ಲಕ್ಷ 2] ವಿರಾಜಪೇಟೆ ತಾಲ್ಲೂಕು ಅಲ್ಪಸಂಖ್ಯಾತರ ಮಹಿಳಾ ವಿವಿಧೋದ್ದೇಶ ಸಹಕಾರ ಸಂಘ ನಿ., ವಿರಾಜಪೇಟೆ ಈ ಸಂಘಕ್ಕೆ ರೂ 0.50 ಲಕ್ಷ 3]ವಿರಾಜಪೇಟೆ ಮಹಿಳಾ ಸಹಕಾರ ಸಂಘ ನಿ., ವಿರಾಜಪೇಟೆ ಈ ಸಂಘಕ್ಕೆ ರೂ 0.50 ಲಕ್ಷ ಸಹಾಯಧನ ಮಂಜೂರು ಮಾಡಿ ಗುರಿಗೆ ಎದುರಾಗಿ ಶೇಕಡ 100 ರಷ್ಟು ಪ್ರಗತಿ ಸಾಧಿಸಲಾಗಿದೆ.

2."ಇತರೆ ಸಹಕಾರಿ ಸಂಘಗಳಿಗೆ ಷೇರು ಬಂಡವಾಳ" :– ಈ ಕಾರ್ಯಕ್ರಮಕ್ಕೆ ಲೆಕ್ಕ ಶೀರ್ಷಿಕೆ 4425–00–101–0–29 ರಲ್ಲಿ ಆರ್ಥಿಕ ಗುರಿ ರೂ 4.50 ಲಕ್ಷ ಮತ್ತು ಭೌತಿಕ ಗುರಿ 9 ನಿಗಧಿಯಾಗಿದ್ದು ವಾರ್ಷಿಕ ಕ್ರಿಯಾ ಯೋಜನೆಯಂತೆ ಮಡಿಕೇರಿ ತಾಲ್ಲೂಕಿಗೆ ರೂ 1.50 ಲಕ್ಷ, ಸೋಮವಾರಪೇಟೆ ತಾಲ್ಲೂಕಿಗೆ ರೂ 1.50 ಲಕ್ಷ ಮತ್ತು ವಿರಾಜಪೇಟೆ ತಾಲ್ಲೂಕಿಗೆ ರೂ 1.50 ಲಕ್ಷಗಳಂತೆ ಹಂಚಲಾಗಿರುತ್ತದೆ. ಒಟ್ಟು ರೂ 4.50 ಲಕ್ಷ ಷೇರುಧನ

ಬಿಡುಗಡೆಯಾಗಿರುತ್ತದೆ. **ಮಡಿಕೇರಿ ತಾಲ್ಲೂಕಿನ** 1) ಕುಯ್ಯಮುಡಿ ಸಹಕಾರ ದವಸ ಭಂಡಾರ ನಿ., ಭಾಗಮಂಡಲ ಈ ಸಂಘಕ್ಕೆ ರೂ 0.50 ಲಕ್ಷ ಷೇರು ಬಂಡವಾಳವನ್ನು 2) ಮದೆನಾಡು ಸಹಕಾರ ದವಸ ಭಂಡಾರ ನಿ., ಮದೆನಾಡು ಈ ಸಂಘಕ್ಕೆ ರೂ 0.50 ಲಕ್ಷ ಷೇರು ಬಂಡವಾಳವನ್ನು 3] ನಾಪೋಕ್ಲುನಾಡು ಬಳಕೆದಾರರ ಸಹಕಾರ ಸ್ಟೋರ್ಸ್ ನಿ., ನಾಪೋಕ್ಲು ಈ ಸಂಘಕ್ಕೆ ರೂ 0.50 ಲಕ್ಷ ಷೇರು ಬಂಡವಾಳವನ್ನು ಮಂಜೂರು ಮಾಡಿದೆ. **ಸೋಮವಾರಪೇಟೆ ತಾಲ್ಲೂಕಿನ** 1) ಶ್ರೀ ಸತ್ಯನಾರಾಯಣ ಸಹಕಾರ ಧವಸ ಭಂಡಾರ ನಿ., ನೆಲ್ಲಿಹುದಿಕೇರಿ ಈ ಸಂಘಕ್ಕೆ ರೂ 0.50 ಲಕ್ಷ ಹಾಗೂ 2) ಕಾಂಡನಕೊಲ್ಲಿ ಸಹಕಾರ ಧವಸ ಭಂಡಾರ ನಿ., ಕಾಂಡನಕೊಲ್ಲಿ ಈ ಸಂಘಕ್ಕೆ ರೂ 0.50 ಲಕ್ಷ 3] ಶನಿವಾರಸಂತೆ ಸಹಕಾರ ಧವಸ ಭಂಡಾರ ನಿ., ಶನಿವಾರಸಂತೆ ಈ ಸಂಘಕ್ಕೆ ರೂ 0.50 ಲಕ್ಷ ಷೇರುಧನ ಮಂಜೂರು ಮಾಡಿದೆ.

ವಿರಾಜಪೇಟೆ ತಾಲ್ಲೂಕಿನ 1) ಬೆಕ್ಕೆಸೊಡ್ಲೂರು ಸಹಕಾರ ದವಸ ಭಂಡಾರ ನಿ., ಬೆಕ್ಕೆಸೊಡ್ಲೂರು ಈ ಸಂಘಕ್ಕೆ ರೂ 0.50 ಲಕ್ಷ ಷೇರು ಬಂಡವಾಳ 2) ಹೆಗ್ಗಳ ಭಗವತಿ ಸಹಕಾರ ಧವಸ ಭಂಡಾರ ನಿ., ಹೆಗ್ಗಳ ಈ ಸಂಘಕ್ಕೆ ರೂ 0.50 ಲಕ್ಷ ಷೇರು ಬಂಡವಾಳ ಮತ್ತು 3] ಮಹಾದೇವ ಸಹಕಾರ ಧವಸ ಭಂಡಾರ ನಿ., ತೂಚಮಕೇರಿ ಈ ಸಂಘಕ್ಕೆ ಸಂಘಕ್ಕೆ ರೂ 0.50 ಲಕ್ಷ ಷೇರು ಬಂಡವಾಳವನ್ನು ಮಂಜೂರು ಮಾಡಿ ಗುರಿಗೆ ಎದುರಾಗಿ ಶೇಕಡ 100 ರಷ್ಟು ಪ್ರಗತಿ ಸಾಧಿಸಲಾಗಿದೆ.

II ತಾಲ್ಲೂಕು ಪಂಚಾಯತ್ ಯೋಜನೆ:– ತಾಲ್ಲೂಕು ಪಂಚಾಯತ್ ಯೋಜನೆಯಡಿಯಲ್ಲಿ ಈ ಕೆಳಕಂಡ ಕಾರ್ಯಕ್ರಮಗಳಿಗೆ ನಿಗಧಿಯಾಗಿರುವ ಗುರಿಗೆ ತಾಲ್ಲೂಕು ಪಂಚಾಯತ್‌ನಿಂದ ಬಿಡುಗಡೆಯಾಗಿರುವ ಹಣಕ್ಕೆ ಎದುರಾಗಿ ಶೇಕಡ 100 ರಷ್ಟು ಪ್ರಗತಿ ಸಾಧಿಸಲಾಗಿದೆ.

1."ವಿಶೇಷ ಘಟಕ ಯೋಜನೆ–ಆಸ್ತಿ ಸೃಷ್ಟಿಗಾಗಿ ಪ್ರಾಥಮಿಕ ಸಹಕಾರ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್ ಮಂಜೂರು ಮಾಡಿದ ಸಾಲದ ಮೇಲೆ ಸಹಾಯಧನ":– ಈ ಕಾರ್ಯಕ್ರಮಕ್ಕೆ ಲೆಕ್ಕ ಶೀರ್ಷಿಕೆ 2425–00–101–0–61 ರಲ್ಲಿ ಆರ್ಥಿಕ ಗುರಿ ರೂ 3.00 ಲಕ್ಷ ಮತ್ತು ಭೌತಿಕ ಗುರಿ 10 ನಿಗಧಿಯಾಗಿದ್ದು ವಾರ್ಷಿಕ ಕ್ರಿಯಾ ಯೋಜನೆಯಂತೆ ಮಡಿಕೇರಿ ತಾಲ್ಲೂಕಿಗೆ ರೂ 0.50 ಲಕ್ಷ, ಸೋಮವಾರಪೇಟೆ ತಾಲ್ಲೂಕಿಗೆ ರೂ 2.00 ಲಕ್ಷ ಮತ್ತು ವಿರಾಜಪೇಟೆ ತಾಲ್ಲೂಕಿಗೆ ರೂ 0.50 ಲಕ್ಷಗಳಂತೆ ಹಂಚಲಾಗಿರುತ್ತದೆ. ಒಟ್ಟು ರೂ 3.00 ಲಕ್ಷ ಸಹಾಯಧನ ಬಿಡುಗಡೆಯಾಗಿರುತ್ತದೆ. ಮಡಿಕೇರಿ ತಾಲ್ಲೂಕು ಪಿಕಾರ್ಡ್ ಬ್ಯಾಂಕಿನ ಒಬ್ಬ ಅರ್ಹ ಫಲಾನುಭವಿ ಪರಿಶಿಷ್ಟ ಜಾತಿಯ ಸದಸ್ಯರಿಗೆ ಕಾಫಿ, ಕಾಳುಮೆಣಸು ಯೋಜನೆಗೆ ಒಟ್ಟು 0.50 ಲಕ್ಷ ಸಹಾಯಧನ ಮತ್ತು ಸೋಮವಾರಪೇಟೆ ತಾಲ್ಲೂಕು ಪಿಕಾರ್ಡ್ ಬ್ಯಾಂಕಿನ 6 ಅರ್ಹ ಫಲಾನುಭವಿ ಪರಿಶಿಷ್ಟ ಜಾತಿಯ ಸದಸ್ಯರಿಗೆ ಕಾಫಿ, ಕಾಳುಮೆಣಸು ಯೋಜನೆಗೆ ಒಟ್ಟು ರೂ 2.00 ಲಕ್ಷ ಸಹಾಯಧನ ಹಾಗೂ ವಿರಾಜಪೇಟೆ ತಾಲ್ಲೂಕು ಪಿಕಾರ್ಡ್ ಬ್ಯಾಂಕಿನ 2 ಫಲಾನುಭವಿ ಪರಿಶಿಷ್ಟ ಜಾತಿಯ ಸದಸ್ಯರಿಗೆ ಕಾಫಿ ಯೋಜನೆಗೆ ಒಟ್ಟು ರೂ 0.50 ಲಕ್ಷ ಸಹಾಯಧನ ಮಂಜೂರು ಮಾಡಿ ಗುರಿಗೆ ಎದುರಾಗಿ ಕ್ರಿಯಾ ಯೋಜನೆಯಡಿ ತಾಲ್ಲೂಕು ಪಂಚಾಯತ್‌ಗಳಿಂದ ಬಿಡುಗಡೆಯಾಗಿರುವ ಹಣಕ್ಕೆ ಎದುರಾಗಿ ಶೇಕಡ 100 ರಷ್ಟು ಪ್ರಗತಿ ಸಾಧಿಸಲಾಗಿದೆ.

2."ಮಹಿಳಾ ಸಹಕಾರ ಸಂಘಗಳಲ್ಲಿ ಹೂಡಿಕೆಗಳು" :– ಈ ಕಾರ್ಯಕ್ರಮಕ್ಕೆ ಲೆಕ್ಕ ಶೀರ್ಷಿಕೆ 4425–00–101–0–62 ರಲ್ಲಿ ಆರ್ಥಿಕ ಗುರಿ ರೂ 0.75 ಲಕ್ಷ ಮತ್ತು ಭೌತಿಕ ಗುರಿ 3 ನಿಗಧಿಯಾಗಿದ್ದು, ವಾರ್ಷಿಕ ಕ್ರಿಯಾ ಯೋಜನೆಯಂತೆ ಮಡಿಕೇರಿ ತಾಲ್ಲೂಕಿಗೆ ರೂ 0.25 ಲಕ್ಷ, ಸೋಮವಾರಪೇಟೆ ತಾಲ್ಲೂಕಿಗೆ ರೂ 0.25 ಲಕ್ಷ ಮತ್ತು ವಿರಾಜಪೇಟೆ ತಾಲ್ಲೂಕಿಗೆ ರೂ 0.25 ಲಕ್ಷಗಳಂತೆ ಹಂಚಲಾಗಿರುತ್ತದೆ. ಒಟ್ಟು ರೂ 0.75 ಲಕ್ಷ ಷೇರುಧನ ಬಿಡುಗಡೆಯಾಗಿರುತ್ತದೆ. ಮಡಿಕೇರಿ ತಾಲ್ಲೂಕಿನ ನಾಪೋಕ್ಲು ಮಹಿಳಾ ಸಹಕಾರ ಸಂಘ ನಿ., ನಾಪೋಕ್ಲು ಈ ಸಂಘಕ್ಕೆ ರೂ 0.25 ಲಕ್ಷ ಷೇರು ಬಂಡವಾಳ ಮತ್ತು ಸೋಮವಾರಪೇಟೆ ತಾಲ್ಲೂಕಿನ ಹಂಡ್ಲಿ ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘ ನಿ., ಹಂಡ್ಲಿ ಈ ಸಂಘಕ್ಕೆ ರೂ 0.25 ಲಕ್ಷ ಷೇರುಬಂಡವಾಳವನ್ನು ಹಾಗೂ ವಿರಾಜಪೇಟೆ ತಾಲ್ಲೂಕಿನ ಬಾಡಗರಕೇರಿ ಮಹಿಳಾ ಸಹಕಾರ ಸಂಘ ನಿ., ಬಾಡಗರಕೇರಿ ಈ ಸಂಘಕ್ಕೆ ರೂ 0.25 ಲಕ್ಷ ಷೇರು ಬಂಡವಾಳವನ್ನು ಮಂಜೂರು ಮಾಡಿ ಗುರಿಗೆ ಎದುರಾಗಿ ತಾಲ್ಲೂಕು ಪಂಚಾಯತ್‌ಗಳಿಂದ ಬಿಡುಗಡೆಯಾಗಿರುವ ಹಣಕ್ಕೆ ಎದುರಾಗಿ ಶೇಕಡ 100 ರಷ್ಟು ಪ್ರಗತಿ ಸಾಧಿಸಲಾಗಿದೆ.

ಇಲಾಖೆ : ಸಹಕಾರ

ವರ್ಷ : 2019–20 ದಿನಾಂಕ : 31–03–2020 ರಂತ್ಯಕ್ಕೆ ಇದ್ದಂತೆ

ಕ್ರ. ಸಂ.	ಯೋಜನೆ ಹೆಸರು ಹಾಗೂ ಲೆಕ್ಕಶೀರ್ಷಿಕೆ	ವಾರ್ಷಿಕ ನಿಗಧಿ	ಕಾರ್ಯಕ್ರಮ ವಾರು ನಿಗಧಿಯಾದ ಅನುದಾನ	ಜಿಲ್ಲಾ ಪಂಚಾಯತ್‌ನಿಂದ ಬಿಡುಗಡೆಯಾದ ಅನುದಾನ	31.03.2020ರ ಅಂತ್ಯಕ್ಕೆ ಖರ್ಚು	31.03.2020ರ ಅಂತ್ಯಕ್ಕೆ ಭೌತಿಕ				ಉಳಿಕೆ	ಉಳಿಕೆಯಾಗಿದ್ದಲ್ಲಿ ಯಾವ ಕಾರಣದಿಂದ ಉಳಿಕೆಯಾಗಿದೆ
						ಗುರಿ		ಸಾಧನೆ				
						ಭೌತಿಕ	ಅರ್ಥಿಕ	ಭೌತಿಕ	ಅರ್ಥಿಕ			
ಜಿಲ್ಲಾ ಪಂಚಾಯತ್												
1	ವಿವಿಧ ವರ್ಗದ ಸಹಕಾರ ಸಂಘಗಳಿಗೆ ಸಹಾಯ (ಎನ್.ಸಿ.ಡಿ.ಸಿ.ಯೋಜನೆ) (2425–00–101–0–28)	4.50	4.50	4.50	4.50	9	4.50	9	4.50	-	-
2	ಇತರೆ ಸಹಕಾರಿ ಸಂಘಗಳಿಗೆ ಷೇರು ಬಂಡವಾಳ (4425–00–101–0–29)	4.50	4.50	4.50	4.50	9	4.50	9	4.50	-	-
ಒಟ್ಟು		9.00	9.00	9.00	9.00	18	9.00	18	9.00	-	-
ತಾಲ್ಲೂಕು ಪಂಚಾಯತ್												
4	ವಿಘಯೋ– ಆಸ್ತಿಗಳ ಸೃಷ್ಟಿಗಾಗಿ ಪ್ರಾಥಮಿಕ ಸಹಕಾರ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್ ಮಂಜೂರು ಮಾಡಿದ ಸಾಲಗಳ ಮೇಲೆ ಸಹಾಯಧನ (2425–00–101–0–61)	3.00	3.00	3.00	3.00	10	3.00	9	3.00	-	-
5	ಮಹಿಳಾ ಸಹಕಾರ ಸಂಘಗಳಲ್ಲಿ ಹೂಡಿಕೆಗಳು (ಷೇರು) (4425–00–101–0–62)	0.75	0.75	0.75	0.75	3	0.75	3	0.75	-	-
ಒಟ್ಟು		3.75	3.75	3.75	3.75	13	3.75	12	3.75	-	-

ಕ್ರ.ಸಂ.	ಯೋಜನೆ ಹೆಸರು ಹಾಗೂ ಲೆಕ್ಕಶೀರ್ಷಿಕೆ	ವಾರ್ಷಿಕ ನಿಗಧಿ	ಕಾರ್ಯಕ್ರಮ ವಾರು ನಿಗಧಿಯಾದ ಅನುದಾನ	ಜಿಲ್ಲಾ ಪಂಚಾಯತ್‌ನಿಂದ ಬಿಡುಗಡೆಯಾದ ಅನುದಾನ	31.03.2020ರ ಅಂತ್ಯಕ್ಕೆ ಖರ್ಚು	31.03.2020ರ ಅಂತ್ಯಕ್ಕೆ ಭೌತಿಕ				ಉಳಿಕೆ	ಉಳಿಕೆಯಾಗಿದ್ದಲ್ಲಿ ಯಾವ ಕಾರಣದಿಂದ ಉಳಿಕೆಯಾಗಿದೆ
						ಗುರಿ		ಸಾಧನೆ				
						ಭೌತಿಕ	ಅರ್ಥಿಕ	ಭೌತಿಕ	ಅರ್ಥಿಕ			
ರಾಜ್ಯವಲಯ ಯೋಜನೆ												
8	ಹಿಂದುಳಿದ ವರ್ಗ ಹಾಗೂ ಅಲ್ಪಸಂಖ್ಯಾತರನ್ನು ಎಲ್ಲಾ ವಿಧಧ ಸಹಕಾರ ಸಂಘಗಳಲ್ಲಿ ಸದಸ್ಯರನ್ನಾಗಿ ನೋಂದಾಯಿಸಲು ಸಹಾಯಧನ 2425–00–108–0–58–106	0.60	0.60	0.60	0.60	120	0.60	120	0.60	-	-
9	ಅಲ್ಪಸಂಖ್ಯಾತರನ್ನು ಎಲ್ಲಾ ವಿಧಧ ಸಹಕಾರ ಸಂಘಗಳಲ್ಲಿ ಸದಸ್ಯರನ್ನಾಗಿ ನೋಂದಾಯಿಸಲು ಸಹಾಯಧನ 2425–00–108–0–58–106	0.90	0.90	0.90	0.90	180	0.90	220	0.796	-	-
10	ಪರಿಶಿಷ್ಟ ಜಾತಿಯವರನ್ನು ಎಲ್ಲಾ ವಿಧದ ಸಹಕಾರ ಸಂಘಗಳಲ್ಲಿ ಸದಸ್ಯರನ್ನಾಗಿ ನೋಂದಾಯಿಸಲು ಸಹಾಯಧನ	0.90	0.90	0.90	0.90	180	0.90	180	0.90	-	-
11	ಪರಿಶಿಷ್ಟ ಪಂಗಡದವರನ್ನು ಎಲ್ಲಾ ವಿಧದ ಸಹಕಾರ ಸಂಘಗಳಲ್ಲಿ ಸದಸ್ಯರನ್ನಾಗಿ ನೋಂದಾಯಿಸಲು ಸಹಾಯಧನ	0.18	0.18	0.18	0.18	36	0.18	36	0.18	-	-
12	ಮಹಿಳೆಯರನ್ನು ಎಲ್ಲಾ ವಿಧದ ಸಹಕಾರ ಸಂಘಗಳಲ್ಲಿ ಸದಸ್ಯರನ್ನಾಗಿ ನೋಂದಾಯಿಸಲು ಸಹಾಯಧನ 2425–00–108–0–72–059	2.00	2.00	1.794	1.794	378	1.794	378	1.794	-	-
13	ವಿಕಲಚೇನತರನ್ನು ಎಲ್ಲಾ ವಿಧದ ಸಹಕಾರ ಸಂಘಗಳಲ್ಲಿ ಸದಸ್ಯರನ್ನಾಗಿ ನೊಂದಾಯಿಸಲು ಸಹಾಯಧನ	0.18	0.18	0.00	0.00	36	0.18	0	0.00	-	ಅನುದಾನ ಬಿಡುಗಡೆಯಾಗಿರುವುದಿಲ್ಲ
14	ಬಡತನ ರೇಖೆಗಿಂತ ಕೆಳಗಿನವರನ್ನು (ಬಿ.ಪಿ.ಎಲ್) ಎಲ್ಲಾ ವಿಧದ ಸಹಕಾರ ಸಂಘಗಳಲ್ಲಿ ಸದಸ್ಯರನ್ನಾಗಿ ನೋಂದಾಯಿಸಲು ಸಹಾಯಧನ	1.310	1.310	1.310	1.310	262	1.310	262	1.310	-	-
	ಒಟ್ಟು	6.07	6.07	5.68	5.68	1192	5.864	1196	5.580	0.00	0.00

ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ರಾಜ್ಯ ಸರ್ಕಾರದ ಅಡಿಯಲ್ಲಿ ಕೆಲಸ ನಿರ್ವಹಿಸುತ್ತಿದ್ದು, ಜಿಲ್ಲಾ ವ್ಯಾಪ್ತಿಯಲ್ಲಿ ಕಲೆ ಹಾಗೂ ಸಂಸ್ಕೃತಿಗೆ ಹೆಚ್ಚು ಒತ್ತು ನೀಡಿ ಸಾಹಿತ್ಯಾಸಕ್ತರು ಹಾಗೂ ಕಲಾವಿದರುಗಳಿಗೆ ಪ್ರೋತ್ಸಾಹ ನೀಡುತ್ತಾ ಬಂದಿದೆ. ಜಿಲ್ಲೆಯ ಕಲಾವಿದರನ್ನು ಗುರುತಿಸಿ ಅವರ ಮೂಲಕ ಮೂಲ ಸಂಸ್ಕೃತಿಯ ಪ್ರತೀಕವಾದ ಜಾನಪದ ಕಲೆ, ಪೌರಾಣಿಕ, ಸಾಮಾಜಿಕ ಕಲೆ, ರಂಗ ಕಲೆಗಳನ್ನು ಯುವ ಪೀಳಿಗೆ ಹಾಗೂ ಮುಂದಿನ ಪೀಳಿಗೆಗೆ ಪರಿಚಯಿಸಿ ಅವುಗಳನ್ನು ಸಮುದಾಯಕ್ಕೆ ಉಳಿಸಿ ಬೆಳೆಸಲು ಸಹಕಾರ ನೀಡುತ್ತಾ ಬಂದಿದೆ. ಅಂತಹ ಕಲೆಗಳಲ್ಲಿ ಇಲಾಖೆ ಮೂಲಕ ಹಮ್ಮಿಕೊಳ್ಳಲಾಗುತ್ತಿರುವ ಕಾರ್ಯಕ್ರಮಗಳೆಂದರೆ

ರಾಜ್ಯ ವಲಯ ಕಾರ್ಯಕ್ರಮ:

1. **ಯುವ ಸೌರಭ:** ಈ ಕಾರ್ಯಕ್ರಮದಡಿ 14 ರಿಂದ 25 ವರ್ಷದೊಳಗಿರುವ ಯುವ ಕಲಾವಿದರನ್ನು ಗುರುತಿಸಿ ಪ್ರೋತ್ಸಾಹಿಸಲು ಇದೊಂದು ಉತ್ತಮ ಯೋಜನೆಯಾಗಿದೆ. ಈ ಕಾರ್ಯಕ್ರಮದಡಿ ಗಮಕವಾಚಕ, ಶಾಸ್ತ್ರೀಯ ನೃತ್ಯ, ಸುಗಮಸಂಗೀತ, ಜಾನಪದ ಸಂಗೀತ, ಕವಿಗೋಷ್ಠಿ, ನಾಟಕ, ಬೀದಿನಾಟಕ ಮುಂತಾದ ಕಾರ್ಯಕ್ರಮಗಳನ್ನು ಏರ್ಪಡಿಸಲು ಇದು ಒಳ್ಳೆಯ ಯೋಜನೆಯಾಗಿದೆ. ಈ ಕಾರ್ಯಕ್ರಮವನ್ನು 2019–20 ನೇ ಸಾಲಿನಲ್ಲಿ ದಿನಾಂಕ: 20–9–2019 ರಂದು ಸಂಪಾಜೆ ಗ್ರಾಮದಲ್ಲಿ ಏರ್ಪಡಿಸಿ ರೂ.2.72 ಲಕ್ಷಗಳ ವೆಚ್ಚ ಭರಿಸಲಾಗಿದೆ

2. **ಸಾಂಸ್ಕೃತಿಕ ಸೌರಭ:** ಈ ಕಾರ್ಯಕ್ರಮದಲ್ಲಿ ವಯಸ್ಸಿನ ತಾರತಮ್ಯ ಇರುವುದಿಲ್ಲ. ಈ ಕಾರ್ಯಕ್ರಮದಲ್ಲಿ ಶಾಸ್ತ್ರೀಯ ನೃತ್ಯ, ಸುಗಮ ಸಂಗೀತ, ಜಾನಪದ ನೃತ್ಯ, ಗಮಕವಾಚಕ, ಯಕ್ಷಗಾನ ಮುಂತಾದ ಕಲೆಗೆ ಪ್ರೋತ್ಸಾಹ ನೀಡುವುದಾಗಿದೆ. ಈ ಕಾರ್ಯಕ್ರಮವನ್ನು 2019–20 ನೇ ಸಾಲಿನಲ್ಲಿ ದಿನಾಂಕ: 27–9–2019 ರಂದು ಕುಶಾಲನಗರದಲ್ಲಿ ಏರ್ಪಡಿಸಿ ರೂ.3.23 ಲಕ್ಷಗಳ ವೆಚ್ಚ ಭರಿಸಲಾಗಿದೆ

3. **ಚಿಗುರು:** ಈ ಕಾರ್ಯಕ್ರಮದಲ್ಲಿ 8 ರಿಂದ 14 ವರ್ಷ ವಯಸ್ಸಿನ ಮಕ್ಕಳ ಸುಪ್ತ ಪ್ರತಿಭೆಯನ್ನು ಗುರುತಿಸಿ ವೇದಿಕೆಯನ್ನು ಕಲ್ಪಿಸಿ ಕೊಡುವ ನಿಟ್ಟಿನಲ್ಲಿ ಈ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗುತ್ತಿದೆ. ಇದರಲ್ಲೂ ಸಹ ಶಾಸ್ತ್ರೀಯ ನೃತ್ಯ, ಸುಗಮ ಸಂಗೀತ, ಜಾನಪದ ಸಂಗೀತ, ಕವಿಗೋಷ್ಠೀ, ಸಾಹಿತ್ಯ ಕಲೆ, ನಾಟಕಗಳನ್ನು ಪರಿಚಯಿಸುವುದಾಗಿದೆ. ಈ ಕಾರ್ಯಕ್ರಮವನ್ನು 2019–20 ನೇ ಸಾಲಿನಲ್ಲಿ ದಿನಾಂಕ: 21–12–2019 ರಂದು ಗೋಣಿಕೊಪ್ಪ ಗ್ರಾಮದಲ್ಲಿ ಏರ್ಪಡಿಸಿ ರೂ.2.21 ಲಕ್ಷಗಳ ವೆಚ್ಚ ಭರಿಸಲಾಗಿದೆ.

4. **ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ವರ್ಗದ ಕಾರ್ಯಕ್ರಮಗಳು:** ಈ ಯೋಜನೆಯಲ್ಲಿ ಪ.ಜಾತಿ ಹಾಗೂ ಪ.ವರ್ಗದ ಕಲಾವಿದರನ್ನು ಪ್ರೋತ್ಸಾಹಿಸಲು ಪ್ರಾಯೋಜಿತ ಕಾರ್ಯಕ್ರಮಗಳನ್ನು ನೀಡಲಾಗುತ್ತಿದೆ. ಪೌರಾಣಿಕ, ಸಾಮಾಜಿಕ ನಾಟಕ ಯಕ್ಷಗಾನ ಮುಂತಾದ ಕಾರ್ಯಕ್ರಮಗಳಿಗೆ ಧನಸಹಾಯ ನೀಡಲಾಗುತ್ತಿದೆ. ಅಲ್ಲದೆ ವಾದ್ಯ ಪರಿಕರಗಳನ್ನು ಕೊಳ್ಳುವ ಅಸಂಘಟಿತ ಕಲಾವಿದರುಗಳಿಗೆ ಧನಸಹಾಯವನ್ನು ಮೂಲಕ ನೀಡಲಾಗುತ್ತಿದೆ.

5. **ಜಿಲ್ಲಾ ಪಂಚಾಯಿತಿ ಮೂಲಕ** ನೀಡಲ್ಪಡುವ ಬಯಲು ರಂಗಮಂದಿರ ನಿರ್ಮಾಣಕ್ಕಾಗಿ ಸಹಾಯಧನ ನೀಡುವ ಯೋಜನೆಯಿದ್ದು, ಬಯಲು ರಂಗಮಂದಿರ ಕೋರಿ ಬಂದ ಅರ್ಜಿಗಳಿಗೆ ಅನುದಾನದ ಲಭಿಸಲಿದ್ದು, ಅರ್ಜಿಯೊಂದಿಗೆ ನೀಲಿ ನಕಾಶೆ, ಅಂದಾಜು ವೆಚ್ಚಪಟ್ಟಿಯನ್ನು ಕೂಡ ಲಗತ್ತಿಸಬೇಕು.

6. **ಪ್ರಾಯೋಜಿತ ಕಾರ್ಯಕ್ರಮದಡಿ** ವಿವಿಧ ಕಾರ್ಯಕ್ರಮಗಳನ್ನು ಏರ್ಪಡಿಸಿದ ಕಲಾವಿದರಿಗೆ ಸಂಭಾವನೆಯನ್ನು ಕೆ 2 ಮೂಲಕ ನೀಡಲಾಗುತ್ತಿದೆ.

2019–20ನೇ ಸಾಲಿನ ಬಯಲು ರಂಗಮಂದಿರ ವಿವರಗಳು

ಜಿಲ್ಲಾ ಪಂಚಾಯಿತಿ ಕಾರ್ಯಕ್ರಮ

ಕ್ರ.ಸಂ	ವಿವರ	ಮೊಬಲಗು ರೂ.
1.	ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಅನ್ನೂರ್ ಪೆರಾಜೆ ಮಡಿಕೇರಿ ತಾಲ್ಲೂಕು	3.00 ಲಕ್ಷ
2.	ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಎಡಪಾಲ, ಮಡಿಕೇರಿ ತಾಲ್ಲೂಕು	3.00 ಲಕ್ಷ
3.	ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ನಾಪೋಕ್ಲು ಮಡಿಕೇರಿ ತಾಲ್ಲೂಕು	3.00 ಲಕ್ಷ
4.	ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ತೋಳೂರು ಶೆಟ್ಟಳ್ಳಿ, ಸೋಮವಾರಪೇಟೆ ತಾಲ್ಲೂಕು	3.00 ಲಕ್ಷ
5.	ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ,ದೊಡ್ಡಕೊಡ್ಲಿ, ಸೋಮವಾರಪೇಟೆ ತಾಲ್ಲೂಕು (ಮುಂದುವರೆದ ಕಾಮಗಾರಿ)	2.00 ಲಕ್ಷ
6	ಸರ್ಕಾರಿ ಪದವಿ ಪೂರ್ವ ಕಾಲೇಜು, ಶಿರಂಗಾಲ, ಸೋಮವಾರಪೇಟೆ ತಾಲ್ಲೂಕು	5.00 ಲಕ್ಷ
7.	ಸರ್ಕಾರಿ ಮಾದರಿ ಪ್ರಾಥಮಿಕ ಶಾಲೆ, ಸುಂಟಿಕೊಪ್ಪ, ಸೋಮವಾರಪೇಟೆ ತಾಲ್ಲೂಕು	2.00 ಲಕ್ಷ
8.	ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ,ನಾಲ್ಕೇರಿ ಹೆಮ್ಮಾಡು, ವಿರಾಜಪೇಟೆ ತಾಲ್ಲೂಕು	4.00 ಲಕ್ಷ
9.	ಸರ್ಕಾರಿ ಪ್ರಾಥಮಿಕ ಶಾಲೆ,ದೇವಣಗೇರಿ, ವಿರಾಜಪೇಟೆ ತಾಲ್ಲೂಕು	3.00 ಲಕ್ಷ
10.	ಸರ್ಕಾರಿ ಪ್ರಾಥಮಿಕ ಶಾಲೆ, ಚೆನ್ನಂಗಿ, ವಿರಾಜಪೇಟೆ ತಾಲ್ಲೂಕು	3.00 ಲಕ್ಷ
	ಒಟ್ಟು	**31.00 ಲಕ್ಷ**

ಸೋಮವಾರಪೇಟೆ ತಾಲ್ಲೂಕಿನ ಅಂಕಿ ಅಂಶಗಳ ಸಾಮಾನ್ಯ ವಿವರ

1.	ತಾಲ್ಲೂಕಿನ ಭೌಗೋಳಿಕ ವಿಸ್ತೀರ್ಣ	: 999 ಚ.ಕಿ.ಮೀ
2.	ಒಟ್ಟು ಜನ ಸಂಖ್ಯೆ: (2011 ರ ಜನಸಂಖ್ಯೆ)	: 206505
3.	ಪರಿಶಿಷ್ಟ ಜಾತಿ ಸಂಖ್ಯೆ	: 34527
4.	ಪರಿಶಿಷ್ಟ ಪಂಗಡ ಜನಸಂಖ್ಯೆ	: 10537
5.	ಹೋಬಳಿಗಳು	: 6
6.	ಗ್ರಾಮ ಪಂಚಾಯಿತಿ ಸದಸ್ಯರ ಸಂಖ್ಯೆ	: 483
7.	1) 2011 ರ ಜನಗಣತಿ ಪ್ರಕಾರ ಜನವಸತಿ ಇರುವ ಗ್ರಾಮಗಳು)	: 130
	2) ಜನವಸತಿ ಇಲ್ಲದ ಗ್ರಾಮಗಳು	: 5
8.	ಸಾಕ್ಷರತೆ ಪ್ರಮಾಣ ಸಾಮಾನ್ಯ ಗಂಡಸರು: ಶೇಖಡಾ	: 87.41
	ಹೆಂಗಸರು: ಶೇಖಡಾ	: 75.81
	ಸರಾಸರಿ ಶೇಖಡಾ	: 81.52

ತಾಲ್ಲೂಕು ಪಂಚಾಯಿತಿ ಸದಸ್ಯರುಗಳ ವಿವರ

ಪುಷ್ಪಾರಾಜೇಶ್	ಅಧ್ಯಕ್ಷರು
ಅಭಿಮನ್ಯು ಕುಮಾರ್ ಎಂ ಬಿ	ಉಪಾಧ್ಯಕ್ಷರು
ಕುಸುಮ ಸಿ ಎ	ಸದಸ್ಯರು
ಸಬಿತ ಚೆನ್ನಕೇಶವ	ಸದಸ್ಯರು
ಅನಂತಕುಮಾರ್ ಜಿ ಬಿ	ಸದಸ್ಯರು
ಚಂಗಪ್ಪ ಎಂ ಕೆ	ಸದಸ್ಯರು
ಹೆಚ್ ಬಿ ಕುಶಾಲಪ್ಪ	ಸದಸ್ಯರು
ಧರ್ಮಪ್ಪ ಬಿ ಎ	ಸದಸ್ಯರು
ಬಿ ಬಿ ಸತೀಶ್	ಸದಸ್ಯರು
ಬಿ ಈ ಸವಿತಾ ಈರಪ್ಪ	ಸದಸ್ಯರು

ಎನ್ ಎಸ್ ಜಯಣ್ಣ	ಸದಸ್ಯರು
ಗಣೇಶ್ ಡಿ ಎಸ್	ಸದಸ್ಯರು
ಎಸ್ ಎಂ ಲೀಲಾವತಿ	ಸದಸ್ಯರು
ಮಣಿ ಹೆಚ್ ಡಿ	ಸದಸ್ಯರು
ವಿಮಲಾವತಿ ಒ ಎಸ್	ಸದಸ್ಯರು
ತಂಗಮ್ಮ	ಸದಸ್ಯರು
ಸುಹಾದಅಶ್ರಫ್	ಸದಸ್ಯರು
ಆರ್ ಪುಷ್ಪಾ	ಸದಸ್ಯರು
ಬಲ್ಲಾರಂಡ ಮಣಿ ಉತ್ತಪ್ಪ	ಸದಸ್ಯರು

ತಾಲ್ಲೂಕು ಪಂಚಾಯಿತಿಯ ಸ್ಥಾಯಿ ಸಮಿತಿಗಳ ವಿವರ

ಹಣಕಾಸು ಸ್ಥಾಯಿ ಸಮಿತಿ	
ಪುಷ್ಪಾ ರಾಜೇಶ	ಅಧ್ಯಕ್ಷರು
ವಿಜುಚಂಗಪ್ಪ	ಸದಸ್ಯರು
ಆರ್ ಪುಷ್ಪಾ	ಸದಸ್ಯರು
ಎನ್ ಎಸ್ ಜಯಣ್ಣ	ಸದಸ್ಯರು
ಕುಸುಮ ಸಿ ಎ	ಸದಸ್ಯರು
ಬಿ ಈ ಸವಿತಾಈರಪ್ಪ	ಸದಸ್ಯರು

ಸಾಮಾಜಿಕ ನ್ಯಾಯ ಸಮಿತಿ	
ಹೆಚ್ಎನ್ ತಂಗಮ್ಮ ಅಧ್ಯಕ್ಷರು	
ಬಲ್ಲಾರಂಡಮಣಿಉತ್ತಪ್ಪ	ಸದಸ್ಯರು
ಮಣಿ ಹೆಚ್ ಡಿ	ಸದಸ್ಯರು
ಹೆಚ್ ಬಿ ಕುಶಾಲಪ್ಪ	ಸದಸ್ಯರು
ಅನಂತ ಕುಮಾರ್ ಜಿ ಬಿ	ಸದಸ್ಯರು
ಸಬಿತಚೆನ್ನಕೇಶವ	ಸದಸ್ಯರು

ಸಾಮಾನ್ಯ ಸ್ಥಾಯಿ ಸಮಿತಿ	
ಅಭಿಮನ್ಯುಕುಮಾರ್ ಎಂ ಬಿ ಅಧ್ಯಕ್ಷರು	
ವಿಮಲಾವತಿ ಒ ಎಸ್	ಸದಸ್ಯರು
ಗಣೇಶ್ ಡಿ ಎಸ್	ಸದಸ್ಯರು
ಸುಹಾದಅಶ್ರಫ್	ಸದಸ್ಯರು
ಎಸ್ ಎಂ ಲೀಲಾವತಿ	ಸದಸ್ಯರು
ಬಿ ಬಿ ಸತೀಶ್	ಸದಸ್ಯರು
ಧರ್ಮಪ್ಪ ಬಿ ಎ	ಸದಸ್ಯರು

ತಾಲ್ಲೂಕು ಪಂಚಾಯತ್ ಸಭೆಗಳ ವಿವರ

ಒಟ್ಟು ಸದಸ್ಯರ ಸಂಖ್ಯೆ			
ಕ್ರ ಸಂ	ಸ್ಥಾಯಿ ಸಮಿತಿ ಸಭೆಗಳ ವಿವರ	ದಿನಾಂಕ	ಒಟ್ಟು ಹಾಜರಾದ ಸದಸ್ಯರುಗಳು
1.	ಸಾಮಾನ್ಯ ಸ್ಥಾಯಿ ಸಮಿತಿ	04-06-2019 26-09-2019 01-10-2019	4 5 4
2.	ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ	06-06-2019 30-07-2019	3 4
3.	ಹಣಕಾಸು ಲೆಕ್ಕಪರಿಶೋದನಾ ಮತ್ತು ಯೋಜನಾ ಸ್ಥಾಯಿ ಸಮಿತಿ	04-06-2019 30-07-2019 01-10-2019	3 4 3
4.	ತಾಲ್ಲೂಕು ಪಂಚಾಯತ್ ಸಾಮಾನ್ಯ ಸಭೆಗಳು	20-06-2019 06-08-2019 15-10-2019 17-12-2019 08-02-2020	17 17 19 17 19

ಚುನಾಯಿತಸದಸ್ಯರ ಸಂಖ್ಯೆ

ಅಧ್ಯಕ್ಷರಹೆಸರು	ಶ್ರೀಮತಿ ಪುಷ್ಪಾರಾಜೇಶ್
ಉಪಾಧ್ಯಕ್ಷರಹೆಸರು	ಶ್ರೀ ಅಭಿಮನ್ಯುಕುಮಾರ್ ಎಂ ಬಿ
ಕಾರ್ಯನಿರ್ವಾಹಕಅಧಿಕಾರಿಹೆಸರು	ಶ್ರೀ ಸುನೀಲ್ ಕುಮಾರ್ ಡಿ ಬಿ
ಸಾಮಾನ್ಯಸಭೆಗಳು	5

ಕ್ರ ಸಂ	ಸಿಬ್ಬಂಧಿಗಳವಿವರ	ಮಂಜೂರಾದ ಹುದ್ದೆಗಳ ಸಂಖ್ಯೆ	ಭರ್ತಿಯಾದ ಹುದ್ದೆಗಳು	ಖಾಲಿ ಹುದ್ದೆಗಳು	ಷರಾ
1.	ಕಾರ್ಯನಿರ್ವಾಹಕಅಧಿಕಾರಿ	1	1	0	
2.	ಸಹಾಯಕನಿರ್ದೇಶಕರು ಗ್ರಾ ಉ	1	1	0	
3.	ತಾಲ್ಲೂಕುಯೋಜನಾಧಿಕಾರಿ	1	1	0	
4.	ಸಹಾಯಕಲೆಕ್ಕಾಧಿಕಾರಿ	1	0	1	
5.	ವ್ಯವಸ್ಥಾಪಕರು	1	0	1	
6.	ಸಹಾಯಕಇಂಜಿನಿಯರ್	2	2	0	
7.	ಪಂಚಾಯಿತಿಅಭಿವೃದ್ಧಿಅಧಿಕಾರಿ	40	36	4	
8.	ಪ್ರಗತಿಸಹಾಯಕ	1	0	1	
9.	ಪ್ರಥಮದರ್ಜೆಸಹಾಯಕರು	2	1	1	
10	ಶೀಘ್ರಲಿಪಿಗಾರರು	1	0	1	
11	ಪ್ರಥಮದರ್ಜೆಲೆಕ್ಕಸಹಾಯಕರು	2	0	2	
12	ದ್ವಿತೀಯದರ್ಜೆಸಹಾಯಕರು	2	1	1	
13	ಬೆರಳಚ್ಚುಗಾರ	2	0	2	
14	ವಾಹನಚಾಲಕರು	2	0	2	
15	ಜವಾನರು	4	1	3	
	ಒಟ್ಟು	**63**	**44**	**19**	

ಗ್ರಾಮ ಪಂಚಾಯಿತಿಗಳ ಹುದ್ದೆಗಳ ವಿವರ

ಕ್ರ ಸಂ	ಸಿಬ್ಬಂಧಿಗಳವಿವರ	ಮಂಜೂರಾದ ಹುದ್ದೆಗಳ ಸಂಖ್ಯೆ	ಭರ್ತಿಯಾದ ಹುದ್ದೆಗಳು	ಖಾಲಿ ಹುದ್ದೆಗಳು
1.	ಕಾರ್ಯದರ್ಶಿ ಗ್ರೇಡ್	13	7	6
2.	ಕಾರ್ಯದರ್ಶಿ ಗ್ರೇಡ್	27	21	6
3.	ದ್ವಿ ದ ಲೆ ಸ	14	9	5
	ಒಟ್ಟು	**54**	**37**	**17**

ಗ್ರಾಮೀಣಾಭಿವೃದ್ಧಿ ವಸತಿ ಯೋಜನೆಗಳು

ಯೋಜನೆ	ಗುರಿ	ಸಾಧನೆ	ಫಲಾನುಭವಿಗಳು				ಒಟ್ಟು
			ಪ ಜಾತಿ	ಪ ವರ್ಗ	ಅಲ್ಪಸಂಖ್ಯಾತರು	ಇತರೆ	
ಪುನರ್ವಸತಿಯೋಜನೆ 2019	652	104	78	18	150	406	652

ಸದಸ್ಯರು

ನಮೂನೆ -1

ವರ್ಷ	ಜನಸಂಖ್ಯೆ ರ ಜನಗಣತಿಯಂತೆ	ಕ್ಷೇತ್ರಗಳ ಸಂಖ್ಯೆ	ಮಂಜೂರಾದ ಮೀಸಲು ಕ್ಷೇತ್ರಗಳ ಸಂಖ್ಯೆ			ಮೀಸಲಾತಿ ಇಲ್ಲದ್ದು	ಒಟ್ಟು	ವರ್ಷ	ನೇ ಮಾರ್ಚ್ ರಲ್ಲಿ ಸದಸ್ಯರ ಸಂಖ್ಯೆ			ಜಿಲ್ಲಾಪಂಚಾಯಿತಿಗೆ ಮು ಕಾ ನಿ ಇದ್ದಾರೆಯೇ
			ಪ ಜಾತಿ ಪ ಪಂ	ಮಹಿಳೆ	ಪುರುಷ							
1	2	3	4	5	6	6	7	8	9	11	12	13
2019-20	206505	19	3/1	10	3	6	19	2019-20	3/1	10	9	ಹೌದು

ಚುನಾವಣೆಗಳು

ನಮೂನೆ -2

ವರ್ಷ	ಒಟ್ಟುಚುನಾವಣೆಗಳ ಸಂಖ್ಯೆಮೀಸಲಿರಿಸಿದ್ದು ಮೀಸಲಿರಿಸದಿದ್ದದ್ದು	ಸ್ಪರ್ದೆಇರದಚುನಾವಣೆಗಳ ಸಂಖ್ಯೆಮೀಸಲಿರಿಸಿದ್ದು ಮೀಸಲಿರಿಸದಿದ್ದದ್ದು	ಹುದ್ದೆಗಳಸಂಖ್ಯೆ ಮೀಸಲಿರಿಸಿದ್ದು ಮೀಸಲಿರಿಸದಿದ್ದದ್ದು	ಅಭ್ಯರ್ಥಿಗಳ ಸಂಖ್ಯೆ	ಒಟ್ಟು ಮತಗಳಸಂಖ್ಯೆ	ಚಲಾವಣೆಯಾದ ಸಂಖ್ಯೆ	ಶೇಖಡಾವಾರು ಅಂಕಣದಮೇಲೆ	ಷರಾ
2019-20	-							

ಸಭೆಗಳುಸೋಮವಾರಪೇಟೆತಾಲ್ಲೂಕುಪಂಚಾಯಿತಿ

ನಮೂನೆ -3	ಸಭೆಗಳಸಂಖ್ಯೆಗಳು				ಮಂಜೂರಾದ ಸಂಖ್ಯೆಗೆ ಪ್ರತಿಯಾಗಿ ಪ್ರತಿ ಸಭೆಯಲ್ಲಿ ಹಾಜರಾದ ಸದಸ್ಯರ ಸರಾಸರಿ ಶೇಖಡಾವಾರು		ಷರಾ
